Swabhimani Sahakari
Pages : 32 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸೌಹಾರ್ದ ಸಹಕಾರಿ ಕಾಯ್ದೆಯ
ರಜತ ಮಹೋತ್ಸವ 2025

Volume - 22
Issue - 07
July- 2025

ರಾಜ್ಯದ ಎಲ್ಲೆಡೆ
ಉತ್ತಮ ಮುಂಗಾರು ಮಳೆ...
ಬಹುತೇಕ ಅಣೆಕಟ್ಟೆಗಳು
ಅವಧಿ ಮುನ್ನವೇ ಭರ್ತಿ...
ಭೋರ್ಗರೆಯುತ್ತಿರುವ
ಜಲಪಾತಗಳು...



#COOPSDAY

**2025 ಜುಲೈ 5**
103ನೇ ಅಂತರರಾಷ್ಟ್ರೀಯ
ಸಹಕಾರ ದಿನ

**ಧ್ಯೇಯ: ಉತ್ತಮ ಜಗತ್ತಿಗಾಗಿ ಸಮಗ್ರ ಮತ್ತು ಸುಸ್ಥಿರ ಪರಿಹಾರಗಳನ್ನು ಚಾಲನೆ ಮಾಡುವುದು**

## ಸಹಕಾರಿಗಳಿಗೆ ಸಂಭ್ರಮ



ಜುಲೈ 06
**ಮೊಹರಂ**



ಜುಲೈ 10
**ಗುರು ಪೂರ್ಣಿಮ**



ಜುಲೈ 24
**ಭೀಮನ ಅಮಾವಾಸೆ**

ಸೌಹಾರ್ದ ಸಹಕಾರಿಗಳ ಸಂಖ್ಯೆ: 6527

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1727

ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರ ಕಾಯ್ದೆಯ ರಜತ ಮಹೋತ್ಸವ 2025



# ಸಹಕಾರಿ ಸಂಸ್ಥೆಗಳು ಸೇವೆಯ ಜೊತೆಗೆ ಉತ್ತಮ ಆರ್ಥಿಕ ಘಟಕಗಳಾಗಿ ಕಾರ್ಯನಿರ್ವಹಿಸುವುದು ಅಗತ್ಯ.



ಜಿ. ನಂಜನಗೌಡ

"ರಾಜ್ಯದ ಎಲ್ಲಾ ಸಹಕಾರಿ ಬಂಧುಗಳಿಗೆ ಹೃದಯಪೂರ್ವಕ ನಮಸ್ಕಾರಗಳು. ಅಂತರಾಷ್ಟ್ರೀಯ ಸಹಕಾರಿ ದಿನ 2025, ಮೋಹರಂ ಕೊನೆದಿನ, ಗುರುಪೂರ್ಣಿಮ, ಭೀಮನ ಅಮಾವಾಸ್ಯೆ ಹಬ್ಬಗಳ ಹಾರ್ದಿಕ ಶುಭಾಶಯಗಳು. ಭಾರತದ ಸಹಕಾರ ಕ್ಷೇತ್ರಕ್ಕೆ 121 ವರ್ಷಗಳ ಇತಿಹಾಸ. ಸಹಕಾರ ಕ್ಷೇತ್ರದ ಪ್ರಾರಂಭದ ದಿನಗಳಿಂದಲೂ ಸದಸ್ಯರ ಬೇಡಿಕೆಗಳಿಗೆ ಸ್ಪಂದಿಸುವ, "ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ" ಎಂಬ ಸಹಕಾರದ ಮೂಲ ತತ್ವದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದೆ. ಲಾಭಕ್ಕೆ ಮಹತ್ವವಿರುವುದು ನಿಜವಾದರೂ ಸಹಕಾರಿ ಸಂಸ್ಥೆಗಳಲ್ಲಿ ಸೇವೆಗೆ ಪ್ರಥಮ ಆದ್ಯತೆ ನೀಡಲಾಗುತ್ತಿದೆ."

ರಾಜ್ಯದ ಎಲ್ಲಾ ಸಹಕಾರಿ ಬಂಧುಗಳಿಗೆ ಹೃದಯಪೂರ್ವಕ ನಮಸ್ಕಾರಗಳು. ಅಂತರಾಷ್ಟ್ರೀಯ ಸಹಕಾರಿ ದಿನ 2025, ಮೋಹರಂ ಕೊನೆದಿನ, ಗುರುಪೂರ್ಣಿಮ, ಭೀಮನ ಅಮಾವಾಸ್ಯೆ ಹಬ್ಬಗಳ ಹಾರ್ದಿಕ ಶುಭಾಶಯಗಳು. ಭಾರತದ ಸಹಕಾರ ಕ್ಷೇತ್ರಕ್ಕೆ 121 ವರ್ಷಗಳ ಇತಿಹಾಸ. ಸಹಕಾರ ಕ್ಷೇತ್ರದ ಪ್ರಾರಂಭದ ದಿನಗಳಿಂದಲೂ ಸದಸ್ಯರ ಬೇಡಿಕೆಗಳಿಗೆ ಸ್ಪಂದಿಸುವ, "ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ" ಎಂಬ ಸಹಕಾರದ ಮೂಲ ತತ್ವದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದೆ. ಲಾಭಕ್ಕೆ ಮಹತ್ವವಿರುವುದು ನಿಜವಾದರೂ ಸಹಕಾರಿ ಸಂಸ್ಥೆಗಳಲ್ಲಿ ಸೇವೆಗೆ ಪ್ರಥಮ ಆದ್ಯತೆ ನೀಡಲಾಗುತ್ತಿದೆ. ದಿನಗಳು ಕಳೆದಂತೆ ಸಹಕಾರಿ ಕ್ಷೇತ್ರ ತನ್ನ ಕಾರ್ಯವ್ಯಾಪ್ತಿಯನ್ನು ಸಮಾಜದ ಎಲ್ಲಾ ವರ್ಗಗಳಲ್ಲಿ, ಎಲ್ಲಾ ಆಯಾಮಗಳಲ್ಲೂ ಆವರಿಸಿಕೊಳ್ಳುತ್ತಿದೆ. 'ಆಡು ಮುಟ್ಟದ ಸೊಪ್ಪಿಲ್ಲ ಸಹಕಾರ ಕ್ಷೇತ್ರ ವ್ಯಾಪಿಸದ ವ್ಯವಹಾರ–ವ್ಯವಾಟಿನ ಕ್ಷೇತ್ರವಿಲ್ಲ'. ಹೀಗಾಗಿ ನಮ್ಮ ದೇಶದ ಸಹಕಾರ ಚಳುವಳಿ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ಭಾರತದ ಸಹಕಾರ ಚಳುವಳಿ ವಿಶ್ವದಲ್ಲಿಯೇ ದೊಡ್ಡದು ಎಂಬುದು ಹೆಮ್ಮೆಯ ವಿಷಯ.

ಕೃಷಿ ಪತ್ತಿನ ಸಹಕಾರ ಸಂಘಗಳು ಉತ್ತಮವಾಗಿ ಕಾರ್ಯನಿರ್ವಹಿಸುವ ಮೂಲಕ ಹಸಿರು ಕ್ರಾಂತಿಯ ಹರಿಕಾರರಾಗಿ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗಿದೆ. ಹಾಲು ಉತ್ಪಾದಕರ ಸಹಕಾರ ಸಂಘಗಳು ಶ್ವೇತ ಕ್ರಾಂತಿಯ ಮೂಲಕ ರೈತರ ಆರ್ಥಿಕ ಅಭಿವೃದ್ಧಿಗಾಗಿ, ಕೃಷಿಯ ಜೊತೆಗೆ ಪ್ರಮುಖ ಉಪಕಸುಬಾಗಿ ರೈತರು ಹೆಚ್ಚು ಉತ್ಸಾಹದಿಂದ ಕೃಷಿ ಮಾಡಲು ನೆರವಾಗಿದೆ. ಇಂದು ವಿಶ್ವದಲ್ಲಿ ಹಾಲು ಉತ್ಪಾದನೆಯಲ್ಲಿ ಭಾರತ ಒಂದನೇಯ ಸ್ಥಾನದಲ್ಲಿದೆ. ನಗರ ಹಾಗೂ ಅರೆ ಪಟ್ಟಣ ನಿವಾಸಿಗಳ ಆರ್ಥಿಕ ಅಭಿವೃದ್ಧಿಗಾಗಿ ಪಟ್ಟಣ ಸಹಕಾರ ಬ್ಯಾಂಕುಗಳು, ಪತ್ತಿನ ಸಹಕಾರ ಸಂಘಗಳು ವಸತಿ ಸಹಕಾರ ಸಂಘಗಳು, ಗ್ರಾಹಕರ ಸಹಕಾರ ಸಂಘಗಳು, ಮಾರಾಟ ಸಹಕಾರ ಸಂಘಗಳು, ಮಹಿಳೆಯರ ಸಹಕಾರ ಸಂಘಗಳು, ಕೈಗಾರಿಕಾ ಸಹಕಾರ ಸಂಘಗಳು ಹೀಗೆ ಎಲ್ಲ ವಿಭಾಗದಲ್ಲೂ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. 2001 ರಿಂದ ಪ್ರಾರಂಭವಾಗಿರುವ ಸೌಹಾರ್ದ ಸಹಕಾರ ಸಂಘಗಳು ದೇಶದ ಸಹಕಾರಿ ಚಳುವಳಿಯನ್ನು ಭದ್ರವಾಗಿ ಬೆಳೆಸುತ್ತಿರುವುದು ದೇಶದ ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಗೆ ನೆರವಾಗುತ್ತಿರುವುದು ಸಂತೋಷ ಹಾಗೂ ಶ್ಲಾಘನೀಯ ವಿಷಯ.

ಇವೆಲ್ಲ ಸಾಧನೆಗಳ ಅಧ್ಯಯನ ಮಾಡಿದಾಗ ಸಹಕಾರ ಕ್ಷೇತ್ರ ಉತ್ತಮ ಸಾಧನೆ ಮಾಡಿದೆ ಎಂಬುದು ನಿರ್ವಿವಾದ. ಸಾಧಿಸಿದ್ದು ಸಾಕಷ್ಟಾಗಿದ್ದರೆ ಸಾಧಿಸಬೇಕಾದದ್ದು ಬೆಟ್ಟದಷ್ಟಿದೆ. ಆದ್ದರಿಂದ ಇದಕ್ಕೆ ನಮ್ಮ ಸಹಕಾರ ಸಂಸ್ಥೆಗಳು ವಿಶೇಷವಾಗಿ ಸೌಹಾರ್ದ ಸಹಕಾರಿ ಸಂಸ್ಥೆಗಳು ಸೇವಾ ವಿಷಯಗಳಿಗೆ ಆದ್ಯತೆ ನೀಡುವುದರ ಜೊತೆಗೆ ಲಾಭ ಗಳಿಸುವಿಕೆಗೆ ಆದ್ಯತೆ ನೀಡಬೇಕು. ಸೌಹಾರ್ದ ಸಹಕಾರಿ ಸಂಸ್ಥೆಗಳು ಉತ್ತಮ ಆರ್ಥಿಕ ಸಂಸ್ಥೆಗಳಾಗಿ, ಕಾರ್ಯನಿರ್ವಹಿಸುವುದು ಇಂದಿನ ಅವಶ್ಯಕತೆ. ನಿರಂತರ ಬರುವ ಸವಾಲುಗಳನ್ನು ಮೆಟ್ಟಿ ನಿಂತು ಉತ್ತಮ ಆರ್ಥಿಕ ಘಟಕಗಳಾಗಿ ಬೆಳೆಯೋಣ ದೇಶದ ಸುಸ್ಥಿರ ಅಭಿವೃದ್ಧಿಯಲ್ಲಿ ಪಾಲುದಾರರಾಗೋಣ. ಸಹಕಾರಿ ಸಂಸ್ಥೆಯಲ್ಲಿ ಆರ್ಥಿಕ ಗುಣಮಟ್ಟ ಸುಧಾರಣೆಗೆ ಆದ್ಯತೆಯನ್ನು ನೀಡಿದಾಗ ಸಹಕಾರ ರಜತ ಮಹೋತ್ಸವ ಆಚರಣೆಯ ಮೂಲ ಉದ್ದೇಶಕ್ಕೆ ಸ್ಪಂದಿಸಿದಂತಾಗುತ್ತದೆ. ಸೌಹಾರ್ದ ಸಹಕಾರಿಗಳ ಬೆಳವಣಿಗೆ ಹಾಗೂ ಸಾಧನೆಗಳು ಸಹ ತಾವೇ ತಾವಾಗಿ ಹೆಚ್ಚುತ್ತವೆ. ಈ ಸೌಹಾರ್ದ ಸಹಕಾರಿ ಕ್ಷೇತ್ರ ಹೆಚ್ಚು ಗುಣಾತ್ಮಕವಾಗಿ ಆರ್ಥಿಕವಾಗಿ ಸದೃಢವಾಗಿ ಬೆಳೆಯಲು ಸಾಕಷ್ಟು ಅವಕಾಶಗಳಿವೆ. ಅವುಗಳನ್ನು ಉಪಯೋಗಿಸಿಕೊಂಡು ಕ್ರಿಯಾಶೀಲರಾಗಿ ಬೆಳೆಯಲು ಹೊಸ ಹೊಸ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಸಮಾಜಮುಖಿ ಕಾರ್ಯಗಳ ಜೊತೆ ಆರ್ಥಿಕ ಘಟಕಗಳಾಗಿ ಪ್ರಗತಿಯನ್ನು ಸಾಧಿಸುತ್ತೀರೆಂದು ಆಶಿಸುತ್ತೇನೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

## ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.............................................. 2
ಸಂಪಾದಕೀಯ.............................................. 3
ಜ್ಞಾನ ಜ್ಯೋತಿ.............................................. 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ...................................................... 05–24
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ...................................................... 25–25
**ಲೇಖನಗಳು :**
ಸೌಹಾರ್ದ ಸಹಕಾರಿಗಳಲ್ಲಿ ಲೆಕ್ಕಪರಿಶೋಧನಾ ಪೂರ್ವಸಿದ್ಧತೆ ................................ 26–28
ಮುಖ್ಯ ಕಾರ್ಯನಿರ್ವಾಹಕನ ಕರ್ತವ್ಯ ಜವಾಬ್ದಾರಿಗಳು ................................ 29–32

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳ ಮೂಲಕ ಸಾಮಾನ್ಯ ಸೇವಾ ಕೇಂದ್ರಗಳ ಕಾರ್ಯನಿರ್ವಹಣೆಗೆ ಉಡುಪಿ ಜಿಲ್ಲೆಯಲ್ಲಿ ಚಾಲನೆ. ಉಳಿದ ಜಿಲ್ಲೆಗಳು ಅನುಸರಿಸಲು ಕ್ರಮ ಅಗತ್ಯ.

ರಾಜ್ಯದ ಸೌಹಾರ್ದ ಸಹಕಾರಿಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಬೆಳೆಯಬೇಕು. ಆರ್ಥಿಕ ಚಟುವಟಿಕೆಗಳ ಕೇಂದ್ರಗಳಾಗಿ ಕಾರ್ಯನಿರ್ವಹಿಸಬೇಕು. ಸದಸ್ಯರ ಹಾಗೂ ಸಾರ್ವಜನಿಕರ ಎಲ್ಲ ಬೇಕು ಬೇಡಿಕೆಗಳಿಗೆ ಸ್ಪಂದಿಸುವ ಹಾಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಮಾದರಿ ಸಹಕಾರಿ ಸಂಸ್ಥೆಗಳಾಗಿರಬೇಕು ಬೇರೆ ಸಂಸ್ಥೆಗಳಿಗೆ ಮಾರ್ಗದರ್ಶನ ಮಾಡುವಂತಿರಬೇಕು ಎಂಬುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಅಪೇಕ್ಷೆ. ಈ ನಿಟ್ಟಿನಲ್ಲಿ ಪ್ರಾರಂಭದಿಂದಲೂ ಸಂಯುಕ್ತ ಸಹಕಾರಿ ರಾಜ್ಯ ಸೌಹಾರ್ದ ಸಹಕಾರಿಗಳಿಗೆ ಅನೇಕ ಬಡ್ಡಿಯೇತರ ಆದಾಯಗಳ ವ್ಯವಹಾರ ನಿರ್ವಹಿಸುವಂತೆ ಮಾರ್ಗದರ್ಶನ ಮಾಡುತ್ತ ಬಂದಿದೆ.

ಹಲವಾರು ಸೌಹಾರ್ದ ಸಹಕಾರಿಗಳು ಸದಸ್ಯರಿಗೆ ವಿವಿಧ ಸೇವೆಗಳನು ನೀಡುತ್ತಿವೆ. ಕೇಂದ್ರ ಸರಕಾರದ, ರಾಜ್ಯ ಸರಕಾರದ, ವಿಮಾ ಸಂಸ್ಥೆಗಳ ಮತ್ತು ಭಾರತೀಯ ರೇಲ್ವೆ ಸೇವೆಗಳು ಹೀಗೆ ಹಲವಾರು ಸಾಮಾನ್ಯ ಸೇವೆಗಳನ್ನು ಒದಗಿಸುವ ಸಂಸ್ಥೆಯೊಂದು 2006 ರಿಂದ "ಸಾಮಾನ್ಯ ಸೇವಾ ಕೇಂದ್ರಗಳು" ಎಂಬ ಹೆಸರಿನ ಸಂಸ್ಥೆಯು ಕಾರ್ಯನಿರ್ವಹಿಸುತ್ತಿದೆ. ಸಂಯುಕ್ತ ಸಹಕಾರಿಯು ಈ ಸಂಸ್ಥೆಯ ಜೊತೆಗೆ ಒಪ್ಪಂದ ಮಾಡಿಕೊಂಡು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಮೂಲಕ ಈ ಸಂಸ್ಥೆಯ ಎಲ್ಲ ವಿಧವಾದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವಂತೆ ಕ್ರಮವಿಡಲು ಆಲೋಚಿಸುತ್ತಿದೆ. ಪ್ರಾರಂಭದ ಹಂತದಲ್ಲಿ ಪ್ರಾಯೋಗಿಕವಾಗಿ ಉಡುಪಿ ಜಿಲ್ಲೆಯಲ್ಲಿ ದಿನಾಂಕ 23.06.2025ರಂದು ಈ ಸಂಸ್ಥೆಯ ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ಕಾರ್ಯಕ್ರಮದಲ್ಲಿ ಈ ಸಂಸ್ಥೆಯ ಪ್ರಮುಖರು ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ನಿರ್ದೇಶಕರು ಭಾಗವಹಿಸಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಮಾರ್ಗದರ್ಶನಗಳನ್ನು ಮಾಡಿರುವುದು ಸಂತೋಷದ ವಿಷಯ. ಇ ಗವರ್ನೆಸ್ ಯೋಜನೆಯಡಿಯಲ್ಲಿ ಕೇಂದ್ರ ಸರಕಾರದ ಸುಮಾರು 300 ವಿವಿಧ ರೀತಿಯ ಸೇವೆಗಳನ್ನು ಒದಗಿಸುತ್ತಲಿದೆ. ಈ ಯೋಜನೆಗಳು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಬಡ್ಡಿಯೇತರ ಆದಾಯಗಳನ್ನು ನಿರಂತರವಾಗಿ ಒದಗಿಸುವುದರ ಜೊತೆಗೆ ಸಹಕಾರಿಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸಲು ಪೂರಕವಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳ ಸಂಖ್ಯೆಯಲ್ಲಿ ಹಾಗೂ ಗುಣಾತ್ಮಕವಾಗಿಯೂ ಬೆಳವಣಿಗೆ ಸಾಧ್ಯ ಎಂದು ತಿಳಿಯಬಹುದಾಗಿದೆ. ಸಂಯುಕ್ತ ಸಹಕಾರಿಯ ಅಧಿಕಾರಿಗಳು ಈ ಯೋಜನೆಯ ಕಾರ್ಯಚಟುವಟಿಕೆಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡು ತಮ್ಮ ವ್ಯಾಪ್ತಿಯ ಸೌಹಾರ್ದ ಸಹಕಾರಿಗಳಿಗೆ ಅರ್ಥ ಮಾಡಿಸಿ ಈ ಯೋಜನೆಯನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುವಂತೆ ಪ್ರೇರೇಪಿಸುವ ಕಾರ್ಯನಿರ್ವಹಿಸಬೇಕು. ರಾಜ್ಯದ ಸೌಹಾರ್ದ ಸಹಕಾರಿಗಳ ಉತ್ತಮ ಕಾರ್ಯಚಟುವಟಿಕೆಗಳಿಗೆ ಇದೊಂದು ನಾಂದಿಯಾಗಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿ ಅಧಿಕಾರಿಗಳು ಕಾರ್ಯನಿರ್ವಹಿಸುವುದು ಅಗತ್ಯ.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಆಸೆಯ ಕುದುರೆ" ಭಾಗ-1

ನಮ್ಮ ಬದುಕು ನಿಸರ್ಗದ ಕಾಣಿಕೆ. ನೂರು ವರುಷದ ಬದುಕಿಗೆ ಬೇಕಾದುದೆಲ್ಲವೂ ಇಲ್ಲಿದೆ. ನೆಲ, ನೀರು, ಗಾಳಿ, ಬೆಳಕು, ಬಯಲು ಈ ಪಂಚಮಹಾಭೂತಗಳಿಂದಾದ ಈ ಜಗತ್ತಿನಲ್ಲಿ ಯಾವುದಕ್ಕೇನೂ ಕೊರತೆ ಇಲ್ಲ. ಶಬ್ದ, ಸ್ಪರ್ಶ, ರೂಪ, ರಸ, ಗಂಧ ಈ ಪಂಚ ವಿಷಯಗಳಿಂದ ಕೂಡಿ ಈ ಪ್ರಪಂಚವು ಆಗಿದೆ. ನೂರು ವರುಷಗಳವರೆಗೆ ಅನುಭವಿಸಿದರೂ ಮುಗಿಯದಂಥ ವಿಷಯಗಳು ಇಲ್ಲಿವೆ. ನಿಜವಾಗಿಯೂ ಸೃಷ್ಟಿಯ ಪಂಚದ್ಭರಿತ: ಅನುಭವದ ಅಕ್ಷಯ ಪಾತ್ರೆ!.

ನಮ್ಮ ಈ ದೇಹದಲ್ಲಿ ಹೊರಗೆ ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಚೆ ಹೀಗೆ ಅಂಚ ಜ್ಞಾನೇಂದ್ರಿಯಗಳೀವೆ. ಸಮಸ್ತ ಪ್ರಪಂಚವನ್ನೇ ಅನುಭವಿಸುವ, ಆನಂದಿಸುವ ಸಾಮರ್ಥ್ಯ ಈ ಜ್ಞಾನೇಂದ್ರಿಯಗಳಿಗೆ ನಿಸರ್ಗ ನೀಡಿದೆ. ಈ ದೇಹದೊಳಗೆ ಸಮಸ್ತ ಪ್ರಪಂಚವನ್ನೇ ಅನುಭವಿಸುವ ಮನಸ್ಸು, ಅರಿಯುವ ಬುದ್ಧಿ, ಸ್ಮರಿಸುವ ಚಿತ್ತು, ಅಭಿಮಾನಿಸುವ ಆನಂದಿಸುವ ಅಹಂ ಎಂಬ ನಾಲ್ಕು ಅಂತರೇಂದ್ರಿಯಗಳಿವೆ. ಸಿರಿವಂತ–ರಿಗೆ–ಬಡವರಿಗೆ, ಕಲಿತವರಿಗೆ–ಕಲಿಯದವರಿಗೆ, ದೇಶ–ವಿದೇಶದವರಿಗೆ ಎಲ್ಲರಿಗೂ ಈ ಸುಂದರ ದೇಹವನ್ನು ದೇವರು ಕರುಣಿಸಿದ್ದಾನೆ. ಈ ತನು–ಮನ–ಬುದ್ಧಿಯನ್ನು ಬಳಸಿಕೊಂಡು ಈ ವಿಶಾಲ ವಿಶ್ವದಲ್ಲಿ ನಾವು ಚೆನ್ನಾಗಿ ಬದುಕಿದರೆ ನಮ್ಮ ಜೀವನ ಸಮೃದ್ಧವಾಗುತ್ತದೆ. ಸಾರ್ಥಕವಾಗುತ್ತದೆ.

ಜಪಾನ ದೇಶದಲ್ಲಿ ನಡೆದ ಒಂದು ಘಟನೆ. ಓರ್ವವ್ಯಕ್ತಿಯು ಬೌದ್ಧ ಧರ್ಮದ ಝೆನ್ ಗುರುಗಳ ಹತ್ತಿರ ಬಂದು ಹೇಳಿದ – "ನನ್ನಲ್ಲಿ ಒಂದೆರಡು ಪ್ರಶ್ನೆಗಳಿವೆ, ಅವುಗಳಿಗೆ ತಾವು ಸಮರ್ಪಕ ಉತ್ತರ ನೀಡಿದರೆ ನಾನು ತಮ್ಮ ಶಿಷ್ಯವಾಗಬೇಕೆಂದು ಬಯಸಿದ್ದೇನೆ" ಝೆನ್ ಗುರುಗಳು ಕೇಳಿದರು – "ನಿನ್ನ ಪ್ರಶ್ನೆಗಳು ಯಾವವು?" ವ್ಯಕ್ತಿ – ಸಾವಿನ ನಂತರದ ಜೀವನದ ಕುರಿತು ಹೇಳಬಲ್ಲಿರಾ?" ಝೆನ್ ಗುರು– 'ಇಲ್ಲ ನನಗೆ ಗೊತ್ತಿಲ್ಲ!" ವ್ಯಕ್ತಿ – "ಕನಿಷ್ಠ ಸಾವಿನ ಕುರಿತಾದರೂ ಹೇಳಬಲ್ಲಿರಾ?" ಝೆನ್‌ಗುರು – "ನಾನು ಸಾಯಲು ಕಲಿಸುವವನಲ್ಲ, ಬದುಕಲು ಕಲಿಸುವವನು. ಬದುಕನ್ನು ಸಮೃದ್ಧಗೊಳಿಸಲು, ಸುಂದರಗೊಳಿಸಲು ಕಲಿಸುವವನ!" ಈ ಮಾತನ್ನು ಕೇಳುತ್ತಲೇ ತನ್ನ ತಪ್ಪಿನ ಅರಿವಾಗಿ ಆ ವ್ಯಕ್ತಿಯು ಕ್ಷಮೆಯನ್ನು ಕೇಳಿ ಆ ಝೆನ್ ಗುರುಗಳ ಪರಮಶಿಷ್ಯನಾದ!

ಮನುಷ್ಯನು ಸಾಯುವುದಕ್ಕೆ ಏನು ಸಾಧನೆ ಮಾಡಬೇಕಾಗಿಲ್ಲ. ನಾವು ಸುಮ್ಮನಿದ್ದರೂ ಸಾವು ತಾನೇ ಬರುತ್ತದೆ. ಬದುಕಲು ಕಲಿತವನಿಗೆ ಸಾವೇ ಇಲ್ಲ. ಸಾವಿನ ಚಿಂತೆಯೂ ಇಲ್ಲ! ನಮ್ಮ ಋಷಿಗಳು ನಮ್ಮನ್ನು "ಅಮೃತಸ್ಯ ಪುತ್ರಾಃ" ಎಂದು ಕರೆದಿರುವರು. ನಾವು ಪರಮ ಸತ್ಯ ಪರಮಾತ್ಮನ ಮಕ್ಕಳು. ಆದ್ದರಿಂದ ನಮಗೆ ಜನನ–ಮರಣವಿಲ್ಲ. ಆಸೆ–ಆಮಿಷಗಳಿಲ್ಲ. ನಾವು ನಿರಂಜನರು–ನಿತ್ಯತೃಪ್ತರು. ಇದೇ ಅಮೃತಾನಂದ.

ಜಗತ್‌ಪ್ರಸಿದ್ಧ ನಾಟಕಕಾರನಾದ ಶೆಕ್ಸ್ಪೀಯರನು ತನ್ನಪ್ರಸಿದ್ಧ ನಾಟಕ ಒಂದರಲ್ಲಿ ಒಬ್ಬ ವ್ಯಕ್ತಿಯಿಂದ ಈ ಮಾತನ್ನು ಹೇಳಿಸುತ್ತಾನೆ. "ನಾನೂ ಒಬ್ಬ ಮಹಾರಾಜನೆ. ನನ್ನ ರಾಜ್ಯವು ನನ್ನ ಎದೆಯೊಳಗಿದೆ. ಸಂತೃಪಿಯೇ ನನ್ನ ಕಿರೀಟ! ಹೊರಗಿನ ರಾಜ್ಯಗಳು ಅಳಿಯುತ್ತವೆ ನನ್ನ ರಾಜ್ಯವು ಎಂದೂ ಅಳಿಯುವುದಿಲ್ಲ!" ನಿಜವಾಗಿಯೂ ಹಸನಾದ ಹೃದಯವೇ ನಮ್ಮ ಸುಂದರ ಸಾಮಾಜ್ಯ. ಸಂತೃಪ್ತಿಯೇ ನಮ್ಮ ಕಿರೀಟ. ಆದ್ದರಿಂದ ನಮ್ಮ ಜೀವನೇ ಸದಾ ಸುಖಮಯ, ಆನಂದಮಯ!.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಜೂನ್–25ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 1173 | 436 | 462 | 277 | 2348 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 101 | 182 | 132 | 80 | 495 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 271 | 109 | 93 | 117 | 590 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 1003 | 509 | 501 | 240 | 2253 |
| ಜೂನ್ 2025ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 495 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 590 | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7147 | 1259 | 2122 | 748 | 11276 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1053 | 231 | 502 | 156 | 1942 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6094 | 1028 | 1620 | 592 | 9334 |
| ಜೂನ್ 2025ರ ತಿಂಗಳಿನಲ್ಲಿ ಒಟ್ಟು 210 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ. | | | | | | |

## 103ನೇ ಅಂತರರಾಷ್ಟ್ರೀಯ ಸಹಕಾರ ದಿನ - 05ನೇ ಜುಲೈ 2025

### 2025 ಧ್ಯೇಯ – "ಉತ್ತಮ ಜಗತ್ತಿಗಾಗಿ ಸಮಗ್ರ ಮತ್ತು ಸುಸ್ಥಿರ ಪರಿಹಾರಗಳನ್ನು ಚಾಲನೆ ಮಾಡುವುದು."

ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು ವಿಶ್ವದ ಸಹಕಾರಿ ಸಂಸ್ಥೆಗಳು ಪ್ರತಿ ವರ್ಷ ಜುಲೈ ಮೊದಲನೇ ಶನಿವಾರದಂದು ಅಂತರರಾಷ್ಟ್ರೀಯ ಸಹಕಾರ ದಿನವಾಗಿ ಆಚರಿಸಲು ಕರೆ ನೀಡುತ್ತ ಬಂದಿದ್ದಾರೆ. ಈ ದಿನದಂದು ವಿಶ್ವದ ಸಹಕಾರಿಗಳಲ್ಲಿ ಅವರವರ ಸಂಸ್ಥೆಗಳಲ್ಲಿ ಸಹಕಾರಿ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಾರ್ವಜನಿಕರಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿ ಮೂಡಿಸುವಂತಹ ಪ್ರಯತ್ನ ನಡೆದಿದೆ. ಐಸಿಎ ನವರು "ಉತ್ತಮ ಜಗತ್ತಿಗಾಗಿ ಸಮಗ್ರ ಮತ್ತು ಸುಸ್ಥಿರ ಪರಿಹಾರಗಳನ್ನು ಚಾಲನೆ ಮಾಡುವುದು" ಎಂಬುದನ್ನು ದೃಢೀಕರಿಸಲು ಈ ವರ್ಷ ಸಹಕಾರಿ ದಿನವನ್ನು ಆಚರಣೆ ಮಾಡುವುದರ ಮೂಲಕ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿಯನ್ನು ಮೂಡಿಸುವುದರ ಮೂಲಕ ಮತ್ತು ಸಹಕಾರ ಸಂಸ್ಥೆಗಳನ್ನು ಬಲಪಡಿಸುವುದರ ಮೂಲಕ ಸಹಕಾರಿ ಕ್ಷೇತ್ರಕ್ಕೆ ಯಶಸ್ಸನ್ನು ಕೋರಿದ್ದಾರೆ.

**International Day of Cooperatives 2025**

**Theme : "Driving Inclusive and Sustainable Solutions for a Better World."**

## ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 24ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಆಗಸ್ಟ್ ತಿಂಗಳ 3ನೇ ಅಥವಾ 4ನೇ ವಾರದಲ್ಲಿ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಗಾಗುವುದು. ರಾಜ್ಯದ ಸೌಹಾರ್ದ ಸಹಕಾರಿಗಳು ಗಮನಿಸಲು ಕೋರಿದೆ.

## ಸದಸ್ಯರ ಹಾಗೂ ಸಮಾಜದ ಅಭಿವೃದ್ಧಿಯ ಜೊತೆಗೆ ನೌಕರರ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಕಾಳಜಿ ಮತ್ತು ಉಪಸಿಬ್ಬಂದಿ ಹಾಗೂ ವಾಹನ ಚಾಲಕರಿಗೆ ವಿದೇಶ ಪ್ರವಾಸ ಸೌಲಭ್ಯ - ಶ್ರೀ ಸಿರೀಶ್ ದೇಶಪಾಂಡೆ



**ಬೆಂಗಳೂರು** : ದಿನಾಂಕ 26.06.2025ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಕೇಂದ್ರ ಕಛೇರಿಗೆ ಬುಲ್ಡಾನ ಅರ್ಬನ್ ಕೋ–ಆಪರೇಟಿವ್ ಸೊಸೈಟಿ ಲಿ., ಹಾಗೂ ಬುಲ್ಡಾನ ವಿವಿಧ ಚಟುವಟಿಕೆಗಳ ಸಲಹೆಗಾರರು ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸಿರೀಶ್ ದೇಶಪಾಂಡೆ ಹಾಗೂ ಡಾ. ಗೋವಿಂದ ಕುಲಕರ್ಣಿ, ರಾಷ್ಟ್ರೀಯ ಅಧ್ಯಕ್ಷರು, ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘ ಇವರು ಭೇಟಿ ನೀಡಿದ್ದರು. ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆ ಕುರಿತು ಸೌಹಾರ್ದ ಸಹಕಾರಿಯ ನೊಂದಣಿ, ಧ್ಯೇಯ, ಉದ್ದೇಶ ಬೆಳವಣಿಗೆಯ ಕುರಿತು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ವಿವರಿಸಿದರು.

ನಂತರ ಮಾತನಾಡಿದ ಶ್ರೀ ಸಿರೀಶ್ ದೇಶಪಾಂಡೆಯವರು ಸಹಕಾರ ಕ್ಷೇತ್ರ ಸಮಾಜದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಬದ್ಧತೆಯನ್ನು ಹೊಂದಿದೆ. ಬುಲ್ಡಾನ ಈ ದಿಸೆಯಲ್ಲಿ ಆರ್ಥಿಕ ಅಭಿವೃದ್ಧಿಯ ಜೊತೆಗೆ ಹಲವಾರು ಸಾಮಾಜಿಕ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಸಂಸ್ಥೆಯು ಸದಸ್ಯರ ಸರ್ವತೋಮುಖ ಅಭಿವೃದ್ಧಿಯ ಗುರಿ ಹೊಂದುವುದರ ಜೊತೆಗೆ ಸಂಸ್ಥೆಯ 476 ಶಾಖೆಗಳನ್ನು ಹೊಂದಿದೆ. 09 ರಾಜ್ಯಗಳಲ್ಲಿ ಕಾರ್ಯವ್ಯಾಪ್ತಿಯಿದೆ. 15 ಲಕ್ಷ ರೈತರಿಗೆ ಸಾಲ ನೀಡಿದೆ. 5000 ಜನ ಸಿಬ್ಬಂದಿಯವರಿಗೆ ಉತ್ತಮ ಸಂಬಳ ಹಾಗೂ ಅನೇಕ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಉಪಸಿಬ್ಬಂದಿ ಹಾಗೂ ವಾಹನ ಚಾಲಕರಿಗೂ ವಿದೇಶ ಪ್ರವಾಸಗಳನ್ನು ಹಮ್ಮಿಕೊಂಡು ಪ್ರೋತ್ಸಾಹಿಸಲಾಗುತ್ತಿದೆ ಎಂದು ತಿಳಿಸಿದರು.

ಬುಲ್ಡಾನ ಸಹಕಾರಿ ಸಂಸ್ಥೆಗೆ ಭೇಟಿಯನ್ನು ಮಾಡಲು ಮನವಿಯನ್ನು ಮಾಡಿದರು. ನಂತರದಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಅತಿಥಿಗಳಿಗೆ ಸನ್ಮಾನವನ್ನು ನೆರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರು, ಸಹ ಪ್ರಧಾನ ವ್ಯವಸ್ಥಾಪಕರು, ಹಿರಿಯ ಅಧಿಕಾರಿಗಳು, ಅಧಿಕಾರಿಗಳು, ಸಿಬ್ಬಂದಿಗಳು ಭಾಗವಹಿಸಿದ್ದರು.

## ಸಹಕಾರ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಮೊಹಮ್ಮದ್ ಮೊಹಸಿನ್ ಇವರ ಭೇಟಿ




**ಬೆಂಗಳೂರು :** ದಿನಾಂಕ 19.06.2025 ರಂದು ಕರ್ನಾಟಕ ಸರಕಾರದ, ಸಹಕಾರ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಮೊಹಮ್ಮದ್ ಮೊಹಸಿನ್ ರವರನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಮತ್ತು ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಧರ ರವರು ಭೇಟಿ ಮಾಡಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಮುಂದಿನ ದಿನಗಳಲ್ಲಿ ಸೌಹಾರ್ದ ಸಂಯುಕ್ತ ಸಹಕಾರಿ ಕಛೇರಿಗೆ ಭೇಟಿ ನೀಡುವುದಾಗಿ ತಿಳಿಸಿದರು

## ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ "ಯುವಜನ ಹಾಗೂ ಸಹಕಾರ" ಸಂವಾದ ಕಾರ್ಯಕ್ರಮ




**ದಾವಣಗೆರೆ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ 10ನೇ ಜೂನ್ 2025ರಂದು ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇಲ್ಲಿ ಯುವಜನ ಹಾಗೂ ಸಹಕಾರ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಂವಾದ ಕಾರ್ಯಕ್ರಮದಲ್ಲಿ 270ಕ್ಕೂ ಹೆಚ್ಚು ವಿದ್ಯಾರ್ಥಿ\ವಿದಾರ್ಥಿನಿಯರು ಭಾಗವಹಿಸಿದರು.



### ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಯುವಕರ ಪಾತ್ರ ಮುಖ್ಯವಾಗಿದೆ ವಿದ್ಯಾರ್ಥಿಗಳ ಶಿಕ್ಷಣಕ್ಕೂ ಸಹಕಾರಿ ಸಂಸ್ಥೆಗಳು ಸಾಲದ ನೆರವು ನೀಡಲಿ

### : ಪ್ರೊ. ಬಿ. ಡಿ. ಕುಂಬಾರ, ಮಾನ್ಯ ಕುಲಪತಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ.

ಕಾರ್ಯಕ್ರಮದ ಉದ್ಘಾಟನೆಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ ಬಿ. ಡಿ. ಕುಂಬಾರ ಇವರು ನೆರವೇರಿಸಿದರು. ಯುವಕರಿಗಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಹೆಚ್ಚಿನ ಯೋಜನೆಗಳನ್ನು ನೀಡುತ್ತಿದೆ ಅದೇ ರೀತಿ ಸಹಕಾರ ಕ್ಷೇತ್ರದಲ್ಲಿಯೂ ಸಹ ಯುವಕರಿಗೆ ಹೆಚ್ಚಿನ ಅವಕಾಶಗಳಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಸಹಕಾರ ಕ್ಷೇತ್ರಕ್ಕೆ ಬಂದು ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾತ್ರ ವಹಿಸುವಂತಾಗಬೇಕೆಂದು ತಿಳಿಸಿದರು. ಯುವಕರು ಸಹಕಾರಿ ಸಂಘಗಳನ್ನು ಪ್ರಾರಂಭಿಸಿ ಆಸಕ್ತಿಯಿಂದ, ನಿಷ್ಠೆಯಿಂದ ಕಾರ್ಯನಿರ್ವಹಿಸಿ ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುವಂತಾಗಬೇಕು ಎಂದು ತಿಳಿಸಿದರು. ರಾಷ್ಟ್ರೀಕೃತ ಬ್ಯಾಂಕುಗಳು ಹಾಗೂ ಇತರೆ ಬ್ಯಾಂಕುಗಳು ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಿ ನೆರವು ನೀಡುವಂತೆ ಸಹಕಾರಿ ಸಂಸ್ಥೆಗಳು ಸಹ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವು ನೀಡುವಂತ್ತಾಗಲಿ ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯು ಹಮ್ಮಿಕೊಂಡಿರುವ ಈ ಸಂವಾದ ಕಾರ್ಯಕ್ರಮ ಅಭಿನಂದನೀಯವಾಗಿದೆ ಎಂದು ಹೇಳಿದರು.

## ಸಹಕಾರಿ ಚಳುವಳಿ ಸದಸ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಸಾಧನ : ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



ಯುವಕರು ಹಾಗೂ ಸಂವಾದ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ಇವರು ವಹಿಸಿಕೊಂಡಿದ್ದರು. ಯುವಕರು ಹಾಗೂ ಮಹಿಳೆಯರು ಸಹಕಾರ ಕ್ಷೇತ್ರ ಮುಖ್ಯ ವಾಹಿನಿಯಾಗಿ ಕಾರ್ಯನಿರ್ಹಿಸುತ್ತಿದೆ. ಯುವಕರಿಗೆ ಸಹಕಾರ ಸಂಸ್ಥೆಗಳನ್ನು ಪ್ರಾರಂಭಿಸಲು ಪ್ರೋತ್ಸಾಹ ನೀಡಬೇಕು, ಸಹಕಾರ ಕ್ಷೇತ್ರದಲ್ಲಿ ಯುವಕರು ಹೆಚ್ಚು ಉತ್ಸಾಹದಿಂದ, ನಿಷ್ಠೆಯಿಂದ ಕಾರ್ಯನಿರ್ಹಿಸವಂತಾಗಬೇಕು ಎಂದು ತಿಳಿಸಿದರು. ಯುವಕರು ಮತ್ತು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರ ಕ್ಷೇತ್ರಕ್ಕೆ ಬಂದರೆ ಸಹಕಾರ ಕ್ಷೇತ್ರ ಇನ್ನೂ ಹೆಚ್ಚಿನ ಮಟ್ಟದಲ್ಲಿ ಬೆಳೆಯುತ್ತದೆ. ಸಹಕಾರಿ ಕ್ಷೇತ್ರ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದ್ದು ಸಹಕಾರ ಕ್ಷೇತ್ರದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ತಿಳಿಸಿದರು.



## ಯುವಕರಿಂದ ಹೊಸ ಕಲ್ಪನೆಗಳ, ಹೊಸ ಅಪೇಕ್ಷೆಗಳ ಅನ್ವೇಷಣೆ ಸಾಧ್ಯ: ಶ್ರೀ ಎಂ.ಆರ್. ಪ್ರಭುದೇವ್, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಎಂ.ಆರ್. ಪ್ರಭುದೇವ್ ರವರು ಸಹಕಾರ ಕ್ಷೇತ್ರದಲ್ಲಿ ಯುವಕರು ಪಾಲ್ಗೊಳುವುದರಿಂದ ನೂತನ ವಿಷಯಗಳ, ನೂತನ ವಿಚಾರಗಳ ಚಿಂತನೆಗಳು ತಿಳಿಯಲು ಸಾಧ್ಯವಾಗುತ್ತವೆ. ಸಹಕಾರಿ ಕ್ಷೇತ್ರದಲ್ಲಿ ಯುವಕರಿಗೆ ವಿಫಲವಾದ ಅವಕಾಶಗಳಿವೆ ಯುವಕರು ಈ ಸದವಾಕಾಶವನ್ನು ಉಪಯೋಗಿಸಿಕೊಂಡು ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಅಭವೃದ್ಧಿಗೆ ಹಾಗೂ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಕಾರಣರಾಗಬೇಕು ಎಂದು ತಿಳಿಸಿದರು.

**ಮುಖ್ಯ ಅತಿಥಿಗಳು :** ಯುವಜನ ಹಾಗೂ ಸಹಕಾರ ಸಂವಾದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಎಂ. ಆರ್. ಪ್ರಭುದೇವ್, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಶ್ರೀ ಶಬ್ಬೀರ್ ಬಾಷ ಗಂಟಿ, ಕೆ.ಎ.ಎಸ್, ಮಾನ್ಯ ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ, ಪ್ರೊ ಸುಚಿತ್ರ ಎಸ್, ಮಾನ್ಯ ಡಿನರು, ಕಲಾ ನಿಕಾಯ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ, ಡಾ. ಹುಚ್ಚೇಗೌಡ, ಪ್ರಾಧ್ಯಾಪಕರು & ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ, ಶ್ರೀ ದ್ಯಾಮನಗೌಡ ಮುದ್ದನಗೌಡ್ರು, ಮಾನ್ಯ ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರು ಭಾಗವಹಿಸಿದ್ದರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಶ್ರೀ ಶರಣಗೌಡ ಜಿ ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅತಿಥಿ ಗಣ್ಯರನ್ನು ಶ್ರೀ ಶ್ರೀಧರ್, ಮಾನ್ಯ ಸಹ ಪ್ರಧಾನ ವ್ಯವಸ್ಥಾಪಕರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ಸ್ವಾಗತಿಸಿದರು.

**ಉಪನ್ಯಾಸ ಕಾರ್ಯಕ್ರಮ :** ಉದ್ಘಾಟನಾ ಕಾರ್ಯಕ್ರಮದ ನಂತರದಲ್ಲಿ ಸಹಕಾರ ಕ್ಷೇತ್ರದ ಪರಿಚಯ ಹಾಗೂ ಯುವಕರು ಎಂಬ ವಿಷಯದ ಕುರಿತು ಶ್ರೀ ಶ್ರೀನಾಥ, ಮಾನ್ಯ ನಿರ್ದೇಶಕರು (ನಿ), ಎನ್.ಸಿ.ಯು.ಐ., ನವದೆಹಲಿ ಇವರು ಉಪನ್ಯಾಸ ನೀಡಿದರು.

## ಸಂವಾದ ಕಾರ್ಯಕ್ರಮ




ಉಪನ್ಯಾಸ ಕಾರ್ಯಕ್ರಮದ ನಂತರದಲ್ಲಿ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ಇವರು ವಹಿಸಿಕೊಂಡಿದ್ದರು.

ಶ್ರೀ ಬಸವಂತಪ್ಪ, ಮಾನ್ಯ ಸಹಾಯಕ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ, ದಾವಣಗೆರೆ, ಶ್ರೀ ಸದಾನಂದ ಹೆಗಡೆ, ಮಾನ್ಯ ಸ್ಥಾನಿಕ ಸಂಪಾದಕರು, ವಿಜಯ ಕರ್ನಾಟಕ ದಿನ ಪತ್ರಿಕೆ, ದಾವಣಗೆರೆ, ಶ್ರೀ ಗುರುರಾಜ್ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ದಾವಣಗೆರೆ, ಡಾ. ಸ್ಮಿತಾ ಮಾನ್ಯ ಉಪ ಪ್ರಧಾನ ವ್ಯವಸ್ಥಾಪಕರು, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ದಾವಣಗೆರೆ ವಿಭಾಗ ಇವರು ಭಾಗವಹಿಸಿದ್ದರು

## "ಕ್ಯಾಂಪಸ್ ಕೋ–ಆಪರೇಟಿವ್ ಪ್ರಾರಂಭಿಸಲು ನಿರ್ಧಾರ"

**ಕ್ಯಾಂಪಸ್ ಕೋ–ಆಪರೇಟಿವ್ ಸೌಹಾರ್ದ ಸಹಕಾರಿಯ ಪ್ರವರ್ತಕರ ಸಭೆ** : ಸಂವಾದ ಕಾರ್ಯಕ್ರಮದ ನಂತರ ಮಧ್ಯಾಹ್ನದ ಅವಧಿಯಲ್ಲಿ "ಕ್ಯಾಂಪಸ್ ಕೋ–ಆಪರೇಟಿವ್ ಸೌಹಾರ್ದ ಸಹಕಾರಿಯ" ಪ್ರವರ್ತಕರ ಸಭೆಯನ್ನು ಪ್ರೋ. ಕೆ.ಬಿ. ರಂಗಪ್ಪ, ಮಾನ್ಯ ಹಿರಿಯ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು.

ವಿಶ್ವವಿದ್ಯಾನಿಲಯದ ಬೋಧಕ, ಬೋಧಕೇತರ ಸಿಬ್ಬಂದಿಗಳು ಹಾಗೂ ಯುವ ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ ಇವರು "ಕ್ಯಾಂಪಸ್ ಕೋ–ಆಪರೇಟಿವ್" ಸಹಕಾರ ಸಂಸ್ಥೆ ರಚಿಸುವುದರಿಂದ ಆಗುವ ಪ್ರಯೋಜನಗಳು ಹಾಗೂ ಅದರ ಧ್ಯೇಯೋದ್ದೇಶಗಳ ಕುರಿತು ವಿವರಿಸಿದರು. ಕ್ಯಾಂಪಸ್ ಕೋ–ಆಪರೇಟಿವ್ ಸೌಹಾರ್ದ ಸಹಕಾರಿಯ ಮುಖ್ಯ ಪ್ರವರ್ತಕರಾಗಿ ಪ್ರೋ. ಕೆ.ಬಿ. ರಂಗಪ್ಪ, ಮಾನ್ಯ ಹಿರಿಯ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಸಭೆಯ ನಿರೂಪಣೆಯನ್ನು ತರಬೇತಿ ಸಲಹೆಗಾರರಾದ ಶ್ರೀ ವಿ.ಜೆ. ಕಾರಕೂನ್‌ರವರು ಹಾಗೂ ವಂದನಾರ್ಪಣೆಯನ್ನು ಡಾ. ಸಂದರಮ್. ಎಂ. ಮಾನ್ಯ ಸಹಾಯಕ ಪ್ರಾಧ್ಯಾಪಕರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರು ನೆರವೇರಿಸಿದರು.

ಈ ಸಂವಾದ ಕಾರ್ಯಕ್ರಮದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದಿಂದ ಒಟ್ಟು 269 ವಿದ್ಯಾರ್ಥಿ/ ವಿದಾರ್ಥಿನಿಯರು ಭಾಗವಹಿಸಿದ್ದರು ಹಾಗೂ ಈ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ಭಾಗವಹಿಸಿದ್ದರು.

## ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಪರಿವೀಕ್ಷಣೆ ಮಾರ್ಗಸೂಚಿಗಳಿಗಾಗಿ ಸಂಯುಕ್ತ ಸಹಕಾರಿಯ ಅಧಿಕಾರಿಗಳಿಗೆ ತರಬೇತಿ



**ಬೆಂಗಳೂರು** : ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧಿಕಾರಿಗಳಿಗಾಗಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಪರಿಶೀಲನೆಯ ಕುರಿತು ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮವನ್ನು ದಿನಾಂಕ 18–06–2025 ರಂದು ಬೆಂಗಳೂರಿನ ಸಂಯುಕ್ತ ಸಹಕಾರಿಯ ಸೌಹಾರ್ದ ತರಬೇತಿ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮಕ್ಕೆ ಆಗಮಿಸಿದಂತಹ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್‌ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ. ಪಾಟೀಲರವರು ಮತ್ತು ಆರ್‌ಬಿಐ ನ ಮ್ಯಾನೇಜರ್‌ರಾದ ಶ್ರೀ ಪವನಕುಮಾರ್‌ರವರು ಹಾಗೂ ಎಲ್ಲಾ ಅತಿಥಿ ಗಣ್ಯರನ್ನು ಶ್ರೀ ರಾಜಶೇಖರ, ಉಪಪ್ರಧಾನ ವ್ಯವಸ್ಥಾಪಕರು ಇವರು ಸ್ವಾಗತ ಕೋರಿದರು. ಕಾರ್ಯಕ್ರಮವನ್ನು ಪ್ರಾರ್ಥನಾಗೀತೆಯನ್ನು ಹಾಡುವುದರ ಮೂಲಕ ಪ್ರಾರಂಭಿಸಲಾಯಿತು. ನಂತರದಲ್ಲಿ ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದಂತಹ ಪವನ್‌ಕುಮಾರ್ ಹಾಗೂ ಎಲ್ಲಾ ಅತಿಥಿ ಗಣ್ಯರು ಸೇರಿ ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು



### ಆರ್‌ಬಿಐ ಮಾದರಿ ಪರಿವೀಕ್ಷಣೆ ಮಾರ್ಗಸೂಚಿಗಳ ಸಿದ್ಧತೆಗಾಗಿ ಈ ತರಬೇತಿ : ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಸದರಿ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಹೇಳುತ್ತ ಸೌಹಾರ್ದ ಸಹಕಾರಿ ಸಂಸ್ಥೆಯು 21 ಚುನಾಯಿತ ನಿರ್ದೇಶಕರನ್ನು ಹೊಂದಿದ್ದು, ಈ ಸಂಸ್ಥೆಯ ಅಧ್ಯಕ್ಷರಾದ ಮಾನ್ಯ ಶ್ರೀ ನಂಜನಗೌಡರವರು ವೃತ್ತಿಯಲ್ಲಿ ಸನ್ನದು ಲೆಕ್ಕಪರಿಶೋಧಕರಾಗಿದ್ದಾರೆ ಎಂದು ತಿಳಿಸಿದರು. ನಂತರದಲ್ಲಿ ಅವರು ಮಾತನಾಡುತ್ತ ಸಂಯುಕ್ತ ಸಹಕಾರಿಯ ನಾಲ್ಕು ಪ್ರಾಂತೀಯ ಕಛೇರಿಗಳನ್ನು ಹೊಂದಿದ್ದು,

ಕಲಬುರ್ಗಿ, ಬೆಳಗಾವಿ, ಮೈಸೂರು, ಬೆಂಗಳೂರುನಲ್ಲಿವೆ ಹಾಗೂ 31 ಜಿಲ್ಲಾ ಸಂಪರ್ಕ ಕಛೇರಿಗಳನ್ನು ಹೊಂದಿದೆ. ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವ ಮುಖ್ಯ ಉದ್ದೇಶ urban co-operative bank ನ ನಿಯಂತ್ರಣ, ಮೇಲ್ವಿಚಾರಣೆ ಹಾಗೂ ಮಾರ್ಗದರ್ಶನವನ್ನು ಯಾವ ರೀತಿಯಾಗಿ ಆರ್‌ಬಿಐ ಪರಿಶೀಲಿಸುತ್ತದೆಯೋ ಹಾಗೂ ಆರ್ಥಿಕ ಶಿಸ್ತನ್ನು ಕ್ರಮಬದ್ಧವಾಗಿ ಕಾಪಾಡುತ್ತದೆಯೋ ಅದೇ ರೀತಿಯಾಗಿ ಸಂಯುಕ್ತ ಸಹಕಾ–ರಿಯಯು ತನ್ನ ಸೌಹಾರ್ದ ಸಹಕಾರಿ ಸಂಘಗಳನ್ನು ಆರ್ಥಿಕ ಶಿಸ್ತು ಮೇಲ್ವಿಚಾರಣೆ ಮಾಡಬೇಕು ಎಂದು ತಿಳಿಸಿದರು.



## ಸಂಯುಕ್ತ ಸಹಕಾರಿಯ ಅಧಿಕಾರಿಗಳು ನೈಪುಣ್ಯತೆಯನ್ನು ಹೊಂದುವುದಕ್ಕಾಗಿ ಇಂತಹ ತರಬೇತಿ ಅಗತ್ಯ

**ಶ್ರೀ ಬಿ.ಎಸ್. ಗುಂಡುರಾವ್ ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡತಂಹ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್‌ಗುಂಡುರಾವ್‌ರವರು ಮಾತನಾಡಿ ಸೌಹಾರ್ದ ಸಹಕಾರಿಯ ಅಧಿಕಾರಿಗಳು ತರಬೇತಿ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸುವುದರ ಮೂಲಕ ಉತ್ತಮ ಸಂಪನ್ಮೂಲ ವ್ಯಕ್ತಿಗಳಾಗಿ ತಮ್ಮ ಕೆಲಸಕಾರ್ಯದಲ್ಲಿ ಹೆಚ್ಚಿನ ಪ್ರಾವೀಣ್ಯತೆಯನ್ನು ಪಡೆದುಕೊಳ್ಳಬೇಕೆಂದು ಆಶಯ ವ್ಯಕ್ತಪಡಿಸಿದರು.

---

## ಬ್ಯಾಂಕಿನ ಸಮಗ್ರ ಆರ್ಥಿಕ ಚಟುವಟಿಕೆಗಳ ಪರಿಶೀಲನೆ ಅಗತ್ಯ.

**: ಶ್ರೀ ಪವನ್‌ಕುಮಾರ್, ಮಾನ್ಯ ಸಹ ಪ್ರಧಾನ ವ್ಯವಸ್ಥಾಪಕರು, ಆರ್‌ಬಿಐ, ಬೆಂಗಳೂರು**



ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದಂತಹ ಹಾಗೂ ಸಂಪನ್ಮೂಲ ವ್ಯಕ್ತಿಯಾದಂತಹ ಶ್ರೀ ಪವನ್‌ಕುಮಾರ್ ಮಾನ್ಯ ವ್ಯವಸ್ಥಾಪಕರು ಆರ್‌ಬಿಐ, ಬೆಂಗಳೂರು ಇವರು urban co-operative ಬ್ಯಾಂಕ್ ಅನ್ನು ಪರಿಶೀಲಿಸುವ ವಿಧಾನ ಹಾಗೂ ಒಂದು ಬ್ಯಾಂಕಿನ ಮತ್ತು ಸೊಸೈಟಿಯ ಅಭಿವೃದ್ಧಿಗಾಗಿ ಅಳವಡಿಸಿಕೊಳ್ಳಬೇಕಾದ ಆರ್ಥಿಕ ಶಿಸ್ತಿನ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ ಆರ್‌ಬಿಐ ಯು ತನ್ನ ಮಾರ್ಗಸೂಚಿ ಅಡಿಯಲ್ಲಿ ಕಾರ್ಯ ನಿರ್ವಹಿಸವುದರ ಬಗ್ಗೆ ವಿವರವಾಗಿ ಮಾಹಿತಿಯನ್ನು ತಿಳಿಸಿದರು. ಒಂದು ಸಹಕಾರಿ ಸಂಸ್ಥೆಯು ನಷ್ಟದಲ್ಲಿ ನಡೆಯುತ್ತಿದ್ದರೆ. ಆ ಸಹಕಾರಿ ಸಂಘ ಅಥವಾ ನಗರ ಸಹಕಾರಿ ಬ್ಯಾಂಕ್ ನಷ್ಟಕ್ಕೆ ತಲುಪಿದ ಅಸಲಿ ಕಾರಣವನ್ನು ಕಂಡು ಹಿಡಿಯುವ ಮಾರ್ಗ ಮತ್ತು ಆ ಸಂಸ್ಥೆಯನ್ನು ಅಭಿವೃದ್ಧಿಯ ಕಡೆ ತರುವಂತಹ ಮಾರ್ಗಗಳನ್ನು ತಿಳಿಸಿದರು. ಇದೇ ರೀತಿಯಾಗಿ ಸೌಹಾರ್ದ ಸಂಯುಕ್ತ ಸಹಕಾರಿಯು ತಮ್ಮ ಸೌಹಾರ್ದ ಸಹಕಾರಿ ಸಂಘಗಳ ಪರಿಶೀಲನೆ ನಡೆಸಬೇಕು, ಮತ್ತು ಉತ್ತಮ ರೀತಿಯಾದ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಸಹಕಾರಿ ಅಭಿವೃದ್ಧಿ ಸಾಧ್ಯ ಎಂದು ತಿಳಿಸಿದರು. ಒಂದು ಸಂಸ್ಥೆಯ ಪರಿಶೀಲನೆಗೆಂದು ಹೊರಟಾಗ ಪರಿಶೀಲಿಸಬೇಕಾದ ಮುಖ್ಯ ದಾಖಲಗಳೆಂದರೆ ಶಾಸನಬದ್ದ ಲೆಕ್ಕಪರಿಶೋಧನಾ ವರದಿ ಪರಿಶೀಲನೆ, ತ್ರೈಮಾಸಿಕ ಆರ್ಥಿಕ ತಃಖ್ತೆ ವರದಿಯಲ್ಲಿ ಬರುವ ಹೂಡಿಕೆ, ಲಾಭ ಮತ್ತು ನಷ್ಟ ಖಾತೆ ಪರಿಶೀಲನೆ, ಆ ವರ್ಷದಲ್ಲಿ ಸ್ವೀಕೃತವಾಗಿರುವ ಯಾವುದೇ ದೂರು, ಯಾವುದೇ ಮಾರುಕಟ್ಟೆ ಸಮಸ್ಯೆ, ಶಾಸನಬದ್ದ ಲೆಕ್ಕಪರಿಶೋಧನೆಯ ಬಗ್ಗೆ ಲೆಕ್ಕಪರಿಶೋಧಕರು ನೀಡಿದ ಅಂತಿಮ ವರದಿ, ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ ವರದಿ, ಆತಂರಿಕ ಸಮನ್ವಯ ತಃಖ್ತೆ ವರದಿ ಪರಿಶೀಲನೆ ಮಾಡುವುದು ಅಗತ್ಯ.

ತಪಾಸಣೆಗಳನ್ನು on-site (ಭೌತಿಕ ಭೇಟಿಗಳು) ಮತ್ತು off-site (ಆದಾಯ ಮೇಲ್ವಿಚಾರಣೆಯ ಮೂಲಕ) ನಡೆಸಲಾಗುತ್ತದೆ. ಈ ತಪಾಸಣೆಗಳು ಬ್ಯಾಂಕಿನ ಆರ್ಥಿಕ, ಆರೋಗ್ಯ ಕಾರ್ಯಚರಣೆಯ ದಕ್ಷತೆ ಮತ್ತು ನಿಯಂತ್ರಕ ಚೌಕಟ್ಟನ್ನು ಅನುಸರಿಸುವುದನ್ನು ನಿರ್ಣಯಿಸುವ ಗುರಿಯನ್ನು ಹೊಂದಿದೆ. ಪರಿಶೀಲನೆಯು ವಿವಿಧ ಅಂಶಗಳನ್ನು ಒಳಗೊಂಡಿದೆ. ಅವುಗಳೆಂದರೆ ಹಣಕಾಸಿನ ಆರೋಗ್ಯ, ಬಂಡವಾಳದ ಸಮರ್ಪಕತೆ, ಆಸ್ತಿ ಗುಣಮಟ್ಟ, ನಿರ್ವಹಣೆ ಗಳಿಕೆ ಮತ್ತು ದ್ರವ್ಯತೆಯನ್ನು ನಿರ್ಣಯಿಸುವುದು, ಆರ್‌ಬಿಐ ನಿಗದಿ ಪಡಿಸಿದ ನಿಯಮಗಳು ಮತ್ತು ನಿಬಂಧನೆಗಳನ್ನು ಅನುಸರಿಸುವುದನ್ನು ಪರಿಶೀಲಿಸುವುದು.

**ಪರಿಶೀಲನೆಯ ಪ್ರಮುಖ ಕ್ಷೇತ್ರಗಳು :** ಕ್ರೆಡಿಟ್ ಮಾನ್ಯತೆ, ಟಡಿ ಅವಶ್ಯಕತೆಗಳ ಅನುಸರಣೆ ಸೇರಿದಂತೆ ಬ್ಯಾಂಕಿನ ಹೂಡಿಕೆ, ಅಭ್ಯಾಸಗಳನ್ನು ಪರಿಶೀಲಿಸುವುದು.

---



## ಠೇವಣಿದಾರ ಹಿತರಕ್ಷಣೆ ಆರ್.ಬಿ.ಐ ನ ಪ್ರಮುಖ ಉದ್ದೇಶ ಸೌಹಾರ್ದ ಚಟುವಟಿಕೆಗಳು ಇದಕ್ಕೆ ಪೂರಕವಾಗಿ ಸ್ಪಂದಿಸುವುದು ಅಗತ್ಯ.

**- ಶ್ರೀ ಹರಿಕೃಷ್ಣ, ಮಾನ್ಯ ಪ್ರಧಾನ ಮುಖ್ಯ ವ್ಯವಸ್ಥಾಪಕರು (ನಿ), ಆರ್‌ಬಿಐ, ಬೆಂಗಳೂರು**

ಮತ್ತೊರ್ವ ಸಂಪನ್ಮೂಲ ವ್ಯಕ್ತಿಗಳಾದ ಆರ್‌ಬಿಐನ ನಿವೃತ್ತ ಮಾನ್ಯ ಪ್ರಧಾನ ಮುಖ್ಯ ವ್ಯವಸ್ಥಾಪಕರಾದ ಶ್ರೀ ಹರಿಕೃಷ್ಣನವರು ಸೌಹಾರ್ದ ಸಹಕಾರಿಗಳ ನಿಯಂತ್ರಣ ಹಾಗೂ ನಿರ್ವಹಣೆಯ ಮಾರ್ಗಸೂಚಿಗಳ ಬಗ್ಗೆ ವಿವರವಾದ ಮಾಹಿತಿ ನೀಡುವುದರ ಮೂಲಕ ಭಾರತೀಯ ಆರ್ಥಿಕತೆಯ ವಿತ್ತೀಯ ವ್ಯವಸ್ಥೆಯನ್ನು ನಿರ್ವಹಿಸುವಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಪ್ರಮುಖ ಪಾತ್ರ ವಹಿಸುತ್ತದೆ, ವಿತ್ತೀಯ ನೀತಿಯನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು, ಕರೆನ್ಸಿ ಪೂರೈಕೆಯನ್ನು ನಿರ್ವಹಿಸುವುದು ಮತ್ತು ಬ್ಯಾಂಕಿಂಗ್ ಕ್ಷೇತ್ರವನ್ನು ನಿಯಂತ್ರಿಸುವುದು ಆರ್‌ಬಿಐ ಪ್ರಾಥಮಿಕ ವಿತ್ತೀಯ ಕಾರ್ಯವಾಗಿದೆ. ಈ ಮಾರ್ಗಸೂಚಿಗಳು ಸೌಹಾರ್ದ ಸಹಕಾರಿಗಳಲ್ಲಿ ನ್ಯಾಯಯುತ

ಪ್ರಾತಿನಿಧ್ಯ, ಜವಾಬ್ದಾರಿಯುತ ಹಣಕಾಸು ನಿರ್ವಹಣೆ ಮತ್ತು ಸಹಕಾರಿ ಒಳಗೆ ಕಾರ್ಯಚರಣೆಯ ಸ್ವಾತಂತ್ರ್ಯವನ್ನು ಖಚಿತಪಡಿಸುತ್ತವೆ. ಈ ಮಾರ್ಗಸೂಚಿಗಳಿಂದ ಠೇವಣಿದಾರರ ಹಿತಾಸಕ್ತಿಗಳನ್ನು ಕಾಪಾಡಲು ಸಹಕಾರಿಯಾಗುತ್ತದೆ. ಸಹಕಾರಿಯ ಆರ್ಥಿಕ ಸ್ಥಿತಿಗತಿ ಉತ್ತಮವಾಗಿ ಸುಧಾರಣೆ ಹೊಂದುತ್ತದೆ ಎಂದು ತಿಳಿಸಿದರು. ನಂತರ ಕಾರ್ಯಕ್ರಮದಲ್ಲಿ ಸೌಹಾರ್ದ ಸಹಕಾರಿಯ ತಾಂತ್ರಿಕ ಅಧಿಕಾರಿಯಾದ ಶ್ರೀಮತಿ ಸಿಂಧುರವರು ಹಾಗೂ ಗ್ರೋಸ್‌ಬೇಸ್ ಟೆಕ್ನಾಲಜಿ ಸಂಸ್ಥೆಯ ರೋಹಿತ್‌ದಾಸ್‌ರವರ ವತಿಯಿಂದ ಸಂಯುಕ್ತ ಸಹಕಾರಿಯ ವೈಬ್‌ಸೈಟ್‌ಮೂಲಕ ಸೌಹಾರ್ದ ಸಹಕಾರಿಯ ಸದಸ್ಯರು ತಮಗೆ ಅವಶ್ಯಕವಾಗಿ ಬೇಕಿರುವ ಮಾಹಿತಿಯನ್ನು, ತಮ್ಮ ಕುಂದುಕೊರತೆಗಳನ್ನು ಹಾಗೂ ತಮ್ಮ ದೂರುಗಳನ್ನು e-desk application ಮೂಲಕ ಮಾಹಿತಿಯನ್ನು ತಿಳಿದುಕೊಳ್ಳುವುದರ ಜೊತೆಗೆ ತಮಗೆ ಎದುರಾದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಅನುಕೂಲಕರವಾಗಿದೆ ಎಂದು ತಿಳಿಸಿದರು.

## ವೃತ್ತಿಪರತೆಯನ್ನು ಹೆಚ್ಚಿಸಿಕೊಳ್ಳವುದಕ್ಕಾಗಿ ಇಂತಹ ತರಬೇತಿಗಳನ್ನು ಸಂಯುಕ್ತ ಸಹಕಾರಿ ನಿರಂತರವಾಗಿ ಹಮ್ಮಿಕೊಳ್ಳಲು ಉದ್ದೇಶಿಸಿದೆ.

**: ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

ಕಾರ್ಯಕ್ರಮದ ಸಮಾರೋಪ ಭಾಷಣವನ್ನು ಮಾಡಿದಂತಹ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಸೌಹಾರ್ದ ಸಹಕಾರಿಯ ಅಧಿಕಾರಿಗಳು ಮತ್ತು ಸಂಸ್ಥೆಯು ಆಂತರಿಕವಾಗಿ ಗಟ್ಟಿಯಾಗುವ ಉದ್ದೇಶದಿಂದ ಈ ತರಬೇತಿ ಕಾರ್ಯಕ್ರಮದಲ್ಲಿ ತಿಳಿಸಿದಂತಹ ವಿಷಯಗಳನ್ನು ಉತ್ತಮವಾಗಿ ಗ್ರಹಿಸಿಕೊಂಡು ನೀವು ಸೌಹಾರ್ದ ಸಹಕಾರಿಯ ಸಂಪನ್ಮೂಲ ವ್ಯಕ್ತಿಗಳಾಗಿ ಬೆಳೆಯಬೇಕು . ನಿಮ್ಮ ಕೆಲಸದಲ್ಲಿ ವೃತ್ತಿಪರತೆಯ ಅಭಿವೃದ್ಧಿಗಾಗಿ ನಿಮಗೆ ತರಬೇತಿಯನ್ನು ನೀಡಲು ಸಂಯುಕ್ತ ಸಹಕಾರಿಯ ಸಂಸ್ಥೆಯು ಸದಾ ಸಿದ್ಧವಿರುತ್ತದೆ. ಉತ್ತಮ ತರಬೇತಿಯನ್ನು ಪಡೆದುಕೊಂಡು ಸಂಸ್ಥೆಯ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಕಾರ್ಯಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದರು. ದಿನಾಂಕ 21–06–2025ರಂದು ಅಂತರರಾಷ್ಟ್ರೀಯ ಯೋಗ ದಿನ ಇರುವುದರಿಂದ ಎಲ್ಲರೂ ಯೋಗದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ತಿಳಿಸಿದರು

**ಶಿಬಿರಾರ್ಥಿಗಳ ಅಭಿಪ್ರಾಯ :** ಕಾರ್ಯಕ್ರಮ ಬಹಳ ಉತ್ತಮವಾಗಿತ್ತು. ಇಂತಹ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುವುದು ಅಗತ್ಯ ಎಂದು ತಿಳಿಸಿದರು.

## ಉಡುಪಿಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಾಮಾನ್ಯ ಸೇವಾ ಕೇಂದ್ರಗಳ ಉದ್ಘಾಟನೆ ಹಾಗೂ ವಿಷಯಾಧಾರಿತ ತರಬೇತಿ






**ಉಡುಪಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ವತಿಯಿಂದ ರಾಜ್ಯ ಮಟ್ಟದ ಸಿ.ಎಸ್.ಸಿ ಕೇಂದ್ರಗಳ ಉದ್ಘಾಟನಾ ಕಾರ್ಯಕ್ರಮವನ್ನು ಉಡುಪಿ ನಗರದ ಡಯಾನ ಹೋಟೆಲ್ ಇಲ್ಲಿ ಆಯೋಜನೆ ಮಾಡಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಉಡುಪಿ & ಚಿಕ್ಕಮಗಳೂರು ಜಿಲ್ಲೆಯ ಮಾನ್ಯ ಸಂಸದರು ಹಾಗು ಮಾಜಿ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಇವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ವಹಿಸಿದ್ದರು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಉಡುಪಿ ತಾಲ್ಲೂಕಿನ ಶಾಸಕರಾದ ಶ್ರೀ ಯಶ್‌ಪಾಲ್ ಸುವರ್ಣರವರು ಭಾಗವಹಿಸಿದ್ದರು. ಕಾರ್ಯಕ್ರಮದ ಅತಿಥಿಗಳಾಗಿ ಉಡುಪಿ ಜಿಲ್ಲೆಯ ಮಾನ್ಯ ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಅಭಿದ್ ಗದ್ಯಾಳ, ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಮಂಜುನಾಥ್ ಎಸ್.ಕೆ. ಭಾರತಿ ಜಿ ಭಟ್ ಹಾಗು ಸಿ.ಎಸ್.ಸಿ ಬಿ2ಸಿ ಮುಖ್ಯಸ್ಥರಾದ ಶ್ರೀ ಅಜಿತ್ ಹಾಗೂ ಉಡುಪಿ ಜಿಲ್ಲಾ ಸೌಹಾರ್ದ ಸಹಕಾ–ರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ಇವರುಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು ನುಡಿದರು. ಕಾರ್ಯಕ್ರದಲ್ಲಿ ಗಣ್ಯರನ್ನು ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಸ್ವಾಗತಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಅಧಿಕಾರಿಗಳಾದ ಶ್ರೀ ರಾಜೇಶ್ ಕೆ.ಎಂ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲೆಯ 7 ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಿ.ಎಸ್.ಸಿ ಕೇಂದ್ರ ಲಾಗಿನ್ ಕೀಗಳನ್ನು ಸಾಂಕೇತಿಕವಾಗಿ ನೀಡಲಾಯಿತು. ಸದರಿ ಕಾರ್ಯಕ್ರಮಕ್ಕೆ ಜಿಲ್ಲೆಯ 190 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

# ಸೌಹಾರ್ದ ಸಹಕಾರಿ ಬ್ಯಾಂಕುಗಳ ಶಾಖಾ ವ್ಯವಸ್ಥಾಪಕರುಗಳಿಗಾಗಿ ಕಾರ್ಯದಕ್ಷತೆ ಅಭಿವೃದ್ಧಿ ಶಿಬಿರ

## ಅಭಿವೃದ್ಧಿಪರ ಚಿಂತನೆ ಬೆಳೆಸಿಕೊಳ್ಳುವುದು ಅಗತ್ಯ – ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಪಟ್ಟಣ ಸಹಕಾರ ಬ್ಯಾಂಕುಗಳ ಶಾಖಾ ವ್ಯವಸ್ಥಾಪಕರುಗಳಿಗಾಗಿ ಒಂದು ದಿನದ ಕಾರ್ಯಕ್ಷಮತೆ ಅಭಿವೃದ್ಧಿ ಶಿಬಿರನ್ನು ದಿನಾಂಕ 24 ಜೂನ್ 2025 ರಂದು ಸಂಯುಕ್ತ ಸಹಕಾರಿಯ ತರಬೇತಿ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಸಹಕಾರ ಬ್ಯಾಂಕುಗಳು ಆಡಳಿತ ವಿಫಲತೆಯಿಂದ ನಷ್ಟ ಹೊಂದಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸಿಬ್ಬಂದಿಯವರು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವುದು ಅಗತ್ಯ. ಬ್ಯಾಂಕುಗಳ ಲೆಂಡಿಂಗ್ ಪಾಲಿಸಿ ಚೆನ್ನಾಗಿರಬೇಕು. ಶಾಖಾ ವ್ಯವಸ್ಥಾಪಕರಿಗೆ ಒಂದು ದೂರ ದೃಷ್ಟಿಯಿರಬೇಕು. ಅಭಿವೃದ್ಧಿಪರ ಚಿಂತನೆ ಇರಬೇಕು. ಹಾಗಾದಾಗ ಮಾತ್ರ ಆಡಳಿತ ಸುಧಾರಣೆಗೆ ಅವಕಾಶವಾಗುತ್ತದೆ. ಅದಕ್ಕಾಗಿಯೇ ಸಂಯುಕ್ತ ಸಹಕಾರಿಯಿಂದ ಈ ತರಹದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡೂರಾವರವರು ಸದಸ್ಯರ ಆರ್ಥಿಕ ಅಭಿವೃದ್ಧಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಇತ್ತೀಚಿನ ದಿನಗಳಲ್ಲಿ ಕೆಲವು ಬ್ಯಾಂಕುಗಳು ಅವರ ಆಡಳಿತ ಮಂಡಳಿ ದುರಾಡಳಿತದಿಂದ ಸದಸ್ಯರ ಠೇವಣಿಗಳಿಗೆ ಮೋಸ ಮಾಡಿರುವ ವಿಚಾರವನ್ನು ಪ್ರಸ್ತಾಪಿಸಿ ಇವುಗಳ ಬಗ್ಗೆ ಸೌಹಾರ್ದ ಸಹಕಾರ ಬ್ಯಾಂಕುಗಳ ಶಾಖಾ ವ್ಯವಸ್ಥಾಪಕರು ಎಚ್ಚರಿಕೆ ವಹಿಸಬೇಕು ಎಂದು ಕರೆ ನೀಡಿದರು.

ಪ್ರಾಸ್ತಾವಿಕ ಭಾಷಣ ಮಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಾತ್ಮಕ ಬೆಳವಣಿಗೆಗಾಗಿ ಮತ್ತು ಕ್ಷೇತ್ರದ ಅಭಿವೃದ್ಧಿಗಾಗಿ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಸೌಹಾರ್ದ ಸಹಕಾರಿ ಬ್ಯಾಂಕುಗಳಿಗಾಗಿ ಹಮ್ಮಿಕೊಳ್ಳಲಾಗುತ್ತಿದೆ. ಈ ಬಾರಿ ವಿಶೇಷವಾಗಿ ಹಲವು ಬ್ಯಾಂಕುಗಳ ಪದಾಧಿಕಾರಿಗಳ ವಿನಂತಿಯ ಮೇರೆಗೆ ಬ್ಯಾಂಕುಗಳ ಶಾಖಾ ವ್ಯವಸ್ಥಾಪಕರುಗಳಿಗಾಗಿ ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ. ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರೊಂದಿಗೆ ಚರ್ಚಿಸಿ ವಿಷಯಗಳನ್ನು ಅಂತಿಮಗೊಳಿಸಿ ಅನುಭವಿ ಸಂಪನ್ಮೂಲ ವ್ಯಕ್ತಿಗಳನ್ನು ಈ ತರಬೇತಿಯಲ್ಲಿ ಅಳವಡಿಸಲಾಗಿದೆ. ಎಂದು ತಿಳಿಸಿದರು.

ಶ್ರೀಮತಿ ದಿವ್ಯಾರವರು ಪ್ರಾರ್ಥನೆ ನಡೆಸಿಕೊಟ್ಟರು. ಶ್ರೀಮತಿ ಶೋಭಾರವರು ಸ್ವಾಗತ ಮಾಡಿದರು. ಶ್ರೀ ಬಾಬು ಪಠಾಣರವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಕವಿತರವರು ನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಆರ್. ಎಸ್. ಪ್ರಕಾಶ, ಶ್ರೀ ಗುರುಸ್ವಾಮಿ, ಶ್ರೀ ವಿಕಾಸ, ಶ್ರೀ ದರ್ಶನ ಇವರುಗಳು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

### ಸಮಾರೋಪ ಕಾರ್ಯಕ್ರಮ

ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಚಾರ್ಟರ್ಡ ಅಕೌಂಟಂಟ್ ಶ್ರೀ ಮಧುಕರ ಹೆಗಡೆಯವರು ಸಂಯುಕ್ತ ಸಹಕಾರಿ ತರಬೇತಿ ಕಾರ್ಯಕ್ರಮಗಳು ಉತ್ತಮ ವಿಷಯ, ಉತ್ತಮ ಸಂಪನ್ಮೂಲ ವ್ಯಕ್ತಿಗಳು ಹಾಗೂ ಉತ್ತಮ ವ್ಯವಸ್ಥೆಗಳಿಂದ ಕೂಡಿರುತ್ತವೆ. ಪಟ್ಟಣ ಸಹಕಾರ ಬ್ಯಾಂಕುಗಳ ಶಾಖಾ ವ್ಯವಸ್ಥಾಪಕರುಗಳಿಗಾಗಿ ವ್ಯವಸ್ಥೆ ಮಾಡಿರುವ ಈ ತರಬೇತಿ ಅತ್ಯಂತ ಉತ್ತಮ ಗುಣಮಟ್ಟದ್ದಾಗಿದೆ. ಎಲ್ಲರೂ ಇದರ ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು.

ಶಿಬಿರಾರ್ಥಿಗಳ ಅನಿಸಿಕೆಗಳಿಗೆ ಸ್ಪಂದಿಸಿ ಸಮಾರೋಪ ಭಾಷಣ ಮಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಸೌಹಾರ್ದ ಸಹಕಾರಿ ಬ್ಯಾಂಕುಗಳ ಶಾಖಾ ವ್ಯವಸ್ಥಾಪಕರುಗಳಿಗಾಗಿ ಪ್ರಪ್ರಥಮ ಬಾರಿಗೆ ನಡೆಸಿದ ಈ ತರಬೇತಿ ಅತ್ಯಂತ ಯಶಸ್ವಿಯಾಗಿ ನಡೆದಿದೆ. ರಾಜ್ಯದ 11 ಸೌಹಾರ್ದ ಸಹಕಾರಿ ಬ್ಯಾಂಕುಗಳಿಂದ 56 ಶಾಖಾ ವ್ಯವಸ್ಥಾಪಕರುಗಳು ಹಾಗೂ ಸಂಯುಕ್ತ ಸಹಕಾರಿಯ 3 ಅಧಿಕಾರಿಗಳು ಸೇರಿದಂತೆ ಒಟ್ಟಾರೆ 59 ಜನರು ಈ ಶಿಬಿರದ ಪ್ರಯೋಜನ ಪಡೆದಿದ್ದಾರೆ. ಶಿಬಿರದ ಬಗ್ಗೆ ವ್ಯವಸ್ಥೆಯ ಬಗ್ಗೆ, ವಿಷಯ ಹಾಗೂ ಉಪನ್ಯಾಸಕರಳ ಬಗ್ಗೆ ಉತ್ತಮ ಅಭಿಪ್ರಾಯ ವ್ಯಕ್ತ ಪಡಿಸಿರುವುದು ನಮಗೆ ತೃಪ್ತಿ ತಂದಿದೆ. ನಿಮ್ಮೆಲ್ಲರ ಸಲಹೆಯಂತೆ ಮುಂಬರುವ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳ ಅವಧಿಯನ್ನು ಹೆಚ್ಚಿಸುವ ಬಗ್ಗೆ ಹಾಗೂ ವರ್ಷಕ್ಕೆ 2 ಬಾರಿ ಇಂತಹ ತರಬೇತಿಯನ್ನು ಆಯೋಜಿಸುವ ಬಗ್ಗೆ ಚಿಂತನೆ ಮಾಡಲಾಗುವುದು ಎಂದು ತಿಳಿಸಿದರು. ತರಬೇತಿ ಅಧಿಕಾರಿ ಶ್ರೀ ಬಾಬು ಪಠಾಣರವರು ವಂದನಾರ್ಪಣೆ ಸಲ್ಲಿಸಿದರು.

# ಸೌಹಾರ್ದ ಸಹಕಾರಿಗಳ ಕಾರ್ಯಕ್ಷಮತೆ ಅಭಿವೃದ್ಧಿ 05 ದಿನಗಳ ವಿಶೇಷ ತರಬೇತಿ ಶಿಬಿರ.



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 05 ದಿನಗಳ "ಕಾರ್ಯಕ್ಷಮತೆ ಅಬಿವೃದ್ದಿ ಶಿಬಿರ" ವನ್ನು ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ ಪದ್ಮನಾಭನಗರ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮವನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಹಾಗೂ ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಪುಂಡಲೀಕ ಸಾದುರೆಯವರು ನೆರವೇರಿಸಿದರು.

## ತರಬೇತಿ ವ್ಯಕ್ತಿಯನ್ನು ಪರಿಪಕ್ವತೆಯತ್ತ ಕೊಂಡೊಯ್ಯುತ್ತದೆ : ಶ್ರೀ ಪುಂಡಲೀಕ ಎಲ್. ಸಾದುರೆ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಡಿಸಿಸಿ ಬ್ಯಾಂಕ್, ಬೆಂಗಳೂರು



ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಪುಂಡಲೀಕ ಸಾದುರೆರವರು ವೃತ್ತಿ ಜೀವನಕ್ಕೆ ತರಬೇತಿ ಮುಖ್ಯ ತರಬೇತಿಯಿಂದ ವ್ಯಕ್ತಿಯ ಜೀವನ ಪರಿಪಕ್ವದತ್ತ ಸಾಗುತ್ತದೆ. ತರಬೇತಿಯಿಂದ ನಮ್ಮ ಕೆಲಸದಲ್ಲಿ ಬದಲಾವಣೆ ಕಾಣಬೇಕು. ಇಂತಹ ಶಿಸ್ತು ಬದ್ಧ ತರಬೇತಿ ವ್ಯವಸ್ಥೆ ಅಭಿನಂದನಾರ್ಹ ಎಂದರು.



## ತರಬೇತಿ ಫಲಿತಾಂಶ ನಿಮ್ಮ ಸಂಸ್ಥೆಯ ಪ್ರಗತಿಯಲ್ಲಿ ಕಾಣುವಂತಾಗಬೇಕು : - ಶ್ರೀ ಎ.ಆರ್.ಪ್ರಸನ್ನಕುಮಾರ್, ಮಾನ್ಯ ಉಪಾದ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನಕುಮಾರವರು ಸಹಕಾರ ಇಲ್ಲದೆ ಮನುಷ್ಯನಿಲ್ಲ "ಸಹಕಾರದೊಂದಿಗೆ ಸಮೃದ್ಧಿ" ಎಂದು ಕೇಂದ್ರ ಸಹಕಾರ ಸಚಿವಾಲಯ ಕಾರ್ಯಪ್ರವೃತ್ತವಾಗಿದೆ. ಸಂಯುಕ್ತ ಸಹಕಾರಿ ಸದರಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳುತ್ತಿದೆ. ಸಹಕಾರಿಗಳಲ್ಲಿ ಸಿಬ್ಬಂದಿಗಳನ್ನು ವೃತ್ತಿಪರತೆಯತ್ತ ಕೊಂಡ್ಯೊಯಲು ಶ್ರಮಿಸುತ್ತದೆ ಎಂದರು.

ಪ್ರಾಸ್ತವಿಕ ಭಾಷಣವನ್ನು ಮಾಡಿದ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕರಾದ ನಿರ್ದೇಶಕರು ಶ್ರೀ ಶರಣಗೌಡ ಜಿ ಪಾಟೀಲ ರವರು ಸೌಹಾರ್ದ ಸಹಕಾರಿಯ ವತಿಯಿಂದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಇದುವರೆಗೆ 23 ತಂಡಗಳ 10 ದಿನಗಳ ತರಬೇತಿ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ 4 ತಂಡಗಳಲ್ಲಿ ವಿಶ್ವವಿದ್ಯಾನಿಲಯಗಳ ಜೊತೆಗೆ 3 ತಂಡಗಳಲ್ಲಿ ಡಿಸಿಬಿಎಂ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ಸೌಹಾರ್ದ ಸಹಕಾರಿಗಳ ಬೇಡಿಕೆಗನುಸಾರವಾಗಿ ಅನೇಕ ವಿಧವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರಲಾಗಿದೆ. 5 ದಿನಗಳ ತರಬೇತಿ ಕಾರ್ಯಕ್ರಮ ಇದು 2ನೇ ಬಾರಿ ಹಮ್ಮಿಕೊಳ್ಳುತ್ತಿದ್ದೇವೆ. ಉತ್ತಮ ನುರಿತ ಸಂಪನ್ಮೂಲ ವ್ಯಕ್ತಿಗಳನ್ನು ಉಪನ್ಯಾಸಕರನ್ನಾಗಿ ಆಹ್ವಾನಿಸಿದ್ದೇವೆ. ಶಿಬಿರಾರ್ಥಿಗಳು ಈ ತರಬೇತಿಯ ಪೂರ್ಣಪ್ರಯೋಜನ ಪಡೆಯಬೇಕೆಂದು ತಿಳಿಸಿದರು.

## ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿಯಿಂದ ಸಾಧ್ಯ : ಡಾ. ಪಿ. ಎನ್ ಸುರೇಶ್, ಮಾನ್ಯ ನಿರ್ದೇಶಕರು, ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು



ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕ ಡಾ. ಸುರೇಶರವರು ಒಂದು ಸಹಕಾರಿ ಸಂಸ್ಥೆ ಉತ್ತಮ ಸಾಧನೆ ಮಾಡಿದೆ ಅಂದರೆ ಅಲ್ಲಿನ ಸಿಬ್ಬಂದಿಯವರು ತರಬೇತಿ ಹೊಂದಿದವರಾಗಿದ್ದಾರೆ ಆದರಿಂದ ಪ್ರಗತಿ ಸಾಧ್ಯವಾಗಿದೆ ಎಂದು ಹೇಳಬಹುದು. ಕಲಿಕೆ ನಿರಂತರ ಹೆಚ್ಚಿನ ವಿಷಯಗಳನ್ನು ಅಳವಡಿಸಿದ್ದಾರೆ. ಉತ್ತಮ ಉಪನ್ಯಾಸಕರನ್ನು ಆಹ್ವಾನಿಸಿದ್ದಾರೆ. ಎಲ್ಲರು ಇದರ ಪ್ರಯೋಜನ ಪಡೆದುಕೊಳ್ಳಿ ಎಂದು ತಿಳಿಸಿದರು.

ಶಿಬಿರಾರ್ಥಿ ಪವಿತ್ರ ಎನ್. ಇವರು ಪ್ರಾರ್ಥನೆ ಮಾಡಿದರು. ಸಂಯುಕ್ತ ಸಹಕಾರಿಯ ಅಧಿಕಾರಿ ಶ್ರೀಮತಿ ಕವಿತ ಸ್ವಾಗತ ಮಾಡಿದರು ತರಬೇತಿ ಅಧಿಕಾರಿ ಬಾಬು ಪತಾಣ ರವರು ವಂದನಾರ್ಪಣೆ ಸಲ್ಲಿಸಿರು. ತರಬೇತಿಯ ಉದ್ಘಾಟನಾ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಸವಿತ ಎ. ಇ. ಕಿರಿಯ ಅಧಿಕಾರಿ ಇವರು ನಿರ್ವಹಿಸಿದರು.



## ತರಬೇತಿ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಪೂರಕ :

## ಶ್ರೀ ಬಿ.ಎಸ್. ಗುಂಡುರಾವ್ ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ. ಎಸ್. ಗುಂಡುರಾವ್‌ರವರು ಮಾತನಾಡಿ ಶಿಕ್ಷಣ, ತರಬೇತಿ ನಿರಂತರವಾಗಿರಬೇಕು ಸಹಕಾರಿಗಳ ಶಿಬಿರಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿ ಸಂಸ್ಥೆಗಳ ಪ್ರಗತಿಗೆ ಪೂರಕ ಎಂದು ತಿಳಿಸಿದರು.

## ದಿನಾಂಕ 20.06.2025 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಸಿ.ಎ. ನಂಜನಗೌಡ ಜಿ. ಶಿಬಿರಾರ್ಥಿಗಳ ಭೇಟಿ.

ಅಧ್ಯಯನ ಪ್ರವಾಸದ ಅಂಗವಾಗಿ ಶಿಬಿರಾರ್ಥಿಗಳು ಸಂಯುಕ್ತ ಸಹಕಾರಿಗೆ ಬೇಟಿ ನೀಡಿದಾಗ ಮಾನ್ಯ ಅಧ್ಯಕ್ಷರಾದ ಶ್ರೀ ಸಿಎ ನಂಜನಗೌಡರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಶಿಬಿರಾರ್ಥಿಗಳನ್ನು ಬರ ಮಾಡಿಕೊಂಡು ಅವರಿಂದ ತರಬೇತಿ ಕಾರ್ಯಕ್ರಮದ ವಿವರಗಳನ್ನು ಪಡೆದರು.

ಶಿಬಿರಾರ್ಥಿಗಳಾದ ಶ್ರೀ ರಾಮಚಂದ್ರ, ಶ್ರೀ ಶಶಿಕುಮಾರ ಶ್ರೀಮತಿ ನಾಗರತ್ನ ಪಾಟೀಲ ಮುಂತಾದವರು ಮಾತನಾಡಿ ಇದು ಅತ್ಯಂತ ಉತ್ತಮವಾದ ತರಬೇತಿ ವಿಷಯಗಳ ಆಯ್ಕೆ, ಉಪನ್ಯಾಸಕರ ಆಯ್ಕೆ ಅತಿಥಿ ಸತ್ಕಾರ ಇತರೆ ಎಲ್ಲ ವ್ಯವಸ್ಥೆಗಳು ಬಹಳ ಅಚ್ಚುಕಟ್ಟಾಗಿತ್ತು ಇಂತಹ ಕಾರ್ಯಕ್ರಮಗಳನ್ನು ವಿಭಾಗದ ಮಟ್ಟದಲ್ಲಿ ಹಾಗೂ ಜಿಲ್ಲ ಮಟ್ಟದಲ್ಲಿ ಹಮ್ಮಿಕೊಳ್ಳಲು ವಿನಂತಿಸಿದರು.

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಸಿಎ ನಂಜನಗೌಡ ರವರು ಮಾತನಾಡಿ ಸಂಯುಕ್ತ ಸಹಕಾರಿಯು ತರಬೇತಿ ಕಾರ್ಯಕ್ರಮಗಳನ್ನು ಅತ್ಯಂತ ಶಿಸ್ತು ಹಾಗೂ ವ್ಯವಸ್ಥಿತವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಸಹಕಾರಿ ಕ್ಷೇತ್ರ ಹೊರವಲಯದಲ್ಲೂ ಒಳವಲಯದಲ್ಲೂ ಶ್ಲಾಘನೆ ಇದೆ. ಇದನ್ನು ಮುಂದುವರಸಿಕೊಂಡು ಇದನ್ನು ಇನ್ನೂ ವ್ಯವಸ್ಥಿತವಾಗಿ ಮಾಡುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ. ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಎಲ್ಲ ತರಬೇತಿ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸುವುದರ ಜೊತೆಗೆ ನಿಮ್ಮ ಸಹಕಾರಿ ಸಂಸ್ಥೆಯಯ ಅಭಿವೃದ್ಧಿಗೆ ಕಾರಣರಾಗಬೇಕೆಂದು ಕರೆ ನೀಡಿದರು.

ಮಾನ್ಯ ವ್ಯವಸ್ಥಾಪಕ ನಿದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ವಿವರ ನೀಡಿ ಶಿಬಿರಾರ್ಥಿಗಳ ಅನಿಸಿಕೆಗಳಿಗೆ ಸ್ಪಂದಿಸಿದರು. ತರಬೇತಿ ಅಧಿಕಾರಿ ಶ್ರೀ ಬಾಬು ಪಠಾಣರವರು ವಂದನಾರ್ಪಣೆ ಮಾಡಿದರು.

## ಸಮಾರೋಪ ಕಾರ್ಯಕ್ರಮ



5 ದಿನಗಳ ಈ ತರಬೇತಿ ಕಾರ್ಯಕ್ರಮದ ಸಮಾರೋಪ ಕಾರ್ಯಕ್ರಮವು ದಿನಾಂಕ 21.06.2025 ರಂದು ಸಂಜೆ 04:00 ಗಂಟೆಗೆ ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣೆ ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನಕುಮಾರರವರು ವಹಿಸಿದ್ದರು. ಸಮಾರೋಪ ಭಾಷಣವನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ನೆರವೇಸಿದರು ಮುಖ್ಯ ಅತಿಥಿಗಳಾಗಿ ಪ್ರಾಂತೀಯ ಆಡಳಿತ ಸಹಕಾರಿ ಸಂಸ್ಥೆಯ ನಿರ್ದೇಶಕರಾದ ಡಾ. ಸುರೇಶ್ ರವರು ಆಗಮಿಸಿದ್ದರು. ಭವ್ಯ ಎಂ. ರವರು ಪ್ರಾರ್ಥನೆ ನಡೆಸಿದರು. ಶಿಬಿರಾರ್ಥಿ ಶ್ರೀ ರಾಮಚಂದ್ರರವರು ರವರ ಕಾರ್ಯಕ್ರಮವನ್ನು ನಿರೂಪಿಸಿದರು. ತರಬೇತಿ ಅಧಿಕಾರಿ ಶ್ರೀ ಬಾಬು ಪಠಾಣ ರವರು ಶಿಬಿರದ ವರದಿಯನ್ನು ಪ್ರಸ್ತುತಪಡಿಸಿದರು. ಶಿಬಿರಾರ್ಥಿ ಶ್ರೀಮತಿ ಜ್ಯೋತಿಯವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಎಲ್ಲ ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರವನ್ನು ನೀಡಲಾಯಿತು.

**ಬಹುಮಾನಗಳು :**

ಪ್ರಾರ್ಥನೆ, ಕಾರ್ಯನಿರ್ವಾಹಣಾ ತಂಡ, ವ್ಯವಸ್ಥಾಪನಾ ತಂಡ, ಊಟೋಪಚಾರ, ಮನರಂಜನೆ, ಸುವಿಚಾರ, ಮಿಲಿ, ಇನ್‌ಸ್ಟಂಟ್‌ಮಿಲಿ, ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದವರಿಗೆ, ಹಾಗೂ ಉತ್ತಮ ಶಿಬಿರಾರ್ಥಿಗಳಿಗೆ ಬಹುಮಾನಗಳನ್ನು ನೀಡಲಾಯಿತು.

# ರಾಜ್ಯದ ಸೌಹಾರ್ದ ಸಹಕಾರಿ ಬ್ಯಾಂಕುಗಳ ಕಿರಿಯ ಅಧಿಕಾರಿಗಳಿಗೆ 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ತರಬೇತಿ ಪ್ರಾರಂಭ



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿ ಬ್ಯಾಂಕುಗಳ ಕಿರಿಯ ಅಧಿಕಾರಿಗಳಿಗೆ ಜುಲೈ 1 ರಿಂದ ಜುಲೈ 7 ರವರೆಗೆ ರವರೆಗೆ ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ ಬೆಂಗಳೂರಿನಲ್ಲಿ 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ದಿನಾಂಕ 01.07.2025 ರಂದು ಶ್ರೀ ವೆಂಕಟೇಶ್ ಎನ್. ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು, ಪಟ್ಟಣ ಬ್ಯಾಂಕುಗಳ ವಿಭಾಗ, ನಿಬಂಧಕರ ಕಛೇರಿ, ಬೆಂಗಳೂರು. ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಜಿ. ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಘುರಾಮ್ ರೆಡ್ಡಿ, ಆರ್.ಐ.ಸಿ.ಎಂ ನಿರ್ದೇಶಕರಾದ ಡಾ. ಪಿ. ಎನ್. ಸುರೇಶ್, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಉಪಸ್ಥಿತರಿದ್ದರು.



**ನಮ್ಮ ದಕ್ಷತೆಯನ್ನು ಹೆಚ್ಚಿಸಲು ತರಬೇತಿ ಅಗತ್ಯ. – ಶ್ರೀ ವೆಂಕಟೇಶ್ ಎನ್. ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು, ಪಟ್ಟಣ ಬ್ಯಾಂಕುಗಳ ವಿಭಾಗ, ನಿಬಂಧಕರ ಕಛೇರಿ, ಬೆಂಗಳೂರು.**

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ವೆಂಕಟೇಶ್ ಎನ್ ರವರು ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಆಂದೋಲನದ ಅಭಿವೃದ್ಧಿಗೆ ಬಹಳ ಮುಖ್ಯವಾದ ಕಾರ್ಯಕ್ರಮ ಇದಾಗಿದೆ ಎಂದು ತಿಳಿಸಿದರು. ಚಳುವಳಿಯಲ್ಲಿ ತೊಡಗಿರುವ ಎಲ್ಲಾ ಉದ್ಯೋಗಿಗಳಿಗೆ ತರಬೇತಿ ಮತ್ತು ಶಿಕ್ಷಣವು ಚಳುವಳಿಯ ಒಟ್ಟಾರೆ ಬೆಳವಣಿಗೆಗೆ ಬಹಳ ಅವಶ್ಯಕವಾಗಿದೆ. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಉತ್ತಮ ಕೆಲಸ ಮಾಡುತ್ತಿದೆ ವಿಶೇಷವಾಗಿ 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ಈ ತರಬೇತಿ ಕಾರ್ಯಕ್ರಮದಲ್ಲಿ ನಮ್ಮ ದಕ್ಷತೆಯನ್ನು ಹೆಚ್ಚಿಸುವ ಹಲವು ವಿಷಯಗಳು ಹಾಗೂ ತರಬೇತಿ ಅಗತ್ಯ ಎಂದು ತಿಳಿಸಿದರು.

**ಗುರಿಗಳನ್ನು ಸಾಧಿಸಲು ತಂತ್ರಜ್ಞಾನವನ್ನು ಬಳಸಿಕೊಳ್ಳಿ – ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**



ಕಾರ್ಯಕ್ರಮದ ಅಧ್ಯಕ್ಷತೆಯನ್ನು ನೆರವೇರಿಸಿ ಮಾತನಾಡಿದ ಶ್ರೀ ಜಿ.ನಂಜನ್‌ಗೌಡ ಅವರು ಈ ಹಿಂದೆ ಸಂಯುಕ್ತ ಸಹಕಾರಿಯು ಬ್ಯಾಂಕಿಂಗ್ ತರಬೇತಿಯ ಕಾರ್ಯಕ್ರಮವನ್ನು ನಡೆಸಲಾಗುತ್ತಿತ್ತು. ಆದರೆ ಈ ತರಬೇತಿಯನ್ನು ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ಆಗಿ ಬದಲಾಯಿಸಲಾಗಿದೆ ಎಂದು ಹೇಳಿದರು. ಇದಲ್ಲದೆ, ಕೋರ್ಸ್ ವಿಭಿನ್ನ ಅಧ್ಯಯನ ಸಾಮಗ್ರಿಗಳನ್ನು ಒಳಗೊಂಡಿರುವ ವಿಶಿಷ್ಟ ವೈಶಿಷ್ಟಗಳನ್ನು ಹೊಂದಿದೆ ಎಂದು ಅವರು ಹೇಳಿದರು. ಪ್ರತಿಯೊಬ್ಬರೂ ಈ ಕೋರ್ಸ್ ಅನ್ನು ಬಳಸಿಕೊಳ್ಳಬೇಕು. ಇದು ಎಲ್ಲರಿಗೂ ಕಲಿಕೆಗೆ ಉತ್ತಮ ವೇದಿಕೆಯಾಗಿದೆ. ತಂತ್ರಜ್ಞಾನ ಯುಗದಲ್ಲಿ, ನಮ್ಮ ಗುರಿಗಳನ್ನು ಸಾಧಿಸಲು ನಾವು ತಂತ್ರಜ್ಞಾನವನ್ನು ಕಲಿಯಬೇಕು ಮತ್ತು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.



**ಪ್ರತಿಯೊಬ್ಬ ಉದ್ಯೋಗಿಗೆ ಕೆಲಸದ ಬಗ್ಗೆ ಬದ್ಧತೆ ಮತ್ತು ಸಾಮಾನ್ಯ ಜ್ಞಾನದ ಅಗತ್ಯವಿದೆ. – ಶ್ರೀ ರಘುರಾಮ ರೆಡ್ಡಿ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾ–ರಿಯ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿ ರವರು ತರಬೇತಿ ಕಾರ್ಯಕ್ರಮವು ಎಲ್ಲರಿಗೂ ಸಮಗ್ರ ಜ್ಞಾನ ಸೆರೆಹಿಡಿಯುವ ಕಾರ್ಯಕ್ರಮವಾಗಿದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಈ ತರಬೇತಿ ಕಾರ್ಯಕ್ರಮವನ್ನು ಬಳಸಿಕೊಳ್ಳಬೇಕು ಎಂದು ತಿಳಿಸಿದರು. ಗ್ರಾಹಕರು ದೇವರು, ನಾವು ಅವರಿಗೆ ಉತ್ತಮ ಸೇವೆಗಳನ್ನು ಒದಗಿಸಬೇಕು. ನಾವು ಬದ್ಧತೆ ಮತ್ತು ಸಾಮಾನ್ಯ ಪ್ರಜ್ಞೆಯೊಂದಿಗೆ ಕೆಲಸ ಮಾಡಬೇಕು. ಪ್ರತಿಯೊಬ್ಬ ಉದ್ಯೋಗಿಗೆ ಕೆಲಸದ ಬಗ್ಗೆ ಬದ್ಧತೆ ಮತ್ತು ಸಾಮಾನ್ಯ ಜ್ಞಾನದ ಅಗತ್ಯವಿದೆ ಎಂದು ತಿಳಿಸಿದರು.



**ತರಬೇತಿ ಅಭಿವೃದ್ಧಿಯ ಉರುಗೋಲು – ಶ್ರೀ ಶರಣಗೌಡ ಜಿ. ಪಾಟೀಲ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣ ಮಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ ರವರು ಸಂಯುಕ್ತ ಸಹಕಾರಿಯ ವಿವಿಧ ತರಬೇತಿ ಕಾರ್ಯಕ್ರಮಗಳ ವಿವರ ನೀಡುತ್ತ ಸೌಹಾರ್ದ ಸಹಕಾರಿ ಬ್ಯಾಂಕುಗಳಿಗಾಗಿ ಪ್ರತಿವರ್ಷ ಜುಲೈ 1 ರಿಂದ 7 ರವರೆಗೆ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ಮಾಡಲಾಗುತ್ತದೆ. ಇದು 9ನೇ ತಂಡ. ತರಬೇತಿಯಿಂದ ಬ್ಯಾಂಕಿಂಗ್ ಚಟುವಟಿಕೆಗಳು ಅಭಿವೃದ್ಧಿಯ ಪಥದಲ್ಲಿ ಸಾಗಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಬೇಸಿಕ್ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ 86 ಪ್ರತಿನಿಧಿಗಳು ಭಾಗವಹಿಸಿದ್ದಾರೆ.

## ಕೇಂದ್ರದಲ್ಲಿ ಸಹಕಾರ ಸಚಿವಾಲಯ ಪ್ರಾರಂಭವಾಗಿ 4 ವರ್ಷ ಅಭಿವೃದ್ಧಿಗಾಗಿ ನಡೆ




ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ಪ್ರಾರಂಭವಾಗಿ ದಿನಾಂಕ 04.07.2025ಕ್ಕೆ 4 ವರ್ಷಗಳು, ಈ 4 ವರ್ಷಗಳಲ್ಲಿ ಕೇಂದ್ರ ಸಹಕಾರ ಸಚಿವಾಲಯದಿಂದ ಅನೇಕ ಮಹತ್ವದ ಕಾರ್ಯಗಳಿಗೆ ಚಾಲನೆ ನೀಡಲಾಗಿದೆ. ರಾಷ್ಟ್ರಾದ್ಯಂತ ಎಲ್ಲಾ ರಾಜ್ಯಗಳಲ್ಲಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ನಡೆಯನ್ನು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಗಳ ಮೂಲಕ ಹಾಗೂ ಬೆಂಗಳೂರಿನಲ್ಲಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿಯೂ ಸಹ ಹಮ್ಮಿಕೊಳ್ಳಲಾಯಿತು.

## ಪತ್ರಿಕಾ ಗೋಷ್ಠಿ



**ಉಡುಪಿ** : ದಿನಾಂಕ : 23.06.2025 ರಂದು ಸಾಮಾನ್ಯ ಕೇಂದ್ರ ಉದ್ಘಾಟನೆ ನಂತರ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ನಿರ್ದೇಶಕರುಗಳಾದ ಶ್ರೀ ಮಂಜುನಾಥ ಎಸ್.ಕೆ ಹಾಗೂ ಶ್ರೀಮತಿ ಭಾರತೀ ಜಿ. ಭಟ್ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಹಾಗೂ ಮುಂದಿನ ಕಾರ್ಯಯೋಜನೆಗಳ ಕುರಿತು ಪತ್ರಿಕಾಗೋಷ್ಠಿಯನ್ನು ನಡೆಸಿದರು.

## ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ



**ಹಾಸನ** : ದಿನಾಂಕ 14.06.2025ರಂದು ನಡೆದ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ, ಅರಕಲಗೂಡು, ಅರಸೀಕೆರೆ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಮತ್ತು ಉಪಾದ್ಯಕ್ಷರಿಗೆ "ಆಡಳಿತ ಪರಿಣಿತಿ ತರಬೇತಿ" ಕಾರ್ಯಕ್ರಮವನ್ನು ಬಿ.ಜಿ.ಎಸ್ ಸೌಹಾರ್ದ ಸಹಕಾರಿ ಸಂಘ, ತೇಜಸ್ವಿ ಕಾಂಪ್ಲೆಕ್ಸ್ ಶಿವಪ್ರಕಾಶ್ ನೇತ್ರಾಲಯ ಹತ್ತಿರ, ಚನ್ನರಾಯಪಟ್ಟಣ, ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ್ ಎಸ್.ಕೆ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಇವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಮದುಸೂಧನ್ ಜೆ. ಎನ್ ಅಧ್ಯಕ್ಷರು, ಬಿ.ಜಿ.ಎಸ್ ಸೌಹಾರ್ದ ಸಹಕಾರಿ, ಚನ್ನರಾಯಪಟ್ಟಣ ಇವರು ನೆರವೇರಿಸಿದರು. ಪ್ರಸ್ತಾವಿಕ ನುಡಿಯನ್ನು ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ನಡೆಸಿಕೊಟ್ಟರು.

ತರಬೇತಿ ಕಾರ್ಯಕ್ರಮದ ಅತಿಥಿಗಳಾಗಿ ಶ್ರೀ ಎಚ್.ಎಸ್ ನಾಗರಾಜಯ್ಯ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು(ನಿ), ಬೆಂಗಳೂರು. ಹಾಗೂ ಪ್ರೋ. ಹೆಚ್. ಸಿದ್ದೇಗೌಡ ನಿವೃತ್ತ ಪ್ರಾಂಶುಪಾಲರು, ಅಧ್ಯಕ್ಷರು ಸರ್ಕಾರಿ ನಿವೃತ್ತ ನೌಕರರ ಸಂಘ, ಚನ್ನರಾಯಪಟ್ಟಣ ಇವರು ಭಾಗವಹಿಸಿದ್ದರು. ಪ್ರಥಮ ಅವಧಿಯಲ್ಲಿ ಶ್ರೀ ಎಚ್.ಎಸ್ ನಾಗರಾಜಯ್ಯ, ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು(ನಿ),ಇವರು "ಸಹಕಾರಿ ಸಂಸ್ಥೆಗಳ ಆರ್ಥಿಕ ಶಿಸ್ತಿನ ನಿರ್ವಹಣೆಯಲ್ಲಿ ನಿರ್ದೇಶಕರ ಹಕ್ಕುಗಳು ಮತ್ತು ಜವಾಬ್ದಾರಿಗಳು" ಕುರಿತು ಹಾಗೂ ಎರಡನೇ ಅವಧಿಯಲ್ಲಿ "ಸೌಹಾರ್ದ ಸಹಕಾರಿ ಕ್ಷೇತ್ರ ಮತ್ತು ಸಹಕಾರಿ ನಾಯಕತ್ವ" ಈ ವಿಷಯದ ಕುರಿತ ಎಸ್.ಕೆ. ಮಂಜುನಾಥ್, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಸ್ವಾಗತ ಮತ್ತು ನಿರೂಪಣೆಯನ್ನು ಶ್ರೀ ಅಶೋಕ ಜಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆ ಇವರು ಹಾಗೂ ವಂದನಾರ್ಪಣೆಯನ್ನು ಶ್ರೀ ಮಧುಸೂದನ್ ಜೆ.ಎನ್, ಅಧ್ಯಕ್ಷರು, ಬಿ.ಜಿ.ಎಸ್ ಸೌಹಾರ್ದ, ಚನ್ನರಾಯಪಟ್ಟಣ ಇವರು ನಡೆಸಿಕೊಟ್ಟರು. ಈ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 25 ಸಹಕಾರಿಗಳಿಂದ 53 ಜನ ಪ್ರತಿನಿಧಿಗಳು ಭಾಗವಹಿಸಿ ತರಬೇತಿಯ ಪ್ರಯೋಜನವನ್ನು ಪಡೆದುಕೊಂಡರು.

# ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಧಾರವಾಡ :** ದಿನಾಂಕ 20.06.2025 ರಂದು ಧಾರವಾಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ವಿಷಯಾಧಾರಿತ ತರಬೇತಿಯನ್ನು ಹೋಟೆಲ್ ಮಂತ್ರ ರೆಸಿಡೆನ್ಸಿ, ಹುಬ್ಬಳ್ಳಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿ ಇವರು ನೆರವೇರಿಸಿದರು. ತರಬೇತಿಯಲ್ಲಿ ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಆರ್.ಆರ್.ಕುಲಕರ್ಣಿ ಇವರು ಉಪನ್ಯಾಸ ನೀಡಿದರು. ಜಿ.ಎಸ್.ಟಿ ಕುರಿತು ಸನ್ನದು ಲೆಕ್ಕಪರಿಶೋಧಕರಾದ ಶ್ರೀ ನರಸಿಂಹ ಭಟ್ ಇವರು ಉಪನ್ಯಾಸ ನೀಡಿದರು. ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ ವಿಷಯದ ಕುರಿತು ಶ್ರೀ ಗಂಗಾರಾಮ ಕೊಳಾಪ್ಪೆ, ಅಧಿಕಾರಿಗಳು ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ಇವರು ಮಾಹಿತಿ ನೀಡಿದರು. ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ನುಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ ಕಂಬಾರ ಇವರು ಕಾರ್ಯಕ್ರಮ ನಿರೂಪಿಸಿದರು. ತರಬೇತಿಯಲ್ಲಿ ಒಟ್ಟು 68 ಸೌಹಾರ್ದ ಸಹಕಾರಿಗಳಿಂದ 78 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.

---



**ವಿಜಯಪುರ:** ದಿನಾಂಕ 23.06.2025 ರಂದು ವಿಜಯಪುರ ಜಿಲ್ಲೆಯ ಸಿಂದಗಿ, ಆಲಮೇಲ, ದೇವರಹಿಪ್ಪರಗಿ ಹಾಗೂ ವಿಜಯಪುರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ವಿಷಯಾಧಾರಿತ ತರಬೇತಿಯನ್ನು ಶ್ರೀ ಶಾಂತೇಶ್ವರ ವಿವಿಧ ಉದ್ದೇಶಗಳ ಸಹಕಾರ ಸಂಘ ನಿ., ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು.ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ ಇವರು ನೇರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಾಮನಗೌಡ ಬ ಪಾಟೀಲ ಇವರು ವಹಿಸಿದ್ದರು. ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ ವಿಷಯದ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಇವರು ಮಾಹಿತಿ ನೀಡಿದರು. ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಸನ್ನದು ಲೆಕ್ಕಪರಿಶೊಧಕರಾದ ಶ್ರೀ ಕಮಲಕರ ಕದಂ ಇವರು ಉಪನ್ಯಾಸ ನೀಡಿದರು. ಪ್ರಾಸ್ತಾವಿಕ ನುಡಿಗಳನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ ಎಸ್ ಇವರು ನುಡಿದರು. ಶ್ರೀಮತಿ ಪ್ರತಿಭಾ ಮಠ ಇವರು ಕಾರ್ಯಕ್ರಮ ನಿರೂಪಿಸಿದರು.ಈ ತರಬೇತಿಯಲ್ಲಿ ಒಟ್ಟು 106 ಸೌಹಾರ್ದ ಸಹಕಾರಿಗಳಿಂದ 124 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.

---



**ವಿಜಯಪುರ:** ದಿನಾಂಕ 24.06.2025 ರಂದು ವಿಜಯಪುರ ಜಿಲ್ಲೆಯ ಇಂಡಿ, ಚಡಚಣ, ಮುದ್ದೇಬಿಹಾಳ, ತಾಳಿಕೋಟ, ನಿಡಗುಂದಿ, ಕೋಲ್ಹಾರ, ಬಬಲೇಶ್ವರ, ಬಸವನ ಬಾಗೇವಾಡಿ ಹಾಗೂ ತಿಕೋಟಾ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ವಿಷಯಾಧಾರಿತ ತರಬೇತಿಯನ್ನು ಶ್ರೀ ಶಾಂತೇಶ್ವರ ವಿವಿಧ ಉದ್ದೇಶಗಳ ಸಹಕಾರ ಸಂಘ ನಿ., ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು.ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಸಹಕಾರಿಗಳಾದ ಶ್ರೀ ಅಮರನಾಥ ಬಿರಾದಾರ ಇವರು ನೇರವೇರಿಸಿದರು. ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ ವಿಷಯದ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಇವರು ಮಾಹಿತಿ ನೀಡಿದರು. ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಸನ್ನದು ಲೆಕ್ಕಪರಿಶೊಧಕರಾದ ಶ್ರೀ ಕಮಲಕರ ಕದಂ ಇವರು ಉಪನ್ಯಾಸ ನೀಡಿದರು. ಪ್ರಾಸ್ತಾವಿಕ ನುಡಿಗಳನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಸವರಾಜ ಎಸ್ ಇವರು ನುಡಿದರು. ಶ್ರೀಮತಿ ಪ್ರತಿಭಾ ಮಠ ಇವರು ಕಾರ್ಯಕ್ರಮ ನಿರೂಪಿಸಿದರು. ಈ ತರಬೇತಿಯಲ್ಲಿ ಒಟ್ಟು 102 ಸೌಹಾರ್ದ ಸಹಕಾರಿಗಳಿಂದ 119 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.



**ಬೆಳಗಾವಿ :** ದಿನಾಂಕ 27.06.2025 ರಂದು ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ನಿಪ್ಪಾಣಿ, ಕಾಗವಾಡ ಮತ್ತು ರಾಯಭಾಗ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ವಿಷಯಾಧಾರಿತ ತರಬೇತಿಯನ್ನು ಶ್ರೀ ಸಾಯಿ ಸಭಾ ಭವನ, ಚಿಕ್ಕೋಡಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ನೇರವೇರಿಸಿದರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಅಮೃತ ಜೋಶಿ ಇವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಮಹಾಂತೇಶ ಹೋಸಪೇಟ ಇವರು ಉಪನ್ಯಾಸ ನೀಡಿದರು. ವ್ಯವಹಾರ ಅಭಿವೃದ್ಧಿ ಮತ್ತು ಗ್ರಾಹಕ ಸಂಬಂಧ ನಿರ್ವಹಣೆ ವಿಷಯದ ಕುರಿತು ವಿಕಾಸ ಕೋ–ಆಪ್ ಬ್ಯಾಂಕ್, ಹೊಸಪೇಟೆ ನಿರ್ದೇಶಕರಾದ ಶ್ರೀ ಅಮೃತ ಜೋಶಿ ಇವರು ಉಪನ್ಯಾಸ ನೀಡಿದರು. ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೋಂಗಲ ಇವರು ನುಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಜವಾಹರ ಎಮ್ ಇವರು ಕಾರ್ಯಕ್ರಮ ನಿರೂಪಿಸಿದರು. ಈ ತರಬೇತಿಯಲ್ಲಿ ಒಟ್ಟು 154 ಸೌಹಾರ್ದ ಸಹಕಾರಿಗಳಿಂದ 168 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.



**ಬಾಗಲಕೋಟೆ :** ದಿನಾಂಕ 14 ಮತ್ತು 15 ಜೂನ್, 2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಬಾಗಲಕೋಟೆ ಜಿಲ್ಲೆಯ ಮುಧೋಳ, ಜಮಖಂಡಿ, ರಬಕವಿ–ಬನಹಟ್ಟಿ ಹಾಗೂ ತೇರದಾಳ ತಾಲೂಕಿನ ಸೌಹಾರ್ದ ಸಹಕಾರಿಗಳ ನೇತೃತ್ವದಲ್ಲಿ ಸಹಕಾರಿಗಳ ಸಿಬ್ಬಂದಿಗಳಿಗಾಗಿ ಎರಡು ದಿನಗಳ ಕ್ರೀಡಾಕೂಟವನ್ನು ಜಮಖಂಡಿ ತಾಲೂಕು ಕ್ರೀಡಾಂಗಣ, ಜಮಖಂಡಿ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಚಿತ್ರದುರ್ಗ ಜಿಲ್ಲೆಯ ಮಾನ್ಯ ಸಂಸದರಾದ ಶ್ರೀ ಗೊವಿಂದ ಕಾರಜೋಳ, ಇವರು ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ತೇರದಾಳ ಮತಕ್ಷೇತ್ರದ ಶಾಸಕರಾದ ಶ್ರೀ ಸಿದ್ದು ಸವದಿ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಎನ್. ಪಾಟೀಲ, ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಸಾಗರ ಚವಜ ಇವರು ಆಗಮಿಸಿದ್ದರು. ವೇದಿಕೆ ಮೇಲೆ ಹಲವು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಉಪಸ್ಥಿತರಿದ್ದರು. ಈ ಕ್ರೀಡಾಕೂಟದಲ್ಲಿ 152 ಸಹಕಾರಿಗಳಿಂದ 437 ಆಟಗಾರರು ಭಾಗವಹಿಸಿದ್ದರು.



**ಗದಗ:** ದಿನಾಂಕ 26.06.2025 ರಂದು ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ವಿಷಯಾಧಾರಿತ ತರಬೇತಿಯನ್ನು ಐ.ಎಮ್.ಎ ಹಾಲ್ ಗದಗ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ ದೇಶಪಾಂಡೆ ಇವರು ನೇರವೇರಿಸಿದರು. ದಾವಾ ದಾಖಲಾತಿ ಹಾಗೂ ಸಾಲ ವಸೂಲಾತಿ ವಿಷಯದ ಕುರಿತು ಶ್ರೀ ವಿ.ಜಿ.ಕುಲಕರ್ಣಿ, ಸಹಕಾರ ಅಭಿವೃದ್ಧಿ ಅಧಿಕಾರಿ(ನಿ) ಇವರು ಉಪನ್ಯಾಸ ನೀಡಿದರು.ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ವಿಷಯದ ಕುರಿತು ಸನ್ನದು ಲೆಕ್ಕಪರಿಶೋಧಕರಾದ ಶ್ರೀ ನಾಗರಾಜ ಸಂಪಗಾಂವ ಇವರು ಉಪನ್ಯಾಸ ನೀಡಿದರು. ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೋಂಗಲ ಇವರು ನುಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಗಂಗಮ್ಮ ನಾಯ್ಕರ ಇವರು ಕಾರ್ಯಕ್ರಮ ನಿರೂಪಿಸಿದರು. ಈ ತರಬೇತಿಯಲ್ಲಿ ಒಟ್ಟು 35 ಸೌಹಾರ್ದ ಸಹಕಾರಿಗಳಿಂದ 45 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.

**ಬೆಳಗಾವಿ :** ದಿನಾಂಕ 21–06–2025 ರಂದು ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ ರವರ ಜನ್ಮದಿನದ ಅಂಗವಾಗಿ ಅವರಿಗೆ ಪ್ರಾಂತದ ಹಲವಾರು ಸೌಹಾರ್ದ ಸಹಕಾರಿಗಳು ತಮ್ಮ ಕಚೇರಿ & ವಿವಿಧ ಸ್ಥಳಗಳಲ್ಲಿ ಬ್ಯಾನರ್ ಅಳವಡಿಸುವ ಮೂಲಕ ಹಾರೈಸಿದರು.



**ಚಿಕ್ಕಬಳ್ಳಾಪುರ :** ದಿನಾಂಕ 24.06.2025ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯ ನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನ, ಚಿಕ್ಕಬಳ್ಳಾಪುರ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ಹಾಗೂ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಅಮರ್, ಅಧ್ಯಕ್ಷರು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ಇವರು ಭಾಗವಹಿಸಿದ್ದರು. ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ನೆರವೇರಿಸಿದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಮ್. ಇವರು ನಡೆಸಿಕೊಟ್ಟರು. ತರಬೇತಿಯಲ್ಲಿ 24 ಸೌಹಾರ್ದ ಸಹಕಾರಿಗಳಿಂದ 44 ಪ್ರತಿನಿಧಿಗಳು ಭಾಗವಹಿಸಿದ್ದರು.



**ಮೈಸೂರು :** ದಿನಾಂಕ : 28.06.2025ರಂದು ಮೈಸೂರು ಜಿಲ್ಲೆಯಲ್ಲಿ ಕಡಿಮೆ ದುಡಿಯುವ ಬಂಡವಾಳ ಹೊಂದಿದ ಎಲ್ಲ ಸೌಹಾರ್ದ ಸಹಕಾರಿಗಳು ತಮ್ಮ ದುಡಿಯುವ ಬಂಡವಾಳವನ್ನು ವ್ಯವಹಾರದ ಗಾತ್ರವನ್ನು ಮತ್ತಷ್ಟು ಹೆಚ್ಚಿಸಿಕೊಂಡು ಇನ್ನೂ ಉತ್ತಮವಾಗಿ ಕಾರ್ಯನಿರ್ವಹಿಸಿ ಅಭಿವೃದ್ಧಿ ಪಥದಲ್ಲಿ ಮುಂದುವರಿಯಬೇಕು ಎಂಬ ಉದ್ದೇಶದಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಇದರ ವತಿಯಿಂದ ಹಾಗೂ ಮೈಸೂರು ಕೊಡಗು ಮತ್ತು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಇವರ ಸಹಕಾರದೊಂದಿಗೆ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ ಅಧಿಪ್ರೇರಣೆ ಎಂಬ ಹೆಸರಿನಲ್ಲಿ ಕ್ಲಸ್ಟರ್ ತರಬೇತಿಯನ್ನು ದಿನಾಂಕ 28.06.2025 ಶನಿವಾರ ಬೆಳಿಗ್ಗೆ 10.00 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಇದರ ಪ್ರಾಂತೀಯ ಕಛೇರಿ, ಶಂಕರ ಮಠ ರಸ್ತೆ, 1ನೇ ಕ್ರಾಸ್, ನಟರಾಜ ಸಭಾಭವನ ಹತ್ತಿರ, ಮೈಸೂರು. ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಉದ್ಘಾಟನೆಯನ್ನು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾರಾಯಣ ರಾವ್ ರವರು ನೆರವೇರಿಸಿದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಕಾರ್ಯಕ್ರಮದ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಹಾಗೂ ವಂದನಾರ್ಪಣೆಯನ್ನು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎಸ್. ಸಿ ಭಗೀರಥ ರವರು ನೆರವೇರಿಸಿದರು. ಕಾರ್ಯಕ್ರಮದ ಮೊದಲನೆಯ ಅವಧಿಯನ್ನು ಮಾನ್ಯ ನಿವೃತ್ತ ಬ್ಯಾಂಕ್ ಅಧಿಕಾರಿಗಳಾದ ಶ್ರೀ ಹೆಚ್.ಎಸ್.ಕೃಷ್ಣಮೂರ್ತಿ ಇವರು ಸಹಕಾರಿ ಸಂಸ್ಥೆಯನ್ನು ಉನ್ನತಿಕರಿಸುವಲ್ಲಿ ವ್ಯವಹಾರಭಿವೃದ್ಧಿ ಯೋಜನೆ ವಿಷಯದ ಕುರಿತು ಹಾಗೂ ಮಾನ್ಯ ನಿವೃತ್ತ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರಾದ ಶ್ರೀ ರತನ್ ನಾಯಕ್ ರವರು ಸಹಕಾರಿಯ ಹಣಕಾಸು ನಿರ್ವಹಣೆ ಮತ್ತು ದಾಖಲಾತಿ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. ಸದರಿ ಕ್ಲಸ್ಟರ್ ಮಟ್ಟದ ತರಬೇತಿಯಲ್ಲಿ ಒಟ್ಟು 30 ಸೌಹಾರ್ದ ಸಹಕಾರಿಗಳಿಂದ 44 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



**ದಾವಣಗೆರೆ :** ದಿನಾಂಕ 28.06.2025ರಂದು ದಾವಣಗೆರೆ ಜಿಲ್ಲೆಯಲ್ಲಿ 2021ನೇ ಸಾಲಿನ ನಂತರ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯ ನಿರ್ವಾಹಕರುಗಳಿಗಾಗಿ ಪ್ರವೇಶ ತರಬೇತಿಯನ್ನು ದಾವಣಗೆರೆ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ಹಾಗೂ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಟಿ. ವೀರೇಶ್ ರವರು ಭಾಗವಹಿಸಿದ್ದರು. ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ಇವರು ನೆರವೇರಿಸಿದರು. ವಂದನಾರ್ಪಣೆಯನ್ನು ಕಿರಿಯ ಸಹಾಯಕರಾದ ಶ್ರೀ ಯೋಗೇಶ್ ವೈ.ಎಸ್. ಇವರು ನಡೆಸಿಕೊಟ್ಟರು. ಒಟ್ಟು 11 ಸೌಹಾರ್ದ ಸಹಕಾರಿಗಳಿಂದ 34 ಪ್ರತಿನಿಧಿಗಳು ಭಾಗವಹಿಸಿದ್ದರು.

# ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ



**ಕೊಡಗು** : ದಿನಾಂಕ: 10.06.2025ರಂದು ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಹಾಗೂ ಮೈಸೂರು ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇವರ ಸಹಕಾರದೊಂದಿಗೆ ಕೊಡವ ಎಂಟರ್ಪ್ರೆನ್ಯೂರ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಕೊಡವ ಸಮಾಜ ಕಾಂಪ್ಲೆಕ್ಸ್, ಮುಖ್ಯ ರಸ್ತೆ, ಮಡಿಕೇರಿ. ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಉದ್ಘಾಟನೆಯನ್ನು ಕೊಡವ ಎಂಟರ್ಪ್ರೆನ್ಯೂರ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಇದರ ಮಾನ್ಯ ಉಪಾಧ್ಯಕ್ಷರಾದ ಶ್ರೀ ರಾಮಪ್ಪ ಎಂ ಎ ರವರು ನೆರವೇರಿಸಿದರು. ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾರಾಯಣ ರಾವ್ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಕಾರ್ಯಕ್ರಮದ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಹಾಗೂ ವಂದನಾರ್ಪಣೆಯನ್ನು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಎಸ್. ಸಿ ಭಗೀರಥ ರವರು ನೆರವೇರಿಸಿದರು.

ಕಾರ್ಯಕ್ರಮದ ಮೊದಲನೆಯ ಅವಧಿಯನ್ನು ಶ್ರೀ ಶೇಖರ್ ಪಿ ಇವರು ಸಾಲದ ಕಡತಗಳ ನಿರ್ವಹಣೆ ಹಾಗೂ ಸಾಲ ವಸೂಲಾತಿ ವಿಷಯದ ಕುರಿತು ಹಾಗೂ ಎರಡನೇ ಅವಧಿಯಲ್ಲಿ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಆಡಳಿತ ಮಂಡಲಿ ಹಾಗೂ ಸಾಮಾನ್ಯ ಸಭೆ ನಡೆಸುವ ವಿಧಾನಗಳು ಕುರಿತು ಉಪನ್ಯಾಸ ನೀಡಿದರು. ಸದರಿ ಕ್ಲಸ್ಟರ್ ಮಟ್ಟದ ತರಬೇತಿಯಲ್ಲಿ ಒಟ್ಟು 14 ಸೌಹಾರ್ದ ಸಹಕಾರಿಗಳಿಂದ 22 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



**ಚಾಮರಾಜನಗರ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಚಾಮರಾಜನಗರ ಜಿಲ್ಲೆಯಲ್ಲಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ "ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ"ವನ್ನು ದಿನಾಂಕ 19.06.2025ರಂದು "ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘ ನಿ., 1ನೇ ಮಹಡಿ, ಪಿಕಾರ್ಡೋ ಆಸ್ಪತ್ರೆ ಎದುರುಗಡೆ, ಬಿ. ರಾಚಯ್ಯ ಜೋಡಿ ರಸ್ತೆ, ಚಾಮರಾಜನಗರ ಈ ಕಛೇರಿಯ ಸಭಾಂಗಣದಲ್ಲಿ ತರಬೇತಿಯನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆ & ಅಧ್ಯಕ್ಷತೆಯನ್ನು ಶ್ರೀ ಬಾಲಸುಬ್ರಹ್ಮಣ್ಯ ಎಸ್, ಮಾನ್ಯ ನಿರ್ದೇಶಕರು, ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘ ನಿ., ಇವರು ವಹಿಸಿದ್ದರು. ಈ ಸಭೆಯಲ್ಲಿ ಶ್ರೀ ಗುರುಪ್ರಸಾದ್ ಬಂಗೇರಾ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಸ್ಥಾವಿಕ ನುಡಿಯನ್ನು ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ಅಧಿಕಾರಿ ಇವರು ನುಡಿದರು. ಕಾರ್ಯಕ್ರಮದ ಸ್ವಾಗತ ಮತ್ತು ನಿರೂಪಣೆಯನ್ನು ಶ್ರೀ ಬಲರಾಮ್ ಎನ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ನೆರವೇರಿಸಿದರು ಹಾಗೂ ವಂದನಾರ್ಪಣೆಯನ್ನು ಶ್ರೀ ಶಿವಕುಮಾರ್ ಮುಖ್ಯ ಕಾರ್ಯನಿರ್ವಾಹಕರು, ನವ್ಯ ಕರ್ನಾಟಕ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ.,ಚಾಮರಾಜನಗರ ಇವರು ಮಾಡಿದರು. ಈ ಕಾರ್ಯಗಾರದಲ್ಲಿ "ಸೌಹಾರ್ದ ಸಹಕಾರಿಗಳಲ್ಲಿ ವ್ಯವಹಾರಾಭಿವೃದ್ಧಿ ಯೋಜನೆ" ಎಂಬ ವಿಷಯದ ಕುರಿತು ಶ್ರೀ ಶೇಖರ್ ಪಿ ರವರು ಉಪನ್ಯಾಸವನ್ನು ನೀಡಿದರು ನಂತರ ಸೌಹಾರ್ದ ಸಹಕಾರಿಗಳಲ್ಲಿ "ಸಾಮಾನ್ಯ ಸಭೆ, ಆಡಳಿತ ಮಂಡಲಿ ಸಭೆ ಪ್ರಕ್ರಿಯೆಗಳು ಹಾಗೂ ಕಾಯ್ದೆ ಕಲಂ 34ರ ಮಾಹಿತಿ ಸಲ್ಲಿಸುವ ಕುರಿತು ಶ್ರೀ ಗುರುಪ್ರಸಾದ್ ಬಂಗೇರ ರವರು ಉಪನ್ಯಾಸ ನೀಡಿದರು, ಸದರಿ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 24 ಸೌಹಾರ್ದ ಸಹಕಾರಿಗಳಿಂದ 25 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಂಗಳೂರು** : ದಿನಾಂಕ 17.06.2025ರಂದು ದಾಸರಹಳ್ಳಿ ವಿದಾನಸಭಾ ಕ್ಷೇತ್ರದ ಸೌಹಾರ್ದ ಸಹಕಾರಿಗಳಿಗಾಗಿ ಸೌಂದರ್ಯ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ಬೆಂಗಳೂರು ಇಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್. ಇವರು ಉಪಸ್ಥಿತರಿದ್ದರು. ದಾವಾ ದಾಖಲಾತಿ ಮತ್ತು ಸಾಲಾ ವಸೂಲಾತಿ ಹಾಗೂ ಚುನಾವಣಾ ಪೂರ್ವ ಅನುಸರಿಸಬೇಕಾದ ಕ್ರಮಗಳು ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ 09 ಸಹಕಾರಿಗಳಿಂದ ಸಿಬ್ಬಂದಿಗಳು ಹಾಗೂ ಮುಖ್ಯಕಾರ್ಯನಿರ್ವಾಹಕರನ್ನು ಒಳಗೊಂಡು 11 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಂಗಳೂರು** : ದಿನಾಂಕ 23.06.2025ರಂದು ಬಸವನಗುಡಿ ವಿಧಾನಸಭಾ ಕ್ಷೇತ್ರದ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಸೀತರಾಮ ಮಂದಿರಂ ಸೌಹಾರ್ದ ಸಹಕಾರಿ ನಿ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಮುಖ್ಯಕಾರ್ಯನಿರ್ವಾಹಕರ ಕರ್ತವ್ಯ ಮತ್ತು ಜವಾಬ್ದಾರಿಗಳು, ಲೆಕ್ಕಪ–ರಿಶೊಧನೆಗೆ ತೆಗೆದುಕೊಳ್ಳಬಹುದಾದ ಕ್ರಮಗಳು, ಚುನಾವಣಾ ಪೂರ್ವ ಅನುಸರಿಸಬೇಕಾದ ಕ್ರಮಗಳು ಹಾಗೂ ಸಹಕಾರಿಗಳಲ್ಲಿನ ಪ್ರಸ್ತುತ ಸಮಸ್ಯೆಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಮ್. ಇವರು ಚರ್ಚಿಸಿದರು. ಒಟ್ಟು 8 ಸಹಕಾರಿಗಳಿಂದ ಸಿಬ್ಬಂದಿಗಳು ಹಾಗೂ ಮುಖ್ಯಕಾರ್ಯನಿರ್ವಾಹಕರನ್ನು ಒಳಗೊಂಡು 10 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ರಾಯಚೂರು** : ದಿನಾಂಕ 23.06.2025 ರಂದು ಕಲಬುರಗಿ ಪ್ರಾಂತದ ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಬೆಳಿಗ್ಗೆ 10.00 ಗಂಟೆಗೆ ಕ್ಲಸ್ಟರ್ ಮಟ್ಟದ ತರಬೇತಿ ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಸ್ಕಿ ಈ ಸಹಕಾರಿಯ ಕೇಂದ್ರ ಕಛೇರಿಯ ಆವರಣದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ ಲೆಕ್ಕಪರಿಶೋಧನಾ ಪೂರ್ವ ತಯಾರಿ ಹಗೂ ಇತರೇ ಶಾಸನಾತ್ಮಕ ಕರ್ತವ್ಯಗಳ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮಾಹಿತಿ ನೀಡಿದರು. ರಾಯಚೂರು ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಟರಾಜರವರು ಮತ್ತು ಮಸ್ಕಿ ತಾಲೂಕಿನ 27 ಸೌಹಾರ್ದ ಸಹಕಾರಿಗಳಿಂದ 35 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 23.06.2025 ರಂದು ಕಲಬುರಗಿ ಪ್ರಾಂತದ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಮಧ್ಯಾಹ್ನ 3.00 ಗಂಟೆಗೆ ಕ್ಲಸ್ಟರ್ ಮಟ್ಟದ ತರಬೇತಿ ತುಂಗಭದ್ರಾ ಸೌಹಾರ್ದ ಸಹಕಾರಿ ಸಂಘ ನಿ., ಸಿಂಧನೂರು ಈ ಸಹಕಾರಿಯ ಕಛೇರಿಯ ಆವರಣದಲ್ಲಿ ಆಯೋಜಿಸಲಾಗಿ–ತ್ತು. ಈ ತರಬೇತಿಯಲ್ಲಿ ಲೆಕ್ಕಪರಿಶೋಧನಾ ಪೂರ್ವ ತಯಾರಿ ಹಾಗೂ ಇತರೇ ಶಾಸನಾತ್ಮಕ ಕರ್ತವ್ಯಗಳ ಕುರಿತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ರಾಯಚೂರು ಜಿಲ್ಲಾ ಸೌಹಾರ್ದ ಸಹಕಾ–ರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಂ. ದೊಡ್ಡ ಬಸವರಾಜ ರವರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ನಟರಾಜ ಮತ್ತು ಆಂಜನೇಯ್ಯನವರು ಉಪಸ್ಥಿತರಿದ್ದರು. ಸಿಂಧನೂರು ತಾಲೂಕಿನ 68 ಸೌಹಾರ್ದ ಸಹಕಾರಿಗಳಿಂದ 80 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 24.06.2025 ರಂದು ಮಂಗಳವಾರದಂದು ಬೆಳಿಗ್ಗೆ 10.00 ಗಂಟೆಗೆ ರಾಯಚೂರು ಜಿಲ್ಲೆಯ ರಾಯಚುರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕೋಠಾರಿ ಪಂಕ್ಷನ್ ಹಾಲ್, ಸ್ಟೇಶನ್ ರೋಡ್ ರಾಯಚೂರುನಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ ಲೆಕ್ಕಪ–ರಿಶೋಧನಾ ವರದಿಯ ಪೂರ್ವ ತಯಾರಿ ಮತ್ತು ಇತರೇ ಶಾಸನಾತ್ಮಕ ಕರ್ತವ್ಯಗಳ ಬಗ್ಗೆ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ರಾಯಚೂರು ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಟರಾಜ ಮತ್ತು ಆಂಜನೇಯ್ಯನವರು ಉಪಸ್ಥಿತ–ರಿದ್ದರು. ರಾಯಚೂರು ತಾಲೂಕಿನ 28 ಸೌಹಾರ್ದ ಸಹಕಾರಿಗಳಿಂದ 35 ಪ್ರತಿನಿಧಿಗಳು ಉಪಸ್ಥಿತರಿದ್ದರು.

ದಿನಾಂಕ 24.06.2025 ರಂದು ಮಂಗಳವಾರದಂದು ಮಧ್ಯಾಹ್ನ 3.00 ಗಂಟೆಗೆ ರಾಯಚೂರು ಜಿಲ್ಲೆಯ ಸಿರವಾರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಸಿರವಾರ ಹೆಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿ ಸಂಘ ನಿ.,ಸಿರವಾರನಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ ಲೆಕ್ಕಪ–ರಿಶೋಧನಾ ವರದಿಯ ಪೂರ್ವ ತಯಾರಿ ಮತ್ತು ಇತರೇ ಶಾಸನಾತ್ಮಕ ಕರ್ತವ್ಯಗಳ ಬಗ್ಗೆ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಮಾಹಿತಿ ನೀಡಿದರು. ವಾರ್ಷಿಕ ಸಾಮಾನ್ಯ ಸಭೆಯ ಜರುಗಿಸುವ ಬಗ್ಗೆ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಟರಾಜರವರು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಸಿರವಾರ ಹೆಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಅಯ್ಯನಗೌಡ ರವರು, ರಾಯಚೂರು ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಟರಾಜ ಮತ್ತು ಆಂಜನೇಯ್ಯನವರು ಉಪಸ್ಥಿತರಿದ್ದರು. ಸಿರವಾರ ತಾಲೂಕಿನ 21 ಸೌಹಾರ್ದ ಸಹಕಾರಿಗಳಿಂದ 30 ಪ್ರತಿನಿಧಿಗಳು ಉಪಸ್ಥಿತರಿದ್ದರು.

**ದಕ್ಷಿಣ ಕನ್ನಡ** : ದಿನಾಂಕ 14.06.2025ರ ಶನಿವಾರದಂದು ಕರ್ನಾಟಕ ರಾಜ್ಯ ವಿದ್ಯುತ್ ಗುತ್ತಿಗೆದಾರರ ಸೌಹಾರ್ದ ಸಹಕಾರಿ ಸಂಘ ನಿ. ಯೆಯ್ಯಾಡಿ, ಮಂಗಳೂರು ತಾ. ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ ಸದರಿ ಸೌಹಾರ್ದ ಸಹಕಾರಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಸಿಬ್ಬಂದಿ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವಿಜಯ್ ಬಿ.ಎಸ್. ಮತ್ತು ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಂದನ್ ಬಿ.ಎನ್ ಇವರು ಭಾಗವಹಿಸಿ ಸಿಬ್ಬಂದಿಗಳ ಕರ್ತವ್ಯಗಳು ಮತ್ತು ಜವಬ್ದಾರಿಗಳ ಕುರಿತು, ಸಾಲ ವಸೂಲಾತಿ ಮತ್ತು ಸೌಹಾರ್ದ ಕಾಯ್ದೆ ಮತ್ತು ಉಪವಿಧಿಗಳ ಕು–ರಿತಂತೆ ಅಗತ್ಯ ಉಪನ್ಯಾಸವನ್ನು ನೀಡಿದರು. ಈ ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ಮತ್ತು ಎಲ್ಲಾ ಸಿಬ್ಬಂದಿ ವರ್ಗದವರು ಹಾಜ–ರಿದ್ದರು.

**ಬೆಂಗಳೂರು** : ದಿನಾಂಕ 13.06.2025ರಂದು ಬ್ಯಾಟರಾಯನಪುರ ವಿದಾನಸಭಾ ಕ್ಷೇತ್ರದ ಸೌಹಾರ್ದ ಸಹಕಾರಿಗಳಿಗಾಗಿ ಶ್ರೀ ಚಿದಂಬರ

ಸೌಹಾರ್ದ ಪತ್ತಿನ ಸಹಕಾರಿ ನಿ, ಬೆಂಗಳೂರು ಇಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಮತ್ತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ಕೆ.ಆರ್. ಇವರು ಉಪಸ್ಥಿತರಿದ್ದರು. ದಾವಾ ದಾಖಲಾತಿ ಮತ್ತು ಸಾಲಾ ವಸೂಲಾತಿ ಹಾಗೂ ಚುನಾವಣಾ ಪೂರ್ವ ಅನುಸರಿಸಬೇಕಾದ ಕ್ರಮಗಳು ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ 08 ಸಹಕಾರಿಗಳಿಂದ ಸಿಬ್ಬಂದಿಗಳು ಹಾಗೂ ಮುಖ್ಯಕಾರ್ಯನಿರ್ವಾಹಕರನ್ನು ಒಳಗೊಂಡು 10 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಂಗಳೂರು** : ದಿನಾಂಕ 27.06.2025 ರಂದು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಅಡಿಕೆನಾಡು ಸೌಹಾರ್ದ ಕ್ರೆಡಿಟ್ ಸಹಕಾರಿ ನಿ, ಜಯನಗರ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸಂಯುಕ್ತ ಸಹಕಾರಿಯ ಶಾಸನಬದ್ಧ ಕರ್ತವ್ಯಗಳು ಹಾಗೂ ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿಗಳ ಕುರಿತು ಚರ್ಚಿಸಲಾಯಿತು. ವಾರ್ಷಿಕ ವಂತಿಗೆ, ಶಿಕ್ಷಣ ನಿಧಿ, ಲೆಕ್ಕಪರಿಶೋಧನಾ ವರದಿಗೆ ಕ್ರಮವಿಟ್ಟಿರುವ ಕುರಿತು ಚರ್ಚಿಸಲಾಯಿತು. ಲೆಕ್ಕಪರಿಶೊಧಕರ ನೇಮಕ ಹಾಗೂ ನೇಮಕಾತಿ ಪತ್ರ ನೀಡಿರುವ ಕುರಿತು ಚರ್ಚಿಸಲಾಯಿತು. ಸಹಕಾರಿಗಳಲ್ಲಿನ ಸುಸ್ತಿ ಸಾಲಗಳಿಗೆ ಸೌಹಾರ್ದ ನ್ಯಾಯಾಲಯದಲ್ಲಿ ದಾವೆ ಹೂಡಲು ಸೂಚಿಸಲಾಯಿತು. ಚುನಾವಣಾ ಅವಧಿ ಮುಕ್ತಾಯಗೊಳ್ಳುವ ಸಹಕಾರಿಗಳಿಗೆ 6 ತಿಂಗಳ ಮುಂಚಿತವಾಗಿ ಚುನಾವಣಾ ಪ್ರಾಧಿಕಾರಕ್ಕೆ ಪತ್ರ ಸಲ್ಲಿಸಲು ಸೂಚಿಸಲಾಯಿತು. ಕಲಂ 34ರ ಮಾಹಿತಿಯನ್ನು ಭರ್ತಿ ಮಾಡಿ ಸಲ್ಲಿಸಲು ಸೂಚಿಸಲಾಯಿತು. ಆಧಾರ ರಹಿತ ಸಾಲವನ್ನು ಕಡ್ಡಾಯವಾಗಿ ನೀಡಬಾರದೆಂದು ಸೂಚಿಸಲಾಯಿತು. ಸಾಮಾನ್ಯ ಸಭೆಗೆ ಕ್ರಮವಿಟ್ಟಿರುವ ಬಗ್ಗೆ ಚರ್ಚಿಸಲಾಯಿತು. ಅಂತಿಮವಾಗಿ ಸಹಕಾರಿಯಲ್ಲಿ ಆಳಿತ ಮಂಡಳಿ. ಅವ್ಯವಹಾರ, ವಂಚನೆ, ಮೋಸ ಮಾಡುತಿದ್ದಲ್ಲಿ ಕೂಡಲೇ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸಲು ಸೂಚಿಸಲಾಯಿತು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಮ್. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 10 ಜನರು ಭಾಗವಹಿಸಿದ್ದರು.

**ರಾಯಚೂರು** : ದಿನಾಂಕ 26.06.2025 ಗುರುವಾರ ಮಧ್ಯಾಹ್ನ 3.30 ಗಂಟೆಗೆ ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಾಗಾರವನ್ನು ರಡ್ಡೆರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ.,ಲಿಂಗಸೂಗೂರು ಈ ಸಹಕಾರಿಯ ಕೇಂದ್ರ ಕಚೇರಿಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಲೆಕ್ಕಪರಿಶೋಧನ ವರದಿ ಪೂರ್ವ ತಯಾರಿ ಹಾಗೂ ಇತರೆ ಶಾಸನಾತ್ಮಕ ಕರ್ತವ್ಯಗಳ ಬಗ್ಗೆ ಕಲಬುರಗಿ ಪ್ರಾಂತಿಯ ಅಧಿಕಾರಿಗಳಾದ ಶ್ರೀ ಸೂರ್ಯ ಕಾಂತ ರ್‍ಯಾಕಲೆ ರವರು ಮಾಹಿತಿ ನೀಡಿದರು. ಈ ಸಂಧರ್ಭದಲ್ಲಿ ರಾಯಚೂರು ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಂ. ದೊಡ್ಡ ಬಸವರಾಜ ರವರು, ಒಕ್ಕೂಟದ ನಿರ್ದೇಶಕರುಗಳಾದ ಶ್ರೀ ಬಸವರಾಜ್ ದೊಣಮರಡಿಯವರು ,ಗ್ಯಾನಪ್ಪ ರವರು, ಶ್ರೀ ಶಿವಪ್ರಕಾಶ ಸೌಹಾರ್ದ ಸಹಕಾರಿ ನಿ., ದ ಅಧ್ಯಕ್ಷರಾದ ಶಿವಪ್ರಕಾಶ್ ರವರು, ರಾಯಚೂರು ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ನಟರಾಜ ರವರು, ಆಂಜಿನೇಯ ರವರು ಉಪಸ್ಥಿತರಿದ್ದರು. ಲಿಂಗಸೂಗೂರು ತಾಲ್ಲೂಕಿನ 32 ಸೌಹಾರ್ದ ಸಹಕಾರಿಗಳಿಂದ ಒಟ್ಟು 38 ಜನ ಪ್ರತಿನಿಧಿಗಳು ಈ ತರಬೇತಿಯಲ್ಲಿ ಭಾಗವಹಿಸಿದ್ದರು

## ಅಂತರರಾಷ್ಟ್ರೀಯ ಪರಿಸರ ದಿನಾಚರಣೆ



**ಕಲಬುರಗಿ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಂಗಳೂರು ಇದರ ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವೃಕ್ಷ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದರು. ಮಾನ್ಯರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಪ್ರತಿ ಸಹಕಾರಿಗಳು ತಮ್ಮ ಕಛೇರಿ ಆವರಣದಲ್ಲಿ ಎರಡರಿಂದ ಮೂರು ವೃಕ್ಷಗಳನ್ನು ನೆಡುವುದರ ಮುಖಾಂತರ ಪರಿಸರ ದಿನಾಚರಣೆ ಅರ್ಥಪೂರ್ಣವಾಗಿ ಆಚರಿಸಬೇಕೆಂದು ಕರೆ ನೀಡಿದರು. ಹಸಿರೆ ಉಸಿರಾಗಲಿ ಎಂದು ಘೋಷ ವಾಕ್ಯ ನೀಡಿದರು. ಈ ಸಂದರ್ಭದಲ್ಲಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಸಂಜಿವ ಮಹಾಜನ ಇವರು ಮಾತನಾಡಿ ಸೌಹಾರ್ದ ಸಹಕಾರಿಗಳು ಕೂಡ ಪರಿಸರ ದಿನಾಚರಣೆಯನ್ನು ಆಚರಣೆ ಮಾಡಿ ಪರಿಸರವನ್ನು ಸಂರಕ್ಷಣೆ ಮಾಡಬೇಕೆಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಕಲಬುರ್ಗಿ ಜಿಲ್ಲಾ ಸಹಕಾರಿಗಳ ಒಕ್ಕೂಟದ ಮಾಜಿ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪರಸರೆಡ್ಡಿಯವರು ಹಾಗೂ ಡಿ ಕೆ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಬಾಬುರಾವ ಕುಲಕರ್ಣಿ, ಕಲಬುರ್ಗಿ ನಗರದ ಸೌಹಾರ್ದ ಸಹಕಾರಿಗಳು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ ಹಾಗೂ ಕಛೇರಿಯ ಸಿಬ್ಬಂದಿ ವರ್ಗದವರು ವಿಶ್ವ ಪರಿಸರ ದಿನಾಚರಣೆಯಲ್ಲಿ ಭಾಗವಹಿಸಿದರು.

## ಸೌಹಾರ್ದ ಸಹಕಾರಿ ಸ್ಥಾಪನೆಗಾಗಿ ಪ್ರವರ್ತಕರ ಸಭೆ

**ಮೈಸೂರು** : ದಿನಾಂಕ: 06.06.2025 ನೂತನ ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸುವ ದೃಷ್ಟಿಯಿಂದ ಕೊಪ್ಪ, ಪಿರಿಯಾಪಟ್ಟಣದಲ್ಲಿ ಶ್ರೀಮತಿ ಮಂಜುನಾಥಸ್ವಾಮಿ ರವರ ಅಧ್ಯಕ್ಷತೆಯಲ್ಲಿ ಪ್ರವರ್ತಕರ ಸಭೆಯನ್ನು ಆಯೋಜಿಸಲಾಗಿತ್ತು. ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಮಾಹಿತಿಯನ್ನು ನೀಡಿದ್ದರು. ಸದರಿ ಸಭೆಯಲ್ಲಿ ಒಟ್ಟು 10 ಜನ ಭಾಗವಹಿಸಿದ್ದರು.

**ಮೈಸೂರು** : ದಿನಾಂಕ: 26.05.2025 ನೂತನ ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸುವ ದೃಷ್ಟಿಯಿಂದ ಮೈಸೂರು ಚಾಮರಾಜ ಜೋಡಿರಸ್ತೆ, ಮೈಸೂರು ನಗರದಲ್ಲಿ ಶ್ರೀಮತಿ ಪವಿತ್ರ ರವರ ಅಧ್ಯಕ್ಷತೆಯಲ್ಲಿ ಪ್ರವರ್ತಕರ ಸಭೆಯನ್ನು ಆಯೋಜಿಸಲಾಗಿತ್ತು. ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ ಒಟ್ಟು 9 ಜನ ಭಾಗವಹಿಸಿದ್ದರು.

**ಮೈಸೂರು** : ದಿನಾಂಕ: 26.05.2025 ನೂತನ ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸುವ ದೃಷ್ಟಿಯಿಂದ ಮೈಸೂರು ಪ್ರಾಂತೀಯ ಕಛೇರಿಯಲ್ಲಿ ಶ್ರೀ ಅಜಯ್ ರವರ ಅಧ್ಯಕ್ಷತೆಯಲ್ಲಿ ಪ್ರವರ್ತಕರ ಸಭೆಯನ್ನು ಆಯೋಜಿಸಲಾಗಿತ್ತು. ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಹಾಗೂ ಸೌಹಾರ್ದ ಚಳುವಳಿಯ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ ಒಟ್ಟು 10 ಜನ ಭಾಗವಹಿಸಿದ್ದರು.

## ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ

**ದಕ್ಷಿಣ ಕನ್ನಡ** : ದಿನಾಂಕ 30.05.2025ರ ಶುಕ್ರವಾರದಂದು ದಕ್ಷಿಣ ಕನ್ನಡ ಜಿಲ್ಲಾ ಕಛೇರಿಯಲ್ಲಿ ಕರ್ನಾಟಕ ವಿದ್ಯುತ್ ಗುತ್ತಿಗೆದಾರರ ಸೌಹಾರ್ದ ಸಹಕಾರಿ ಸಂಘ ನಿ. ಆಡಳಿತ ಮಂಡಳಿ ಸದಸ್ಯರ ಸಭೆಯನ್ನು ಏರ್ಪಡಿಸಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಾಂತೀಯ ಅಧಿಕಾರಿ ಶ್ರೀ ಗುರುಪ್ರಸಾದ್ ಬಂಗೇರ ಯವರು, ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವಿಜಯ್ ಬಿ.ಎಸ್. ಮತ್ತು ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಂದನ್ ಬಿ.ಎನ್ ರವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಸಕಕಾರಿಗಳ ಕಾರ್ಯಚಟುವಟಿಕೆಗಳ ಬಗೆ ಮಾಹಿತಿಯನ್ನು ಪಡೆದು ಸಹಕಾರಿಯು ಸರಿಪಡಿಸಬೇಕಾದ ನ್ಯೂನ್ಯತಾ ಅಂಶಗಳ ಕುರಿತಂತೆ ಹಾಜರಿದ್ದ ಎಲ್ಲಾ ಸದಸ್ಯರ ಗಮನಕ್ಕೆ ತಂದು ಸರಿಪಡಿಸಿಕೊಂಡ ವರದಿಯನ್ನು ನೀಡಲು ಅಗತ್ಯ ಮಾರ್ಗದರ್ಶನ ಮಾಡಲಾಯಿತು.

**ದಕ್ಷಿಣ ಕನ್ನಡ** : ದಿನಾಂಕ 30.05.2025ರ ಶುಕ್ರವಾರದಂದು ದಕ್ಷಿಣ ಕನ್ನಡ ಜಿಲ್ಲಾ ಕಛೇರಿಯಲ್ಲಿ ಜನ್ಮಭೂಮಿ ಸ್ವಸಹಾಯ ಸೌಹಾರ್ದ ಸಹಕಾರಿ ಸಂಘ ನಿ. ಆಡಳಿತ ಮಂಡಳಿ ಸದಸ್ಯರ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಪ್ರಾಂತೀಯ ಅಧಿಕಾರಿ ಶ್ರೀ ಗುರುಪ್ರಸಾದ್ ಬಂಗೇರ ಯವರು, ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವಿಜಯ್ ಬಿ.ಎಸ್. ಮತ್ತು ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ನಂದನ್ ಬಿ.ಎನ್ ರವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಸಹಕಾರಿ ಕಾರ್ಯಚಟುವಟಿಕೆಗಳ ಬಗೆ ಮಾಹಿತಿಯನ್ನು ಪಡೆದು ಸಹಕಾರಿಯು ಸರಿಪಡಿಸಬೇಕಾದ ನ್ಯೂನ್ಯತಾ ಅಂಶಗಳ ಕುರಿತಂತೆ ಹಾಜರಿದ್ದ ಎಲ್ಲಾ ಸದಸ್ಯರ ಗಮನಕ್ಕೆ ತಂದು ಸರಿಪಡಿಸಿಕೊಂಡ ವರದಿಯನ್ನು ನೀಡಲು ಅಗತ್ಯ ಮಾರ್ಗದರ್ಶನ ಮಾಡಲಾಯಿತು.

**ಬೆಂಗಳೂರು** : ದಿನಾಂಕ 23.06.2025ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಮ್. ಇವರು ಯುನಿಫೈಡ್ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ, ಬೆಂಗಳೂರು ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಠೇವಣಿದಾರರ ದೂರಿಗೆ ಸಂಬಂಧಿಸಿದಂತೆ ತೆಗೆದುಕೊಂಡಿರುವ ಕ್ರಮಗಳ ಕುರಿತು ಚರ್ಚಿಸಿ ಠೇವಣಿದಾರರ ಹಣವನ್ನು ಮರುಪಾವತಿಸಲು ಕ್ರಮ ಕೈಗೊಂಡು ವರದಿಯನ್ನು ಸಂಯುಕ್ತ ಸಹಕಾರಿಗೆ ಸಲ್ಲಿಸಲು ತಿಳಿಸಿದರು.

ದಿನಾಂಕ 28.06.2025ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಏಕಲವ್ಯ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ತುಮಕೂರು ಸಹಕಾರಿಯ ನೂತನ ಆಡಳಿತ ಮಂಡಳಿ ಸದಸ್ಯರ ಮೊದಲ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಸಹಕಾರಿಯು ಸೌಹಾರ್ದ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲು ಮಾಡಿರುವುದರ ಕುರಿತಂತೆ ಮುಂದಿನ ಹಂತಗಳಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ವಿ.ಎನ್. ಮೂರ್ತಿರವರು, ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.

## ಜೂನ್ 2025 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

**1. ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಿರುವ ಕುರಿತು.**

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ 03 ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಕಾಯ್ದೆ ಕಲಂ 38ಎ ರನ್ವಯ ಜೂನ್ ತಿಂಗಳಲ್ಲಿ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

**2. ಸಮಾಪನಾಧಿಕಾರಿ ನೇಮಕವಾಗಿರುವ ಸೌಹಾರ್ದ ಸಹಕಾರಿಗಳ ವಿವರ :**

| ಕ್ರ.ಸಂ. | ಸಹಕಾರಿಯ ಹೆಸರು | ನೇಮಕಾತಿ ಪ್ರಾಧಿಕಾರ | ಆದೇಶದ ದಿನಾಂಕ | ಸಮಾಪನಾಧಿಕಾರಿಯ ಹೆಸರು |
|---|---|---|---|---|
| 1 | ದಿ ಸಿಟಿಜನ್ ವೆಲ್‌ಫೇರ್ ಸೌಹಾರ್ದ ಪತ್ತಿನ ಸಹಕಾರಿ ನಿ., 1ನೇ ಮಹಡಿ, ಯಶಸ್ ಪ್ಲಾಜಾ, ಗಾಂಧಿ ವರ್ತುಲ ಹತ್ತಿರ, ದೊಡ್ಡಬಳ್ಳಾಪುರ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ | ಸಹಕಾರಿಗಳ ಸಹಾಯಕ ನಿಬಂಧಕರು, ದೊಡ್ಡಬಳ್ಳಾಪುರ | 21-02-2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ. |
| 2 | ದಿ ಭಾರತ್ ಸೌಹಾರ್ದ ಪತ್ತಿನ ಸಹಕಾರಿ ನಿ., ಕಾರಂಜಿ ಕಟ್ಟೆ, ಕೋಲಾರ | ಸಹಕಾರಿಗಳ ಉಪ ನಿಬಂಧಕರು, ಕೋಲಾರ ಜಿಲ್ಲೆ | 29.03.2025 | ಶಶಿಕುಮಾರ್ ಎಸ್. ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕೋಲಾರ ಜಿಲ್ಲೆ |
| 3 | ಎಸ್.ಎಸ್. ಸೌಹಾರ್ದ ಪತ್ತಿನ ಸಹಕಾರಿ ನಿ., ಅಗಸರ ಬೀದಿ, ಚಿಕ್ಕಮಗಳೂರು | ಸಹಕಾರಿಗಳ ಸಹಾಯಕ ನಿಬಂಧಕರು, ಚಿಕ್ಕಮಗಳೂರು | 16.06.2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಹಾಸನ ಮತ್ತು ಚಿಕ್ಕಮಗಳೂರು |
| 4 | ಸಾಧನಾ ಸ್ವ-ಶಕ್ತಿ ಸೌಹಾರ್ದ ಸ್ವ-ಸಹಾಯ ಸಹಕಾರಿ ನಿ., ಮನೆ ನಂ. 1-7-39/ಅ, ಮಾತೃಕೃಪ, ಸಿಂಧನೂರು, ರಾಯಚೂರು ಜಿಲ್ಲೆ | ಸಹಕಾರಿಗಳ ಉಪ ನಿಬಂಧಕರು, ರಾಯಚೂರು ಜಿಲ್ಲೆ | 29.03.2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ರಾಯಚೂರು ಜಿಲ್ಲೆ |
| 5 | ಜನೋದಯ ಸ್ವಶಕ್ತಿ ಸೌಹಾರ್ದ ಸ್ವ-ಸಹಾಯ ಸಹಕಾರಿ ನಿ., ಮಾನ್ವಿ ತಾಲೂಕು, ರಾಯಚೂರು ಜಿಲ್ಲೆ | ಸಹಕಾರಿಗಳ ಉಪ ನಿಬಂಧಕರು, ರಾಯಚೂರು ಜಿಲ್ಲೆ | 29.03.2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮಾನವಿ |
| 6 | ಕಲ್ಪತರು ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ರಾಯಚೂರು | ಸಹಕಾರಿಗಳ ಉಪ ನಿಬಂಧಕರು, ರಾಯಚೂರು ಜಿಲ್ಲೆ | 29.03.2025 | ಸಹಕಾರ ವಿಸ್ತರಣಾಧಿಕಾರಿ, ದೇವದುರ್ಗ (ಪ್ರಭಾರಿ) ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ರಾಯಚೂರು |
| 7 | ಶ್ರೀ ಶಿವ ಜನನಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., # 8-1-677, ಶಿವ ನಿಲಯ, ಶ್ರೀ ಸೂಗೂರೇಶ್ವರ ಕಾಲೋನಿ, ದೇವದುರ್ಗ ತಾಲೂಕು, ರಾಯಚೂರು ಜಿಲ್ಲೆ | ಸಹಕಾರಿಗಳ ಉಪ ನಿಬಂಧಕರು, ರಾಯಚೂರು ಜಿಲ್ಲೆ | 29.03.2025 | ಸಹಕಾರ ವಿಸ್ತರಣಾಧಿಕಾರಿ, ದೇವದುರ್ಗ (ಪ್ರಭಾರಿ) ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ರಾಯಚೂರು |

| | | | | |
|---|---|---|---|---|
| 8 | ಐಶ್ವರ್ಯ ಮಹಿಳಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಗಿಲ್ಲೆಸುಗೂರ ಕ್ಯಾಂಪ್, ರಾಯಚೂರು | ಸಹಕಾರಿಗಳ ಸಹಾಯಕ ನಿಬಂಧಕರು, ಸಿಂಧನೂರು | 26.03.2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ರಾಯಚೂರು ಜಿಲ್ಲೆ |
| 9 | ಶ್ರೀ ಭೋಗೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೆ/ಆಫ್ ಹೆಚ್. ಕೆ. ಗ್ರಾಫೀಕ್ಸ್, ಕಾರೋಬಾರಿ ಕಾಂಪ್ಲೆಕ್ಸ್, ಪ್ರಧಾನ ಅಂಚೆ ಕಛೇರಿ ಹತ್ತಿರ, ಡಿ.ಡಿ.ಪಿ.ಐ. ಆಫೀಸ್ ಹತ್ತಿರ, ರಾಯಚೂರು | ಸಹಕಾರಿಗಳ ಸಹಾಯಕ ನಿಬಂಧಕರು, ರಾಯಚೂರು | 26.03.2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ರಾಯಚೂರು ಜಿಲ್ಲೆ |
| 10 | ಗಂಗಾಮತ ನೌಕರರ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ತಿಮ್ಮಾಪೂರುಪೇಟೆ, ಗಂಗಾಪರಮೇಶ್ವರಿ ಕಾಂಪ್ಲೆಕ್ಸ್, ಮಂತ್ರಾಲಯ ರೋಡ್, ರಾಯಚೂರು | ಸಹಕಾರಿಗಳ ಸಹಾಯಕ ನಿಬಂಧಕರು, ರಾಯಚೂರು | 26.03.2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ರಾಯಚೂರು ಜಿಲ್ಲೆ |
| 11 | ದೇವಸಂಗಾ ಸೌಹಾರ್ದ ಪತ್ತಿನ ಸಹಕಾರಿ ನಿ., ದೇವಸೂಗೂರು, ರಾಯಚೂರು | ಸಹಕಾರಿಗಳ ಸಹಾಯಕ ನಿಬಂಧಕರು, ರಾಯಚೂರು | 26.03.2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ರಾಯಚೂರು ಜಿಲ್ಲೆ |
| 12 | ಶ್ರೀ ಶಿವಂ ಪತ್ತಿನ ಸೌಹಾರ್ದ ಸಹಕಾರಿ ನಿ., ಸಜ್ಜನ್ ಕಾಂಪ್ಲೆಕ್ಸ್, ಶಹಾಪುರ ರಸ್ತೆ, ದೇವದುರ್ಗ, ರಾಯಚೂರು | ಸಹಕಾರಿಗಳ ಸಹಾಯಕ ನಿಬಂಧಕರು, ರಾಯಚೂರು | 26.03.2025 | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ರಾಯಚೂರು ಜಿಲ್ಲೆ |
| 13 | ಶೃತಿ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು | ಸಹಕಾರಿಗಳ ಜಂಟಿ ನಿಬಂಧಕರು ಬೆಂಗಳೂರು ಪ್ರಾಂತ, ಬೆಂಗಳೂರು | 10-06-2025 | ಶ್ರೀ ಶ್ರೀಧರ್ ಎಸ್. ಸಹ ಪ್ರಧಾನ ವ್ಯವಸ್ಥಾಪಕರು ಹಾಗೂ ಬೆಂಗಳೂರು ಪ್ರಾಂತೀಯ ಅಧಿಕಾರಿ |

## ಉದ್ಘಾಟನೆ



**ಮೈಸೂರು** : ದಿನಾಂಕ : 29.06.2025ರಂದು ಟಿ ನರಸೀಪುರದಲ್ಲಿ ನೂತನವಾಗಿ ನೊಂದಣಿಯಾದ ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘ ನಿ., ಟಿ ನರಸೀಪುರ ಈ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಡಾ. ಶ್ರೀ ಸಿದ್ದಲಿಂಗ ಶಿವಾಚರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯವನ್ನು ವಹಿಸಿದ್ದರು. ಸಭೆಯ ಶ್ರೀ ಷಡಕ್ಷರ ದೇಶಿಕೇಂದ್ರ ಸ್ವಾಮಿಜೀ ರವರು ದಿವ್ಯ ಸಮ್ಮುಖದಲ್ಲಿ ಹಾಗೂ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಇವರ ದಿವ್ಯ ನೇತೃತ್ವದಲ್ಲಿ ಜರುಗಿತು. ಈ ಸಾಮಾನ್ಯ ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಬಿ. ಸುಗಂಧರಾಜು ರವರು ವಹಿಸಿದ್ದರು. ಈ ಸಂದರ್ಭದಲ್ಲಿ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ್ದ ಸದಸ್ಯರಿಗೆ ಮೈಸೂರು ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರವರು ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳು ಈ ವಿಷಯದ ಕುರಿತು ಮಾಹಿತಿಯನ್ನು ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರು ಸಹಕಾರಿಯ ಸದಸ್ಯರು ಹಾಗೂ ಸ್ಥಳೀಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ಸುರೇಶ್ ಆರ್ ಎಸ್ ರವರು ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಮಾನ್ಯ ಉಪಾಧ್ಯಕ್ಷರು ಹಾಗೂ ಮಾನ್ಯ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ




**ಕಲಬುರಗಿ** : ದಿನಾಂಕ 12.06.2025ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಬೆಂಗಳೂರು ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ಇವರು ಕೃಷ್ಣ ಪರಿವಾರ ಸೌಹಾರ್ದ ಸಹಕಾರಿ ಸಂಘ ನಿ ಕಲಬುರ್ಗಿ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆ ಪರಿಶೀಲಿಸಿದರು ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಕಲಬುರ್ಗಿ ಜಿಲ್ಲಾ ನಿರ್ದೇಶಕರಾದ ಮಾನ್ಯ ಶ್ರೀಮತಿ ಶೈಲಜ ತಪಲಿ, ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಹಾಗೂ ಕಲಬುರ್ಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ, ಕಲಬುರ್ಗಿ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ ಎಸ್ ಪಾಟೀಲ, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ದಿನಕರ ಹಾಗೂ ಪ್ರಸ್ತುತ ಸಹಕಾರಿಯ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



**ಕಲಬುರಗಿ** : ದಿನಾಂಕ 12.06.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಬೆಂಗಳೂರು ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ಇವರು ಶ್ರೀ ಆದಿಶಕ್ತಿ ಸೌಹಾರ್ದ ಸಹಕಾರಿ ಸಂಘ ನಿ., ಕಲಬುರ್ಗಿ ಸಹಕಾರಿಗೆ ಭೇಟಿ ನೀಡಿ ಸದರಿ ಸಹಕಾರಿಯ ಕಾರ್ಯಚಟುವಟಿಕೆ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಕಲಬುರ್ಗಿ ಜಿಲ್ಲಾ ನಿರ್ದೇಶಕರಾದ ಮಾನ್ಯ ಶ್ರೀಮತಿ ಶೈಲಜ ತಪಲಿ, ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಕಲಬುರ್ಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ, ಕಲಬುರ್ಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಶ್ರೀಮಂತ ಎನ್ ನವಲದಿ, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಬಾಲಚಂದ್ರ ನೆಲ್ಲೂರ ಹಾಗೂ ಸದರಿ ಸಹಕಾರಿಯ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.




**ಉಡುಪಿ** : ದಿನಾಂಕ 23.06.2025ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಸಾರಸ್ವತ ಸೌಹಾರ್ದ ಸಹಕಾರಿ ನಿ., ಸಂಸ್ಥೆಗೆ ಭೇಟಿ ನೀಡಿದರು ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ವಾಸುದೇವ ಕೃಷ್ಣ ನಾಯಕ್, ಉಪಾಧ್ಯಕ್ಷರಾದ ಶ್ರೀ ಮನೋಹರ ಮರಾಠೆ ಇವರು ನಮ್ಮ ಸಹಕಾರಿಗೆ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರಾದ ರಾಮದಾಸ್ ಪ್ರಭು, ಪಾಂಡುರಂಗ ಎಮ್. ನಾಯಕ್, ಸಹಕಾರಿಯ ಮುಖ್ಯ ಕಾರ್ಯ ನಿರ್ವಾಹಕ ಭುವನೇಶ್ ಪ್ರಭು, ಸಿಬ್ಬಂದಿಗಳಾದ ಸುನಿಲ್ ಸುರೇಶ್ ನಾಯಕ್, ಭಾರತಿ ನಾಯಕ್ ಉಪಸ್ಥಿತರಿದ್ದರು.

# ಸೌಹಾರ್ದ ಸಹಕಾರಿಗಳಲ್ಲಿ ಲೆಕ್ಕಪರಿಶೋಧನಾ ಪೂರ್ವಸಿದ್ಧತೆ

– ಶ್ರೀ ರಘುನಂದನ ಕೆ., ಯಲ್ಲಾಪುರ,

ಸಹಕಾರ ಸಂಸ್ಥೆಗಳಲ್ಲಿ ವಾರ್ಷಿಕವಾಗಿ ಎರಡು ಪ್ರಮುಖ ಕಾರ್ಯಕ್ರಮಗಳು ನಡೆಯುತ್ತವೆ. ಒಂದು ಆಂತರಿಕ ಸಂಗತಿಯಾದರೆ ಇನ್ನೊಂದು ಬಾಹ್ಯ ಸಂಗತಿ. ಆಂತರಿಕ ಸಂಗತಿಯೆಂದರೆ 'ಲೆಕ್ಕಪ–ರಿಶೋಧನೆ', ಬಾಹ್ಯ ಸಂಗತಿಯೆಂದರೆ 'ವಾರ್ಷಿಕ ಸಾಮಾನ್ಯ ಸಭೆ'. ಸದಸ್ಯರಿಗೆ, ಸಾರ್ವಜನಿಕರಿಗೆ, ಮೇಲ್ವಿಚಾರಣಾ ಸಂಸ್ಥೆಗಳಿಗೆ, ಇಲಾಖೆಗಳಿಗೆ ಸಹಕಾರಿ ಸಂಸ್ಥೆಯ ಯಶಸ್ಸು ಹಾಗೂ ಸ್ಥಿತಿಗತಿಗಳ ಮಾಹಿತಿ ಈ ಎರಡು ಸಂಗತಿಗಳಿಂದ ತಿಳಿದು ಬರುತ್ತದೆ. ಆದ್ದರಿಂದ ಸಹಕಾರಿಯ ಆಡಳಿತ ನಿರ್ವಹಣೆಯಲ್ಲಿ ಈ ಎರಡು ಕಾರ್ಯಕ್ರಮಗಳು ಬಹಳ ಮಹತ್ವದ ಸ್ಥಾನವನ್ನ ಹೊಂದಿವೆ.

ವರ್ಷಾಂತ್ಯದ ಕಾರ್ಯಗಳನ್ನು ಮುಕ್ತಾಯಗೊಳಿಸಿ, ಲೆಕ್ಕಪತ್ರಗಳನ್ನು ಅಂತಿಮಗೊಳಿಸಿ ಆಡಳಿತ ಮಂಡಳಿ ಸಭೆಯ ಅನುಮೋದನೆ ಪಡೆದು ಲೆಕ್ಕಪರಿಶೋಧಕರಿಗೆ ಲೆಕ್ಕಪತ್ರಗಳನ್ನು ಏಪ್ರಿಲ್ 30ರೊಳಗಾಗಿ ಸಲ್ಲಿಸಬೇಕಿರುವುದು ಶಾಸನಾತ್ಮಕ ಕರ್ತವ್ಯವಾಗಿರುವುದರಿಂದ, ಮೇ, ಜೂನ್ ಹಾಗೂ ಜುಲೈ ತಿಂಗಳುಗಳನ್ನು ಸಾಮಾನ್ಯವಾಗಿ ಲೆಕ್ಕಪರಿಶೋಧನೆ ನಡೆಯುವ ಸಮಯವೆಂದು ಪರಿಗಣಿಸಬಹುದು. ಹಾಗಾದರೆ, ಲೆಕ್ಕಪರಿಶೋಧನೆಗಾಗಿ ಸಹಕಾರಿ ಸಂಸ್ಥೆಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಹೇಗೆ ಪೂರ್ವಸಿದ್ಧತೆ ಮಾಡಿಕೊಳ್ಳಬೇಕು, ಪೂರ್ವ ಸಿದ್ಧತೆಯ ವಿಷಯದಲ್ಲಿ ಶಾಸನಾತ್ಮಕವಾಗಿ ನಿಭಾಯಿಸಬೇಕಾದ ಕರ್ತವ್ಯಗಳೇನು, ಲೆಕ್ಕಪರಿಶೋಧಕರಿಗೆ ಒದಗಿಸಬೇಕಾದ ದಾಖಲಾತಿಗಳೇನು ಎನ್ನುವ ಬಗ್ಗೆ ಒಂದಷ್ಟು ವಿವರಗಳನ್ನು ಗಮನಿಸೋಣ.

**ಲೆಕ್ಕಪರಿಶೋಧನೆ ಎಂದರೇನು? :**

ಲೆಕ್ಕಪರಿಶೋಧನೆಯ ಪೂರ್ವ ಸಿದ್ಧತೆಯ ಬಗ್ಗೆ ಗಮನಿಸುವ ಮೊದಲು ಲೆಕ್ಕಪರಿಶೋಧನೆ ಎಂದರೇನು, ಏಕೆ ಲೆಕ್ಕಪರಿಶೋಧನೆ ಅಗತ್ಯ ಎನ್ನುವ ವಿಷಯಗಳನ್ನ ತಿಳಿದುಕೊಳ್ಳುವುದು ಸೂಕ್ತ. ಲೆಕ್ಕಪರಿಶೋಧನೆ ಎಂದರೆ "ಯಾವುದೇ ಒಂದು ಸಂಸ್ಥೆಯ ಲೆಕ್ಕಪತ್ರಗಳನ್ನು ಮತ್ತು ಹಣ–ಕಾಸು ಮಾಹಿತಿಗಳನ್ನು ಸ್ವತಂತ್ರವಾಗಿ ಪರಿಶೀಲಿಸಿ, ಸಂಸ್ಥೆಯ ಆರ್ಥಿಕ ತಖ್ತೆಗಳು ಹಾಗೂ ಆರ್ಥಿಕ ಸ್ಥಿತಿಯ ಮೇಲೆ ಅಭಿಪ್ರಾಯ ವ್ಯಕ್ತಪಡಿಸುವ ವೃತ್ತಿಪರ ಪ್ರಕ್ರಿಯೆ" ಎಂದು ಹೇಳಬಹುದು.

ಈ ವ್ಯಾಖ್ಯಾನದಲ್ಲಿ ಗಮನಿಸಬೇಕಾದ ಮೂರು ಪ್ರಮುಖ ಶಬ್ದಗಳಿವೆ, ಮೊದಲನೆಯದಾಗಿ 'ಸ್ವಾತಂತ್ರ ಪರಿಶೀಲನೆ', ಅಂದರೆ ಲೆಕ್ಕಪ–ರಿಶೋಧನೆಯಲ್ಲಿ ಸಹಕಾರಿಯ ಎಲ್ಲ ದಾಖಲಾತಿಗಳ ಪರಿಶೀಲನೆಗೆ ಲೆಕ್ಕಪರಿಶೋಧಕರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ, ಎರಡನೆಯದಾಗಿ 'ಅಭಿಪ್ರಾಯ ವ್ಯಕ್ತಪಡಿಸುವಿಕೆ' ಅಂದರೆ ಸಹಕಾರಿಯ ಹಣಕಾಸು ಹಾಗೂ ಲೆಕ್ಕಪತ್ರಗಳ ಬಗ್ಗೆ ಲೆಕ್ಕಪರಿಶೋಧಕರು ತಮ್ಮ ಅಭಿಪ್ರಾಯ ದಾಖಲಿಸುತ್ತಾರೆ, ಲೆಕ್ಕಪರಿಶೋಧನಾ ವರದಿಯಲ್ಲಿನ ಎಲ್ಲ ಲೆಕ್ಕಪತ್ರ ಹಾಗೂ ಹಣಕಾಸು ಮಾಹಿತಿಗಳಿಗೆ ಸಹಕಾರಿ ಸಂಸ್ಥೆಯೇ ಜವಾಬ್ದಾರಿಯಾಗಿದ್ದು, ಅವುಗಳ ಮೇಲಿನ ಅಭಿಪ್ರಾಯ ಮಾತ್ರ ಲೆಕ್ಕಪರಿಶೋಧಕರದ್ದು. ಲೆಕ್ಕಪರಿಶೋಧನಾ ವರದಿಯ ಆರಂಭದಲ್ಲಿ ಲೆಕ್ಕಪರಿಶೋಧಕರು ತಮ್ಮ ದೃಢೀಕರಣ ಪತ್ರವನ್ನು ನೀಡುತ್ತಾರೆ, ಇದನ್ನು ಗಮನಿಸಿದಲ್ಲಿ ಈ ವಿಷಯ ಸ್ಪಷ್ಟವಾಗುತ್ತದೆ.

ಮೂರನೆಯದಾಗಿ 'ವೃತ್ತಿಪರ ಪ್ರಕ್ರಿಯೆ' ಅಂದರೆ ಯಾರ್‍ಯಾರಿಂದಲೋ ಲೆಕ್ಕಪರಿಶೋಧನೆ ನಡೆಸುವ ಹಾಗಿಲ್ಲ, ಲೆಕ್ಕಪರಿಶೋಧನೆ ನಡೆಸುವವರು ಹೊಂದಿರಬೇಕಾದ ವಿದ್ಯಾರ್ಹತೆ ಹಾಗೂ ಅನುಭವಗಳನ್ನು ನಿಗದಿಪಡಿಸಲಾಗಿದೆ. ಚಾರ್ಟರ್ಡ್ ಅಕೌಂಟೆಂಟ್ ವಿದ್ಯಾರ್ಹತೆ ಹೊಂದಿದವರು ಅಥವಾ ಸಹಕಾರ ಲೆಕ್ಕಪರಿಶೋಧನಾ ಇಲಾಖೆಯಲ್ಲಿನ ಅರ್ಹ ಅಧಿಕಾರಿಗಳು ಮಾತ್ರ ಲೆಕ್ಕಪರಿಶೋಧನೆ ನಡೆಸಬಹುದು. ಅಲ್ಲದೆ, ಸಹಕಾರ ಲೆಕ್ಕಪರಿಶೋಧನಾ ಇಲಾಖೆ ಪ್ರಕಟಿಸಿದ ಪಟ್ಟಿಯಲ್ಲಿರಬೇಕು ಹಾಗೂ ನಿಗದಿಪಡಿಸಿದ ಅನುಭವ ಹೊಂದಿರಬೇಕಾಗುತ್ತದೆ.

**ಲೆಕ್ಕಪರಿಶೋಧನೆಯನ್ನು ಏಕೆ ಮಾಡಬೇಕು? :** ಲೆಕ್ಕಪರಿಶೋಧನೆನ್ನು ಏಕೆ ಮಾಡಬೇಕು ಎಂದು ಗಮನಿಸುವುದಾದರೆ, ಒಂದಷ್ಟು ಬಾಹ್ಯ ಅನಿವಾರ್ಯತೆಗಳು ಹಾಗೂ ಒಂದಿಷ್ಟು ಆಂತರಿಕ ಅಗತ್ಯತೆಗಳು ಕಂಡುಬರುತ್ತವೆ.

ಬಾಹ್ಯ ಅನಿವಾರ್ಯತೆಯೆಂದರೆ – ಸೌಹಾರ್ದ ಸಹಕಾರಿ ಕಾಯ್ದೆ ಕಲಂ.33 ರನ್ವಯ ಲೆಕ್ಕಪರಿಶೋಧನೆ ಮಾಡುವುದು ಕಡ್ಡಾಯ, ಅಂದರೆ ಶಾಸನಾತ್ಮಕವಾಗಿ ಪ್ರತಿ ವರ್ಷ ಲೆಕ್ಕಪರಿಶೋಧನೆ ಆಗಲೇ ಬೇಕು, ಲೆಕ್ಕಪ–ರಿಶೋಧನೆ ಅನ್ನುವುದು ಸಹಕಾರ ಸಂಸ್ಥೆಯ ಪಾರದರ್ಶಕತೆ ಹಾಗೂ ವಿಶ್ವಾಸಾರ್ಹತೆಯ ಪ್ರತೀಕ, ಲೆಕ್ಕಪರಿಶೋಧನೆ ಆಗದಿದ್ದಲ್ಲಿ ಸಹಕಾರ ಸಂಸ್ಥೆಯ ಸಮರ್ಪಕ ಕಾರ್ಯನಿರ್ವಹಣೆಯ ಬಗ್ಗೆ ಅನುಮಾನಗಳುಂಟಾಗುತ್ತವೆ, ಸಂಸ್ಥೆ ಸರಿಯಾಗಿ ಕಾರ್ಯನಿರ್ವಹಿಸುತ್ತಿದೆ ಅನ್ನುವ ಅಭಿಪ್ರಾಯಕ್ಕಾಗಿ ಲೆಕ್ಕಪರಿಶೋಧನೆ ಬೇಕು, ಲೆಕ್ಕಪರಿಶೋಧನಾ ವರದಿ ಸಹಕಾರಿಯ ಆರ್ಥಿಕ ಸ್ಥಿತಿಯ ಅಧೀಕೃತ ಮಾಹಿತಿ ಎನಿಸಿಕೊಳ್ಳುತ್ತದೆ, ಸಹಕಾರಿಯ ದಾಖಲೆಗಳು ನಿಖರವಾಗಿ, ಪೂರ್ಣವಾಗಿ ಹಾಗೂ ನಿಯಮಾನುಸಾರವಾಗಿವೆ ಎಂದು ಖಚಿತಪಡಿಸುವ ಕೆಲಸ ಲೆಕ್ಕಪ–ರಿಶೋಧನೆಯಲ್ಲಾಗುತ್ತದೆ.

ಆಂತರಿಕ ಅಗತ್ಯತೆಗಳೆಂದರೆ – ಸಹಕಾರಿಯ ಆಂತರಿಕ ಆಡಳಿತ ವ್ಯವಸ್ಥೆ ಹಾಗೂ ಕಾರ್ಯನಿರ್ವಹಣೆಯ ಮೌಲ್ಯಮಾಪನಕ್ಕಾಗಿ, ಅವ್ಯವಹಾರ, ವಂಚನೆಗಳನ್ನು ಕಂಡುಹಿಡಿಯುವುದಕ್ಕಾಗಿ, ಸದಸ್ಯರ ವಿಶ್ವಾಸ ಗಳಿಸುವುದಕ್ಕಾಗಿ, ಅಪಾಯ ನಿರ್ವಹಣೆಯ ಯೋಜನೆಗಾಗಿ, ನಿರಂತರ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ಅಗತ್ಯತೆಗಳಿಗಾಗಿ ಲೆಕ್ಕಪ–ರಿಶೋಧನೆ ಸಹಾಯ ಮಾಡುತ್ತದೆ. ಸಹಕಾರಿಯ ಆರ್ಥಿಕ ಸ್ಥಿತಿ ಹಾಗೂ ಕಾರ್ಯಾಚರಣೆಯ ವಸ್ತು ನಿಷ್ಠ ಮೌಲ್ಯಮಾಪನಕ್ಕಾಗಿ ಲೆಕ್ಕಪರಿಶೋಧನೆ

ಅಗತ್ಯ.

**ಲೆಕ್ಕಪರಿಶೋಧನಾ ಪೂರ್ವ ಸಿದ್ಧತೆ :**

ಲೆಕ್ಕಪರಿಶೋಧನಾ ಪೂರ್ವ ಸಿದ್ಧತೆಯನ್ನು ಪ್ರಮುಖವಾಗಿ ನಾಲ್ಕು ಹಂತಗಳಲ್ಲಿ ವಿಭಾಗಿಸಬಹುದು, ಅವುಗಳೆಂದರೆ, 1. ಲೆಕ್ಕಪರಿಶೋಧಕರ ನೇಮಕಾತಿ, 2. ಲೆಕ್ಕಪತ್ರ ಅಂತಿಮಗೊಳಿಸುವುದು, 3. ಅಗತ್ಯ ಲೆಕ್ಕಪತ್ರಗಳು, ಅನುಸೂಚಿಗಳು, ದಾಖಲಾತಿಗಳ ಸಿದ್ದತೆ ಹಾಗೂ 4. ಲೆಕ್ಕಪರಿಶೋಧಕರಿಗೆ ದಾಖಲೆಗಳ ಸಲ್ಲಿಕೆ ಹಾಗೂ ಮಾಹಿತಿ ಪೂರೈಕೆ.ಈ ನಾಲ್ಕು ಹಂತಗಳ ಬಗ್ಗೆ ವಿವರವಾಗಿ ಗಮನಿಸೋಣ.

**ಲೆಕ್ಕಪರಿಶೋಧಕರ ನೇಮಕಾತಿ :**

1. ಲೆಕ್ಕಪರಿಶೋಧನಾ ಪೂರ್ವ ಸಿದ್ದತೆ ಮಾರ್ಚ್ 31ರ ವರ್ಷಾಂತ್ಯದ ನಂತರ ಆರಂಭವಾಗುತ್ತದೆ ಎಂದು ಬಹುತೇಕರು ಭಾವಿಸುತ್ತಾರೆ, ಆದರೆ ಸಹಕಾರ ಸಂಸ್ಥೆಗಳಲ್ಲಿ ಲೆಕ್ಕಪರಿಶೋಧನಾ ಪೂರ್ವ ಸಿದ್ಧತೆ ಆರಂಭವಾಗುವುದು ಪ್ರತೀ ವರ್ಷ ಸೆಪ್ಟೆಂಬರ್ 25 ರೊಳಗಾಗಿ ನಡೆಯುವ ವಾರ್ಷಿಕ ಸಾಮಾನ್ಯ ಸಭೆಯಿಂದ. ಏಕೆಂದರೆ, ಸೌಹಾರ್ದ ಸಹಕಾರಿ ಅಧಿನಿಯಮ ಕಲಂ.23(3)(ಬಿ) ಹಾಗೂ ಕಲಂ.33(2) ರನ್ವಯ ಲೆಕ್ಕಪರಿಶೋಧಕರ ನೇಮಕಾತಿಯನ್ನು ವಾರ್ಷಿಕ ಸಾಮಾನ್ಯ ಸಭೆಯಲ್ಲಿಯೇ ಮಾಡಿಕೊಳ್ಳಬೇಕಾಗುತ್ತದೆ. ಅಲ್ಲಿಂದಲೇ ಲೆಕ್ಕಪರಿಶೋಧನಾ ಪೂರ್ವ ಸಿದ್ದತೆ ಆರಂಭವಾಗುತ್ತದೆ. ಲೆಕ್ಕಪರಿಶೋಧಕರ ನೇಮಕಾತಿಯಲ್ಲಿ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ, ಅವುಗಳೆಂದರೆ

1. ಸಹಕಾರ ಲೆಕ್ಕಪರಿಶೋಧನಾ ಇಲಾಖೆ ತಯಾರಿಸಿದ ಲೆಕ್ಕಪರಿಶೋಧಕರ ಪಟ್ಟಿಯಲ್ಲಿರಬೇಕು. ಈ ಪಟ್ಟಿ www.sahakara-darpana.karnataka.gov.in ವೆಬ್‌ಸೈಟ್ ನಲ್ಲಿ ಲಭ್ಯವಿದೆ.
2. 25 ಕೋಟಿಗಿಂತ ಹೆಚ್ಚು ದುಡಿಯುವ ಬಂಡವಾಳವಿರುವ ಸಹಕಾರಿ ಸಂಸ್ಥೆಗಳು 'ಎ' ಪಟ್ಟಿಯಲ್ಲಿರುವ, 10 ಕೋಟಿಯಿಂದ 25 ಕೋಟಿಯವರೆಗೆ ದುಡಿಯುವ ಬಂಡವಾಳವಿರುವ ಸಹಕಾರಿ ಸಂಸ್ಥೆಗಳು 'ಬಿ' ಪಟ್ಟಿಯಲ್ಲಿರುವ, 10 ಕೋಟಿಗಿಂತ ಕಡಿಮೆ ದುಡಿಯುವ ಬಂಡವಾಳವಿರುವ ಸಹಕಾರಿ ಸಂಸ್ಥೆಗಳು 'ಸಿ' ಪಟ್ಟಿಯಲ್ಲಿರುವ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳಬೇಕು.
   ಗಮನಿಸಿ : 'ಎ' ಪಟ್ಟಿಯವರು 'ಎ', 'ಬಿ' ಮತ್ತು 'ಸಿ' ಪಟ್ಟಿಗೊಳಪಡುವ ಸಹಕಾರಿಗಳ ಹಾಗೂ 'ಬಿ' ಪಟ್ಟಿಯವರು 'ಬಿ' ಮತ್ತು 'ಸಿ' ಪಟ್ಟಿಗೊಳಪಡುವ ಸಹಕಾರಿಗಳ ಲೆಕ್ಕಪರಿಶೋಧನೆ ನಿರ್ವಹಿಸಬಹುದು.
3. ಲೆಕ್ಕಪರಿಶೋಧಕರ ನೇಮಕಾತಿ ಸಾಮಾನ್ಯ ಸಭೆಯಲ್ಲಿಯೇ ಆಗಬೇಕು, ಆಡಳಿತ ಮಂಡಳಿಗೆ ಅಥವಾ ಪದಾಧಿಕಾರಿಗಳಿಗೆ ಅಧಿಕಾರ ನೀಡುವಂತಿಲ್ಲ.
4. ಅನುಕ್ರಮವಾಗಿ ಎರಡು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಒಬ್ಬರನ್ನೇ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿಕೊಳ್ಳುವಂತಿಲ್ಲ.
5. ಸಹಕಾರಿಯ ದುಡಿಯುವ ಬಂಡವಾಳದ ಆಧಾರದಲ್ಲಿ ಸಹಕಾರ ಲೆಕ್ಕಪರಿಶೋಧನಾ ಇಲಾಖೆ ನೀಡಿರುವ ಮಾರ್ಗಸೂಚಿಯನ್ವಯ ಲೆಕ್ಕಪರಿಶೋಧನಾ ಶುಲ್ಕ ಪಾವತಿಸಬೇಕಾಗುತ್ತದೆ.

**ಲೆಕ್ಕಪರಿಶೋಧಕರಿಗೆ ನೇಮಕಾತಿ ಪತ್ರ :** ಅನೇಕ ಸಹಕಾರಿ ಸಂಸ್ಥೆಗಳು ಆರ್ಥಿಕ ವರ್ಷಾಂತ್ಯದ ನಂತರ ಲೆಕ್ಕಪರಿಶೋಧಕರಿಗೆ ನೇಮಕಾತಿ ಪತ್ರ ಕಳುಹಿಸುವ ಅಭ್ಯಾಸವನ್ನು ಹೊಂದಿದ್ದು ಇದು ಸರಿಯಾದ ಕ್ರಮವಲ್ಲ. ಸೌಹಾರ್ದ ಸಹಕಾರಿ ನಿಯಮ 8ಬಿ(8) ರನ್ವಯ ಸಾಮಾನ್ಯ ಸಭೆ ಮುಗಿದ ಏಳು ದಿನಗಳೊಳಗಾಗಿ ಸಾಮಾನ್ಯ ಸಭೆಯಲ್ಲಿ ನೇಮಕ ಮಾಡಲ್ಪಟ್ಟ ಲೆಕ್ಕಪರಿಶೋಧಕರಿಗೆ ನೇಮಕಾತಿ ಪತ್ರವನ್ನು ನೀಡಬೇಕು ಹಾಗೂ ಈ ಮಾಹಿತಿಯನ್ನು ಲೆಕ್ಕಪರಿಶೋಧನಾ ನಿರ್ದೇಶಕರಿಗೆ, ಸಂಯುಕ್ತ ಸಹಕಾರಿಗೆ ತಿಳಿಸಬೇಕಾಗುತ್ತದೆ.

**ಲೆಕ್ಕಪತ್ರ ಅಂತಿಮಗೊಳಿಸುವುದು :** ಆರ್ಥಿಕ ವರ್ಷಾಂತ್ಯದಲ್ಲಿ ಸಹಕಾರಿಯು ಲೆಕ್ಕಪತ್ರಗಳನ್ನು ಹಾಗೂ ತನ್ನ ಹಣಕಾಸು ತಖ್ತೆಗಳಾದ ಜಮಾ ಖರ್ಚು, ಲಾಭ ನಷ್ಟ ಹಾಗೂ ಆಸ್ತಿ ಜವಾಬ್ದಾರಿ ತಖ್ತೆಗಳನ್ನು ಅಂತಿಮಗೊಳಿಸಬೇಕು. ಹೀಗೆ ಅಂತಿಮಗೊಳಿಸುವಾಗ ಪ್ರಮುಖವಾಗಿ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕು.

1. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯಲಾದ ಲಾಭ ವಿಂಗಡಣೆಯನ್ವಯ ಹಿಂದಿನ ಸಾಲಿನ ಲಾಭವನ್ನು ಆಯಾ ನಿಧಿಗಳಿಗೆ ವರ್ಗಾಯಿಸಬೇಕು.
2. ಠೇವಣಿಯ ಮೇಲೆ ಕೊಡಬೇಕಾದ ಬಡ್ಡಿಯನ್ನು ಲೆಕ್ಕಾಚಾರ ಮಾಡಿ ಅಗತ್ಯ ಪ್ರಾವಧಾನ ಕಲ್ಪಿಸಬೇಕು.
3. ಹೂಡಿಕೆಗಳಿಗೆ ಸಂಬಂಧಿಸಿದ ಮಾರ್ಚ್ 31 ರವರೆಗಿನ ಆದಾಯದ ವಿವರಗಳನ್ನು ಪಡೆದು ದಾಖಲಿಸಬೇಕು.
4. ಕಟ್ಟಡ, ಪೀಠೋಪಕರಣ, ಗಣಕ ಯಂತ್ರ ಮುಂತಾದ ಸ್ಥಿರಾಸ್ಥಿ ಹಾಗೂ ಚರಾಸ್ಥಿಗಳ ಸವಕಳಿ ಲೆಕ್ಕಾಚಾರ ಮಾಡಿ ದಾಖಲಿಸಬೇಕು.
5. ಬ್ಯಾಂಕ್ ಖಾತೆಗಳ ಶಿಲ್ಕು ದೃಢೀಕರಣ ಪತ್ರ ಪಡೆದು ಪರಿಶೀಲನೆ ಮಾಡಬೇಕು.
6. ಸಹಕಾರಿಗೆ ಅನ್ವಯಿಸಬಹುದಾದ ಟಿ.ಡಿ.ಎಸ್., ಜಿ.ಎಸ್.ಟಿ., ವೃತ್ತಿ ತೆರಿಗೆ, ಭವಿಷ್ಯ ನಿಧಿ, ಇ.ಎಸ್.ಐ, ಲೆಕ್ಕಪರಿಶೋಧನಾ ಶುಲ್ಕ ಇತ್ಯಾದಿಗಳಿಗೆ ಹಾಗೂ ವರ್ಷಾಂತ್ಯದ ನಂತರ ಪಾವತಿಸಬೇಕಾದ, ಮಾರ್ಚ್ ಮಾಹೆಯ ಅಥವಾ ವರ್ಷಾಂತ್ಯದ ಪೂರ್ವದ ವೆಚ್ಚಗಳಿಗೆ ಅಗತ್ಯ ಪ್ರಾವಧಾನ ಕಲ್ಪಿಸಬೇಕು.

**ಅಗತ್ಯ ಲೆಕ್ಕಪತ್ರಗಳು, ಅನುಸೂಚಿಗಳು, ದಾಖಲಾತಿಗಳ ಸಿದ್ದತೆ :**

ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಸೌಹಾರ್ದ ಸಹಕಾರಿ ಕಾಯ್ದೆ ಕಲಂ.33 ಹಾಗೂ ನಿಯಮ 8 ರಲ್ಲಿ ವಿವರವಾಗಿ ಹೇಳಲಾಗಿದೆ, ಈ ವಿವರಗಳನ್ವಯ ಲೆಕ್ಕಪರಿಶೋಧಕರು

ಪರಿಶೀಲಿಸಬೇಕಾದ ಎಲ್ಲ ಲೆಕ್ಕಪತ್ರಗಳು ಹಾಗೂ ದಾಖಲಾತಿಗಳನ್ನು ಸಹಕಾರಿಯು ಸಿದ್ಧಪಡಿಸಬೇಕಾಗುತ್ತದೆ. ಪ್ರಮುಖವಾಗಿ ನಿಯಮ 8(2) ರಲ್ಲಿ ಹೇಳಲಾದ 26 ಷೆಡ್ಯೂಲ್‌ಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಸಹಕಾರ ಲೆಕ್ಕಪರಿಶೋಧನಾ ಇಲಾಖೆಯು ಸೌಹಾರ್ದ ಸಹಕಾರಿಗಳ ಲೆಕ್ಕಪ-ರಿಶೋಧನಾ ವರದಿ ನಮೂನೆಯನ್ನು ನೀಡಿರುತ್ತದೆ. ಆ ನಮೂನೆಯನ್ವಯ ವರದಿ ಸಿದ್ಧಪಡಿಸಲು ಬೇಕಾದ ಎಲ್ಲ ಲೆಕ್ಕಪತ್ರಗಳನ್ನು, ಅನುಸೂಚಿಗಳನ್ನು ಹಾಗೂ ದಾಖಲಾತಿಗಳನ್ನು ಆರ್ಥಿಕ ವರ್ಷ ಮುಕ್ತಾಯವಾದ 30 ದಿನಗಳೊಳಗಾಗಿ ಸಹಕಾರಿಯು ಸಿದ್ಧಪಡಿಸಬೇಕಾಗುತ್ತದೆ.

**ಲೆಕ್ಕಪರಿಶೋಧಕರಿಗೆ ದಾಖಲೆಗಳ ಸಲ್ಲಿಕೆ ಹಾಗೂ ಮಾಹಿತಿ ಪೂರೈಕೆ:**

ಸೌಹಾರ್ದ ಸಹಕಾರಿ ಕಾಯ್ದೆ ಕಲಂ.33(7) ರನ್ವಯ ಸಹಕಾರ ವರ್ಷ ಮುಕ್ತಾಯವಾದ ಮೂವತ್ತು ದಿನಗಳೊಳಗೆ ಅಂದರೆ ಏಪ್ರಿಲ್ 30 ರೊಳಗೆ, ಸಹಕಾರಿಯ ಆಡಳಿತ ಮಂಡಲಿಯು ಸಹಕಾರ ವರ್ಷದ ಕೊನೆಯಲ್ಲಿದ್ದಂತೆ ಆರ್ಥಿಕ ತಖ್ತೆಗಳನ್ನು, ಆಸ್ತಿ ಹೊಣೆ ಪಟ್ಟಿ (ಅಡಾವೆ ಪತ್ರಿಕೆ)ಯನ್ನು ನಿಯಮಿಸಲಾದ ಅನುಸೂಚಿಗಳು ಮತ್ತು ಇತರೆ ತಖ್ತೆಗಳ ಸಹಿತ ತಯಾರಿಸಿ ಲೆಕ್ಕಪರಿಶೋಧಕನಿಗೆ ಲೆಕ್ಕಪರಿಶೋಧನೆಗಾಗಿ ಒಪ್ಪಿಸುವುದನ್ನು ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ, ಏಪ್ರಿಲ್ ಮಾಹೆಯಲ್ಲಿ ಕಡ್ಡಾಯವಾಗಿ ಒಂದು ಆಡಳಿತ ಮಂಡಳಿ ಸಭೆಯನ್ನು ಸಹಕಾರಿಯು ನಡೆಸಬೇಕಾಗುತ್ತದೆ. ಆ ಸಭೆಯಲ್ಲಿ 'ಲೆಕ್ಕಪತ್ರಗಳು ಹಾಗೂ ಆರ್ಥಿಕ ತಖ್ತೆಗಳನ್ನು ಅಂತಿಮಗೊಳಿಸುವ ಕುರಿತು' ಎನ್ನುವ ವಿಷಯವನ್ನು ಮತ್ತು 'ಲೆಕ್ಕಪರಿಶೋಧನೆಗಾಗಿ ಆರ್ಥಿಕ ತಖ್ತೆಗಳು, ಅನುಸೂಚಿಗಳು ಹಾಗೂ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧಕರಿಗೆ ಸಲ್ಲಿಸುವ ಕುರಿತು' ಎನ್ನುವ ವಿಷಯವನ್ನು ಮಂಡಿಸಿ ನಿರ್ಣಯಿಸಬೇಕು.

ಏಪ್ರಿಲ್ ಮಾಹೆಯ ಆಡಳಿತ ಮಂಡಳಿ ಸಭೆಯ ನಂತರದಲ್ಲಿ, ಆರ್ಥಿಕ ತಖ್ತೆಗಳು, ಅನುಸೂಚಿಗಳು ಹಾಗೂ ಲೆಕ್ಕಪತ್ರಗಳು ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆಗೊಂಡು ಲೆಕ್ಕಪರಿಶೋಧನೆಗೆ ಸಿದ್ಧವಿರುವ ಕು-ರಿತು ಹಾಗೂ ನಿಗದಿತ ಅವಧಿಯಲ್ಲಿ ಲೆಕ್ಕಪರಿಶೋಧನೆ ನಡೆಸಿಕೊಡುವ ಕುರಿತು ಲೆಕ್ಕಪರಿಶೋಧಕರಿಗೆ ಪತ್ರ ಕಳುಹಿಸುವುದು ಸೂಕ್ತ.

ಲೆಕ್ಕಪರಿಶೋಧಕರಿಗೆ ಅಗತ್ಯ ದಾಖಲಾತಿಗಳ ಸಲ್ಲಿಸುವುದರ ಜೊತೆಗೆ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಲೆಕ್ಕಪರಿಶೋಧಕರು ಕೇಳುವ ಮಾಹಿತಿ ಹಾಗೂ ದಾಖಲಾತಿಗಳನ್ನು ಒದಗಿಸಬೇಕಾಗುತ್ತದೆ. ಅವುಗಳಲ್ಲಿ ಪ್ರಮುಖವಾಗಿ ಈ ಕೆಳಕಂಡ ಮಾಹಿತಿ/ದಾಖಲಾತಿಗಳಿರುತ್ತವೆ :

- ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ ಅನುಪಾಲನಾ ವರದಿ.
- ಹಿಂದಿನ ಮೂರು ವರ್ಷಗಳ ಸದಸ್ಯತ್ವ, ಷೇರು ಬಂಡವಾಳದ ವಿವರ
- ವಿವಿಧ ಬ್ಯಾಂಕ್ ಖಾತೆಗಳ ಶಿಲ್ಕು ದೃಢೀಕರಣ ಪತ್ರ, ಹೂಡಿಕೆಗಳ ವಿವರ
- ಅಂಗ ಸಂಸ್ಥೆ, ಪೂರಕ ಸಂಸ್ಥೆಗಳಲ್ಲಿ ಬಂಡವಾಳ ತೊಡಗಿಸಿದ ವಿವರ
- ನಗದು ಪುಸ್ತಕ ಸೇರಿದಂತೆ ವಿವಿಧ ರೆಜಿಸ್ಟರ್‌ಗಳು,
- ನಿಧಿಗಳ ಬಳಕೆ ಹಾಗೂ ವಿನಿಯೋಗ, ಪಡೆದ ಸಾಲ ಹಾಗೂ ಮುಂಗಡಗಳ ವಿವರ,
- ಸಾಲದ ವಿವರ, ಸುಸ್ತಿ ಸಾಲದ ವಿವರ, ವ್ಯಾಜ್ಯ ದಾಖಲಿಸಿದ ಸಾಲದ ವಿವರ
- ನಿರ್ದೇಶಕರ ಕನಿಷ್ಠ ವ್ಯವಹಾರ, ನಿರ್ದೇಶಕರು ಹಾಗೂ ಸಂಬಂಧಿಗಳ ಸಾಲದ ವಿವರ
- ಹಾಜರಾತಿ ಸಹಿತ ಸಾಮಾನ್ಯ ಸಭೆ, ಆಡಳಿತ ಮಂಡಳಿ ಸಭೆ, ಉಪಸಮಿತಿ ಸಭೆಗಳ ವಿವರ
- ವಿವಿಧ ಕಾನೂನು ಪಾಲನೆ, ಸಂಯುಕ್ತ ಸಹಕಾರಿ ಸುತ್ತೋಲೆ ಮತ್ತು ಸೂಚನೆ ಪಾಲನೆಯ ವಿವರಗಳು
- ವಾರ್ಷಿಕ ವಂತಿಗೆ, ಶಿಕ್ಷಣ ನಿಧಿ, ಡಿವಿಡೆಂಡ್ ಪಾವತಿ ವಿವರಗಳು, ಕರಾರು/ಒಪ್ಪಂದಗಳ ವಿವರಗಳು, ಇತ್ಯಾದಿ.

ಲೆಕ್ಕಪರಿಶೋಧನೆ ಎಂದರೇನು, ಲೆಕ್ಕಪರಿಶೋಧನೆ ಏಕೆ ಬೇಕು ಎನ್ನುವುದರ ಜೊತೆಗೆ ಲೆಕ್ಕಪರಿಶೋಧನಾ ಪೂರ್ವ ಸಿದ್ಧತಾ ಕಾರ್ಯಗಳನ್ನು ನಾಲ್ಕು ಹಂತಗಳಲ್ಲಿ ವಿವರವಾಗಿ ನಾವೀಗ ತಿಳಿದುಕೊಂಡಿದ್ದೇವೆ. ಸಮರ್ಪಕ ಪೂರ್ವಸಿದ್ಧತೆಯಿದ್ದಲ್ಲಿ ಸುಗಮವಾಗಿ ಹಾಗೂ ಸುಲಭವಾಗಿ ಯಾವುದೇ ಕಾರ್ಯದೊತ್ತಡವಿಲ್ಲದೆ ಲೆಕ್ಕಪರಿಶೋಧನೆ ನಡೆಯುತ್ತದೆ. ಸಹಕಾರಿಯ ಆರ್ಥಿಕ ಆರೋಗ್ಯವನ್ನು ಪ್ರಚುರಪಡಿಸುವ, ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಲೆಕ್ಕಪರಿಶೋಧನಾ ವರದಿ ಸಿದ್ಧಗೊಳ್ಳುವ ಲೆಕ್ಕಪರಿಶೋಧನಾ ಪ್ರಕ್ರಿಯೆ ನಿಗದಿತ ಅವಧಿಯಲ್ಲಿ ಸಮರ್ಪಕವಾಗಿ, ನಿಯಮಾನುಸಾರ ಎಲ್ಲ ಸಹಕಾರ ಸಂಸ್ಥೆಗಳಲ್ಲಿ ನಡೆಯಲಿ ಎನ್ನುವುದು ಆಶಯ. ಲೆಕ್ಕಪ-ರಿಶೋಧನೆಯ ನಂತರದ ಕಾರ್ಯಗಳೇನು ಎನ್ನುವುದನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

**ಲೆಕ್ಕಪರಿಶೋಧನಾ ಕ್ಯಾಲೆಂಡರ್**

| ಸಂ. | ವಿವರ | ಅವಧಿ |
|---|---|---|
| 1 | ಲೆಕ್ಕಪರಿಶೋಧಕರ ನೇಮಕ | ಸಾಮಾನ್ಯ ಸಭೆ |
| 2 | ನೇಮಕಾತಿ ಪತ್ರ ನೀಡುವುದು | ಸಾಮಾನ್ಯ ಸಭೆ ಮುಗಿದ 7 ದಿನಗಳ ಒಳಗೆ |
| 3 | ಲೆಕ್ಕಪರಿಶೋಧಕನಿಗೆ ದಾಖಲೆ ಒದಗಿಸುವುದು | ಏಪ್ರಿಲ್ 30 ರೊಳಗೆ |
| 4 | ಲೆಕ್ಕಪರಿಶೋಧನಾ ವರದಿ ಸಲ್ಲಿಕೆ | ಸೆಪ್ಟೆಂಬರ್ 01 ರೊಳಗೆ |
| 5 | ಸಾಮಾನ್ಯ ಸಭೆಯಲ್ಲಿ ಮಂಡನೆ | ಸೆಪ್ಟೆಂಬರ್ 25 ರೊಳಗೆ |
| 6 | ಅನುಪಾಲನಾ ವರದಿ ಸಲ್ಲಿಕೆ | ಸಾಮಾನ್ಯ ಸಭೆ ಮುಗಿದ 30 ದಿನಗಳ ಒಳಗೆ |
| 7 | ಲೆಕ್ಕಪರಿಶೋಧಿತ ಆರ್ಥಿಕ ತಖ್ತೆಗಳ ಸಲ್ಲಿಕೆ | ಸೆಪ್ಟೆಂಬರ್ 30 ರೊಳಗೆ |

# ಮುಖ್ಯ ಕಾರ್ಯನಿರ್ವಾಹಕನ ಕರ್ತವ್ಯ ಜವಾಬ್ದಾರಿಗಳು

– ಶ್ರೀ ಜಿ.ಎಸ್. ಸೋಮಯಾಜಿ, ಪ್ರಧಾನ ವ್ಯವಸ್ಥಾಪಕ, ಶ್ರೀ ಗುರುನರಸಿಂಹ ವಿ.ಸೌ.ಸ.ನಿ., ಸಾಲಿಗ್ರಾಮ

**(ಕಲಂ 31 ನಿಯಮ 6 ಎ) :–**

ಸಹಕಾರ ಸಂಘ ಅಂದರೆ ಸದಸ್ಯರ ಒಕ್ಕೂಟ – ಈ ಒಕ್ಕೂಟದ ಆಡಳಿತ ಪ್ರಜಾಪ್ರಭುತ್ವ ತಳಹದಿಯಲ್ಲಿ ನಿರ್ವಹಣೆ – ಅಂದರೆ ಸದಸ್ಯರ ಪ್ರತಿನಿಧಿಗಳಾದ ನಿರ್ದೇಶಕ ಮಂಡಳಿ – ಸಹಕಾರದ ತತ್ವ, ಕಾಯ್ದೆ, ನಿಯಮ, ಉಪವಿಧಿ, ಸರಕಾರ ನಿರ್ದೇಶನಗಳಿಗೊಳಪಟ್ಟು ಪಾರದರ್ಶಕತೆಯ ಆಡಳಿತದಿಂದ ಸದಸ್ಯರಿಗೆ ಕನಿಷ್ಠ ಶುಲ್ಕದಲ್ಲಿ ಗರಿಷ್ಠ ಸೇವೆಯನ್ನು ನೀಡುವುದು. ಆಡಳಿತ ಮಂಡಳಿ ಶಾಸಕಾಂಗವಾಗಿ ಕೈಗೊಳ್ಳುವ ನಿರ್ಣಯ, ನಿರ್ದೇಶನಗಳನ್ನು ಮಂಡಳಿಯಿಂದ ನೇಮಕಗೊಂಡ ಮುಖ್ಯ ಕಾರ್ಯ ನಿರ್ವಾಹಕ ಮತ್ತು ಅಧೀನ ಸಿಬ್ಬಂಧಿಗಳು ಕಾರ್ಯಾಂಗವಾಗಿ ಕಾರ್ಯರೂಪಕ್ಕೆ ತರುವ ಜವಾಬ್ದಾರಿಯನ್ನು ಹೊತ್ತಿದೆ. ವಾರ್ಷಿಕ ಸಾಮಾನ್ಯ ಸಭೆಯಿಂದ ಮಂಜೂರಾದ ವೃಂದ ಬಲ ಮತ್ತು ವೇತನ ಶ್ರೇಣಿಯಲ್ಲಿ ನೇಮಕಗೊಳ್ಳುವ ಮತ್ತು ತೆಗೆದು ಹಾಕಲ್ಪಡುವ ಓರ್ವ ಮುಖ್ಯ ಕಾರ್ಯನಿರ್ವಾಹಕ ಪ್ರತೀ ಸಹಕಾರ ಸಂಘಕ್ಕೆ ಇರಬೇಕಿರುತ್ತದೆ. ಮುಖ್ಯ ಕಾರ್ಯನಿರ್ವಾಹಕನು – ಆಡಳಿತ ಮಂಡಳಿಗೆ – ಸದಸ್ಯರಿಗೆ – ಸಿಬ್ಬಂಧಿಗಳಿಗೆ – ಇಲಾಖೆಗೆ ಮತ್ತು ಸಂಯುಕ್ತ ಸಹಕಾರಿಗೆ ಉತ್ತರಕಾಯತ್ವವನ್ನು ಹೊಂದಿರುತ್ತಾನೆ. ಅಂದರೆ ಬಹಳಷ್ಟು ಜವಾಬ್ದಾರಿಯನ್ನು ಹೊಂದಿದ್ದು ನೈಪುಣ್ಯತೆಯಿಂದ ನಿಭಾಯಿಸಬೇಕಿರುತ್ತದೆ. ಮುಖ್ಯ ಕಾರ್ಯನಿರ್ವಾಹಕನು ಸಂಘದ ಮುಖ್ಯ ಆಡಳಿತಗಾರನಾಗಿದ್ದು ಮಂಡಳಿಯ ಸಾಮಾನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟು ಈ ಕೆಳಗಿನ ಕರ್ತವ್ಯ ಜವಾಬ್ದಾರಿಗಳನ್ನು ನಿರ್ವಹಿಸುವುದು

**ಅಧಿಕಾರಗಳು:–**

1. ಸಂಘದ ಮತ್ತು ಅದರ ಮಂಡಳಿಯ ಪ್ರತಿಯೊಂದು ಸಭೆಗೆ ಹಾಜರಾಗುವುದು ಮತ್ತು ಚರ್ಚೆಯಲ್ಲಿ ಭಾಗವಹಿಸುವುದು ಹಾಗೂ ಯಾವುದೇ ನಿರ್ಣಯವನ್ನು ಮಂಡಿಸುವುದು.
2. ಸಂಘದ ಮಂಡಳಿಯ ಒಬ್ಬ ಸದಸ್ಯನಾಗಿರುತ್ತಾನೆ.
3. ಮಂಡಳಿಯ ಪದಾದಿಕಾರಿಗಳ ಚುನಾವಣೆಯಲ್ಲಿ ಮತ ನೀಡುವ ಹಕ್ಕಿರುವುದಿಲ್ಲ.
4. ಮಂಡಳಿಯ ಅನುಮೋದನೆಯ ಮೇರೆಗೆ ಸಂಘದ ಪರವಾಗಿ ಅಥವಾ ಸಂಘದ ವಿರುದ್ಧವಾಗಿ ಅಥವಾ ಇತರ ಕಾನೂನು ವ್ಯವಹಾರ ವಿವರಣೆಗಳನ್ನು ಹೂಡುವುದು, ಪ್ರತಿಪಾದಿಸುವುದು, ನಡೆಸುವುದು.
5. ಮಂಡಳಿಯ ಅನುಮೋದನೆಯ ಮೇರೆಗೆ ಸಂಘಕ್ಕೆ ಸಾಲ ನೀಡಿದವರು ಮತ್ತು ಸಂಘದೊಂದಿಗೆ ಸಾಲ ಪಡೆದವರೊಂದಿಗೆ ಸಂಧಾನ ನಡೆಸಬಹುದು.
6. ಸಂಘದ ಅಧೀಕೃತ ಮತ್ತು ಸಾಮಾನ್ಯ ವ್ಯವಹಾರ ನಡೆಸುವುದು.
7. ಸಂಘಕ್ಕಾಗಿ ಅಥವಾ ಅದರ ಪರವಾಗಿ ಸಂಘದ ಎಲ್ಲಾ ದಸ್ತಾವೇಜುಗಳಿಗೆ ಸಹಿ ಮಾಡುವುದು ಮತ್ತು ಅವುಗಳನ್ನು ಪ್ರಮಾಣೀಕರಿಸುವುದು.
8. ಸಂಘದ ನೌಕರರ ರಜೆಯನ್ನು ಮಂಜೂರು ಮಾಡುವುದು, ತಪಿತಸ್ಥ ನೌಕರರಿಗೆ ದಂಡನೆ ವಿಧಿಸುವುದು ಅಥವಾ ಅವರನ್ನು ಅಮಾನತಿನಲ್ಲಿಡುವುದು. ವಿಚಾರಣೆಯನ್ನು ಕಾಯ್ದಿರಿಸಿ ನೌಕರನನ್ನು ಅಮಾನತು ಮಾಡುವ ಅಥವಾ ಯಾವುದೇ ಶಿಕ್ಷೆ ನೀಡುವ ಅಧಿಕಾರವು ಸಂಘದ ಉಪವಿಧಿಗಳಲ್ಲಿ ಅಥವಾ ಸೇವಾ ನಿಯಮಗಳಲ್ಲಿ ನೀಡಿಲ್ಲದಿದ್ದರೆ ಮಂಡಳಿಯ ಅನುಮೋದನೆ ಪಡೆದು ಅಮಾನತು ಮಾಡಬಹುದು.
9. ಕಾಯ್ದೆ ನಿಯಮಗಳ ಅಥವಾ ಉಪವಿಧಿಗಳಲ್ಲಿ ಅವನಿಗೆ ವಿಧಿಸಿದ ಅಥವಾ ಪ್ರಧಾನ ಮಾಡಿದಂತಹ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

**ಕರ್ತವ್ಯಗಳು:–**

1. ಎಲ್ಲಾ ನೌಕರರ ಮೇಲಿನ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡುವುದು ಮತ್ತು ದಿನನಿತ್ಯದ ನಿರ್ವಹಣೆ ಮತ್ತು ವ್ಯವಹಾರಗಳಿಗೆ ಹೋಣೆಗಾರನಾಗಿರುವುದು.
2. ಸಂಘದ ಅಧೀಕೃತ ಮತ್ತು ಸಾಮಾನ್ಯ ವ್ಯವಹಾರಗಳನ್ನು ನಡೆಸುವುದು.
3. ರಾಜ್ಯ ಸರ್ಕಾರಕ್ಕೆ ಬಾಕಿ ಇರುವ ಸಾಲಗಳು ಮತ್ತು ಸರಕಾರದ ಭರವಸೆಯ ಮೇಲೆ ಪಡೆದ ಸಾಲಗಳು ಮತ್ತು ಇತರ ಸಾಲಗಳ ಮರುಪಾವತಿಗೆ ಏರ್ಪಾಟು ಮಾಡಬೇಕು ಮತ್ತು ಈ ಸಂಬಂಧ ನಿಬಂಧಕರಿಗೆ ವರದಿ ಕಳುಹಿಸಬೇಕು.
4. ಉಪವಿಧಿಗೆ ಅನುಸಾರ ಬ್ಯಾಂಕ್ ಖಾತೆ ತೆರೆಯುವುದಕ್ಕೆ ಮತ್ತು ನಿರ್ವಹಿಸುವುದಕ್ಕೆ ಜವಾಬ್ದಾರನಾಗಿರುವುದು. ಮತ್ತು ನಗದು ಹಣ ಸುರಕ್ಷಿತ ರಕ್ಷಣೆಗೆ ವ್ಯವಸ್ಥೆಗಳನ್ನು ಮಾಡಬೇಕು.
5. ಎಲ್ಲಾ ದಾಖಲೆಗಳ ಮತ್ತು ದಸ್ತಾವೇಜುಗಳ ಅಭಿರಕ್ಷಕನಾಗಿರುತ್ತಾನೆ ಮತ್ತು ಲೆಕ್ಕ ಪತ್ರಗಳ ಮತ್ತು ವಿವಿಧ ಪುಸ್ತಕಗಳ ಮತ್ತು ದಾಖಲೆಗಳನ್ನು ಸರಿಯಾಗಿ ಮತ್ತು ನಿಖರವಾಗಿ ನಿರ್ವಹಿಸಬೇಕು.
6. ಕಾಯ್ದೆ ನಿಯಮಗಳ ಮತ್ತು ಉಪವಿಧಿಗಳ ಪ್ರಕಾರ ಮತ್ತು ನಿಬಂಧಕರು ಮತ್ತು ಲೆಕ್ಕ ಪರಿಶೋಧನಾ ನಿರ್ದೇಶಕರು ನಿರ್ದೇಶಿಸಿದಂತೆ ನಿಯತಕಾಲಿಕ ತಖ್ತೆಗಳು (Periodical Statements) ಮತ್ತು ವಿದ್ಯುಕ್ತ ವರದಿಗಳನ್ನು (Returns) ಸರಿಯಾಗಿ ತಯಾರಿಸುವುದು ಮತ್ತು ಅವುಗಳನ್ನು ಸಕಾಲದಲ್ಲಿ ಸಲ್ಲಿಸುವುದು.
7. ಅಧ್ಯಕ್ಷ ಅಥವಾ ಸಭಾಪತಿಯೊಂದಿಗೆ ಸಮಾಲೋಚಿಸಿ ಸಾಮಾನ್ಯ

ಸಭೆ, ಮಂಡಳಿಯ ಸಭೆ ಮತ್ತು ಉಪಸಮಿತಿಯ ಸಭೆಯನ್ನು ಕರೆಯುವುದು ಮತ್ತು ಅಂತಹ ಸಭೆಗಳ ನಡವಳಿಗಳನ್ನು ದಾಖಲಿಸುವುದು ಮತ್ತು ನಿರ್ವಹಿಸುವುದು.

8. ಸಂಘದ ಕೆಲಸ ಕಾರ್ಯಗಳು ಮತ್ತು ನಿರ್ವಹಣೆಗಳನ್ನು ತಿಳಿಸಲು ಮಂಡಳಿಗೆ ನಿಯತವಾಗಿ ಅಗತ್ಯ ಮಾಹಿತಿಯನ್ನು ಒದಗಿಸುವುದು.

9. ಪ್ರತಿ ತಿಂಗಳು ಹಣಕಾಸಿನ ಜಮಾಗಳು ಮತ್ತು ಖರ್ಚುಗಳ ಪಟ್ಟಿಯನ್ನು ತಯಾರಿಸಿ ಮಂಡಳಿಯ ಅನುಮೋದನೆಯನ್ನು ಪಡೆಯುವುದು.

10. ಸಹಕಾರ ವರ್ಷ ಮುಗಿದ 30 ದಿವಸಗಳಲ್ಲಿ ಮಂಡಳಿಯ ಅನುಮೋದನೆಗಾಗಿ ವಾರ್ಷಿಕ ವರದಿ ಮತ್ತು ಹಣಕಾಸಿನ ವಿವರಗಳ ತಖ್ತೆಗಳ ಕರಡನ್ನು ತಯಾರಿಸಿ ಮಂಡಿಸುವುದು.

11. ಸಂಘದ ನೀತಿಗಳು ಮತ್ತು ಉದ್ದೇಶಗಳು ಮತ್ತು ಯೋಜನೆಗಳ ತಯಾರಿಕೆಗೆ ನೆರವು ನೀಡುವುದು.

12. ಮಂಡಳಿಗೆ ಅಗತ್ಯವಾದ ಮಾಹಿತಿಯನ್ನು ಒದಗಿಸುವುದು ಮತ್ತು ಸಂಘದ ಕೆಲಸಗಳು ಮತ್ತು ಅವುಗಳ ಆಚರಣೆಯ ಬಗ್ಗೆ ಮೌಲ್ಯೀಕ–ರಿಸುವುದು (ಆಗಬೇಕಾದ ಕೆಲಸ ಮತ್ತು ಆಗಿರುವ ಕೆಲಸಗಳು ಎಷ್ಟಾಗಿದೆ ಎಂಬುವುದರ ಬಗ್ಗೆ ಬೆಲೆ ಕಟ್ಟುವುದು).

13. ಸಂಘದ ಪರವಾಗಿ ದಾಖಲಿಸಿದ ವಿವರಗಳ ಸಂಬಂಧ, ಸಂಘದ ಪರವಾಗಿ ಬಂದ ತೀರ್ಪು/ಆದೇಶ/ಡಿಕ್ರಿಗಳನ್ನು ಸಕಾಲಿಕವಾಗಿ ಜಾ–ರಿಗೆ ಕೊಡುವುದು. ಸಂಘದ ವಿರುದ್ಧ ಬಂದ ತೀರ್ಪು/ಡಿಕ್ರಿ/ ಆದೇಶಗಳ ವಿರುದ್ಧ ಮೇಲ್ಮನವಿಯನ್ನು ಮಂಡಳಿಯ ಅನುಮೋದನೆ ಪಡೆದು ಸಲ್ಲಿಸುವುದು.

14. ನೌಕರರ ಹಾಜರಾತಿ ಪುಸ್ತಕವನ್ನಿಟ್ಟು ನಿರ್ವಹಿಸುವುದು. ಕಛೇರಿಯ ಸಮಯ ಪಾಲನೆ ಮತ್ತು ಶಿಸ್ತು ಪಾಲನೆಯಿಂದ ಕಾರ್ಯ ಸಾಗುವಂತೆ ನೌಕರರ ಮೇಲೆ ನಿಗಾವಹಿಸುವುದು.

15. ನೌಕರರ ಸೇವಾ ಪುಸ್ತಕವನ್ನಿಟ್ಟು ನಿರ್ವಹಿಸುವುದು. ನೌಕರರಲ್ಲಿ ಕೆಲಸದ ವಿಭಜನೆ ಮತ್ತು ಸಮನ್ವಯ ಮತ್ತು ಹೊಂದಾಣಿಕೆ ಬಗ್ಗೆ ಸೂಕ್ತ ಕ್ರಮವಿಡುವುದಲ್ಲದೇ ಅವರಲ್ಲಿ ಧಕ್ಷತೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವುದುಕ್ಕೆ ಮಂಡಳಿಯೊಂದಿಗೆ ಚರ್ಚಿಸಿ ಕ್ರಮವಿಡುವುದು.

16. ಸಂಘದ ನಗದು ಶಿಲ್ಕು, ದಾಸ್ತಾನು ಮತ್ತು ಇತರ ಸ್ವತ್ತುಗಳ ಸೂಕ್ತ ನಿರ್ವಹಣೆಗಾಗಿ ಅಭಿಕ್ಷೆಗಾಗಿ ವ್ಯವಸ್ಥೆ ಮಾಡುವುದು.

17. ಸಂಘದ ನಿಧಿಗಳಿಂದ ಆಡಳಿತಾತ್ಮಕ ವೆಚ್ಚಗಳನ್ನು (Cost of Ma-nagent) ಮತ್ತು ಕಾರ್ಯನಿರ್ವಹಣಾ ವೆಚ್ಚವನ್ನು (Working Expences) ಸಂದಾಯ ಮಾಡಬೇಕು.

18. ಸಾಮಾನ್ಯ ಸಬೆ ಮಂಡಳಿ ಮತ್ತು ಉಪಸಮಿತಿಗಳ ಸಭೆಗಳು ಯಾವುದಾದರೂ ಇದ್ದರೆ, ಆ ಸಭೆಗಳಲ್ಲಿ ಚರ್ಚಿಸತಕ್ಕ ವಿಷಗ್ಯಗಳ ಪಟ್ಟಿ ಮತ್ತು ಚರ್ಚಿಸಲ್ಪಡತಕ್ಕ ವಿಷಯಗಳ ಪಟ್ಟಿಯಲಿರುವ ಪ್ರತಿಯೊಂದು ವಿಷಯಗಳ ಮೇಲೆ ಟಿಪ್ಪಣಿಗಳ ಸಹಿತ ನೋಟೀಸಗಳನ್ನು ನೀಡಬೇಕು.

19. ಸಾಮನ್ಯ, ಮಂಡಳಿ ಸಭೆ ಮತ್ತು ಉಪಸಮಿತಿ ಸಭೆಗಳಲ್ಲಿ ಹಾಜರಿರುವುದು ಮತ್ತು ಅಂತಹ ಸಭೆಗಳಲ್ಲಿ ಅಗತ್ಯವಿರುವ ಎಲ್ಲಾ ಕಾಗದ ಪತ್ರಗಳು ಮತ್ತು ಮಾಹಿತಿಯನ್ನು ನೀಡುವುದು ಹಾಗೂ ಅಂತಹ ಸಭೆಗಳ ನಡಾವಳಿಗೆ ಸಭಾಧ್ಯಕ್ಷ/ ಸಭಾಪತಿಯೊಂದಿಗೆ ಸಹಿ ಮಾಡುವುದು.

20. ಸಹಕಾರ ವರ್ಷ ಮುಕ್ತಾಯವಾದ 30 ದಿನಗಳಲ್ಲಿ ಹಿಂದಿನ ವರ್ಷದ ಕುಳವಾರು ಪಟ್ಟಿಗಳನ್ನು, ಆರ್ಥಿಕ ಪಟ್ಟಿಗಳನ್ನು ಮತ್ತು ಇತರ ವಿವರಣಾ ಪತ್ರಿಕೆಗಳನ್ನು ಮಂಡಳಿಯ ಅನುಮೋದನೆಗಾಗಿ ಮಂಡಿಸುವುದು.

21. ಅನುಪಾಲನಾ ವರದಿ ಸಲ್ಲಿಕೆ:– ಕಲಂ 63ರ ಮೇರೆಗೆ ಲೆಕ್ಕಪ–ರಿಶೋಧನಾ ವರದಿಯನ್ನು ಕಲಂ 64ರ ಮೇರೆಗೆ ವಿಚಾರಣಾ ವರದಿಯನ್ನು ಮತ್ತು ಕಲಂ 65ರ ಮೇರೆಗೆ ಪರಿವೀಕ್ಷಣಾ ವರದಿಯನ್ನು ಮತ್ತು ಈ ವರದಿಗಳಲ್ಲಿ ಗಮನಿಸಿದ ಲೋಪದೋಷಗಳನ್ನು ಸರಿ ಪಡಿಸಲು ಅಥವಾ ಅಕ್ರಮಗಳನ್ನು ಪರಿಹರಿಸಲು ತೆಗೆದುಕೊಳ್ಳಬಹುದಾದ ಕ್ರಮಗಳೊಂದಿಗೆ ಮಂಡಳಿಯ ಮುಂದೆ ಮಂಡಿಸುವುದು.

22. ಸದರಿ ವರದಿಗಳಲ್ಲಿ ತಿಳಿಸಿದ ಶೋಧಗಳನ್ನು ಸರಿಪಡಿಸುವ ಬಗ್ಗೆ ಅಥವಾ ಅಕ್ರಮಗಳನ್ನು ನೇರ್ಪಡಿಸಲು ತೆಗೆದುಕೊಂಡ ಕ್ರಮಗಳಲ್ಲಿರುವ ಅನುಪಾಲನಾ ವರದಿಗಳಿಗೆ ಮಂಡಳಿಯ ಅನುಮೋದನೆ ಪಡೆದು ಅನುಪಾಲನಾ ವರದಿಯನ್ನು ಕಳುಹಿಸಬೇಕು. ಸದರಿ ಲೋಪದೋಷಗಳು ಸರಿಯಾಗುವವರೆಗೆ ಮತ್ತು ಅಕ್ರಮಗಳು ನಿವಾರಣೆಯಾಗುವ ವರೆಗೆ ಅಂತಹ ವರದಿಗಳನ್ನು ನಿಯತಕಾಲಿಕವಾಗಿ ನಿಬಂಧಕರಿಗೆ ಅಥವಾ ಲೆಕ್ಕ ಪರಿಶೋಧನಾ ನಿರ್ದೇಶಕರಿಗೆ ಸಲ್ಲಿಸುತ್ತಿರಬೇಕು.

23. ಸಹಕಾರ ಸಂಘದ ಯಾವನೇ ನಿರ್ದೇಶಕನು ಕಾಯ್ದೆಯ, ನಿಯಮಗಳ ಉಪವಿಧಿಗಳ ಪ್ರಕಾರ ತನ್ನ ಪದದಲ್ಲಿ ಮುಂದುವ–ರಿಯಲು (ಸ್ಥಾನದಲ್ಲಿ) ಅನರ್ಹನಾದರೆ, ಆ ಬಗ್ಗೆ ಅಧಿಕಾರಸ್ಥ ನಿಬಂಧಕರಿಗೆ 30 ದಿನಗಳಲ್ಲಿ ವರದಿ ಮಾದಬೇಕು.

24. ಮುಖ್ಯ ಕಾರ್ಯನಿರ್ವಾಹಕನ ಹುದ್ದೆಯು ಖಾಲಿ ಇರುವಾಗ ಅಥವಾ ಆತನು ರಜೆಯ ಮೇಲೆ ಹಾಜರಿಲ್ಲದಿರುವಾಗ, ಅವನ ಪ್ರಸಕ್ತ ದಿನಚರಿ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಆತನ ನಂತರದ ನಿಕಟ ಅಧೀನ ಅಧಿಕಾರಿಯಿಂದ ನಿರ್ವಹಿಸಲ್ಪಡಬೇಕು.

25. ಜಮಾ ಖರ್ಚಿನ ಪಟ್ಟಿ ಮತ್ತು ಸಭಾ ನಡವಳಿ ಸಲ್ಲಿಕೆ:– ಪ್ರಾಥಮಿಕ ಸಹಕಾರಿ ಸಂಘಗಳ ಸಂಬಂದಿಸಿದಂತೆ, ಅದರ ಮುಖ್ಯ ಕಾರ್ಯ ನಿರ್ವಾಹಕನು ಪ್ರತಿ ತಿಂಗಳು ಅವನಿಂದ ಸೂಕ್ತವಾಗಿ ಪ್ರಮಾಣೀಕೃತವಾಗಿರುವಂತಹ ಜಮಾ ಮತ್ತು ಖರ್ಚಿನ ಲೆಕ್ಕದ ಪ್ರತಿಯನ್ನು ಮುಂಬರುವ ತಿಂಗಳಿನ 15 ದಿನಗಳಲ್ಲಿ ನಿಬಂಧಕರಿಗೆ

ಮತ್ತು ಹಣಕಾಸು ಪೂರೈಕೆ ಬ್ಯಾಂಕಿಗೆ ಅಥವಾ ಕ್ರೆಡಿಟ್ ಏಜೆನ್ಸಿಗೆ ಕಳುಹಿಸಬೇಕು. ಅವನು ಸಾಮಾನ್ಯ ಸಭೆಗಳ ಮತ್ತು ಮಂಡಳಿ ಸಭೆಗಳ ಪ್ರಮಾಣೀಕೃತ ಪ್ರತಿಯನ್ನು ಸಹ ಅಂತಹ ಸಭೆಗಳು ನಡೆದ 15 ದಿನಗಳಲ್ಲಿ ನಿಬಂಧಕರು ಮತ್ತು ಹಣಕಾಸು ಪೂರೈಕೆ ಬ್ಯಾಂಕಿಗೆ ಅಥವಾ ಕ್ರೆಡಿಟ್ ಏಜೆನ್ಸಿಗೆ ಕಳುಹಿಸಬೇಕು.

26. ಮುಖ್ಯ ಕಾರ್ಯ ನಿರ್ವಾಹನು, ಮಂಡಳಿಯು, ಕಾಯಿದೆ, ನಿಯಮಗಳು ಅಥವಾ ಉಪವಿಧಿಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿ (In clear contravention) ಯಾವುದೇ ತೀರ್ಮಾನ ತೆಗೆದುಕೊಂಡಲ್ಲಿ, ಅಂತಹ ತೀರ್ಮಾನಗಳನ್ನು ಜಾರಿಯಲ್ಲಿ ತರಕೂಡದು.
27. ಸಂಘದ ಲೆಕ್ಕ ಪರಿಶೋಧನಾ ವರದಿಗಳನ್ನು ಸಂಘದಲ್ಲಿ ಶಾಶ್ವತ ದಾಖಲೆಯಾಗಿ ಇಡಬೇಕು (Shall maintain audit report as a permanent record).
28. ಕಾಯ್ದೆ, ನಿಯಮಗಳು ಮತ್ತು ಸಂಘದ ಉಪವಿಧಿಗಳ ಪ್ರತಿಯನ್ನು ಸಂಘದ ನೋಂದಾಯಿತ ಕಛೇರಿಯಲ್ಲಿ ಇಡಬೇಕು ಮತ್ತು ಎಲ್ಲಾ ಸೂಕ್ತ ಕಾಲಗಳಲ್ಲಿಯೂ ಯಾವುದೇ ಶುಲ್ಕವಿಲ್ಲದೇ ಅವುಗಳ ಪರಿಶೀಲನೆಗೆ ಸದಸ್ಯರಿಗೆ ಅವಕಾಶ ನೀಡಬೇಕು.

**ಮುಖ್ಯ ಕಾರ್ಯ ನಿರ್ವಾಹಕನ ಪಾತ್ರ:–**

ಕಲಂ 2(ಸಿ) ಮತ್ತು 31 ಮತ್ತು ನಿಯಮ 6(ಎ) ನಲ್ಲಿರುವ ಉಪಬಂಧಗಳಲ್ಲಿ ಮುಖ್ಯ ಕಾರ್ಯನಿರ್ವಾಹನ ಕರ್ತವ್ಯಗಳು, ಅಧಿಕಾರಗಳು ಮತ್ತು ಜವಾಬ್ದಾರಿಗಳ ಬಗ್ಗೆ ತಿಳಿಸಲಾಗಿದೆ. ಈ ಹಿನ್ನಲೆಯಲ್ಲಿ ಮುಖ್ಯ ಕಾರ್ಯನಿರ್ವಾಹಕನು ಸಹಕಾರ ಸಂಘಗಳ ವ್ಯವಹಾರ ನಿರ್ವಹಣೆಯಲ್ಲಿ ವಿವಿಧ ಸಾಮಾರ್ಥ್ಯಗಳಲ್ಲಿ ಕಾರ್ಯನಿರ್ವಹಿಸುವ ವಿಧಾನವನ್ನು ಕೆಳಕಂಡಂತೆ ವರ್ಣಿಸಬಹುದು, ಎಂದರೆ:–

**ಮುಖ್ಯಕಾರ್ಯನಿರ್ವಾಹಕನು ಮೂರು ಸಾಮಾರ್ಥ್ಯಗಳಲ್ಲಿ ಕಾರ್ಯನಿರ್ವಹಿಸುತ್ತಾನೆ:–**

1. ಮಂಡಳಿಯ ಪ್ರತಿನಿಧಿಯಾಗಿ;
2. ಸಂಘದ ರಿಜಿಸ್ಟ್ರಾರನಾಗಿ;
3. ಸಂಘದ ವ್ಯವಹಾರ ಕಾರ್ಯನಿರ್ವಾಹನಾಗಿ;

**ಮಂಡಳಿಯ ಪ್ರತಿನಿಧಿಯಾಗಿ:–**

- ಮಂಡಳಿಯ ನಿರ್ಣಯಗಳನ್ನು/ಆದೇಶಗಳನ್ನು ಜಾರಿಗೊಳಿಸುವುದು;
- ಸಿಬಂದಿಗಳಿಗೆ, ಸಾರ್ವಜನಿಕರಿಗೆ ಮತ್ತು ಷೇರುದಾರರಿಗೆ ಮಂಡಳಿಯನ್ನು ಪ್ರತಿನಿಧಿಸುತ್ತಾನೆ;

**ಸಂಘದ ರಿಜಿಸ್ಟ್ರಾರನಾಗಿ:–**

- ವಿವಿಧ ರಿಟರ್ನ್ಸ್‌ಗಳನ್ನು ತಖ್ತೆಗಳನ್ನು ಸಂಬಂಧಿಸಿದ ಪ್ರಾಧಿಕಾರಗಳಿಗೆ ಸಲ್ಲಿಸುವುದು;
- ಷೇರುಗಳ ವರ್ಗಾವಣೆಗಳನ್ನು ದಾಖಲಿಸುವುದು;

**ಸಂಘದ ವ್ಯವಹಾರ ಕಾರ್ಯನಿರ್ವಾಹನಾಗಿ:–**

- ಸಂಘದ ಸಂಪೂರ್ಣ ಹೊಣೆಗಾರಿಕೆಯನ್ನು ವಹಿಸಿಕೊಳ್ಳುತ್ತಾನೆ;
- ಅಧೀನ ಸಿಬಂದಿ ನಿಯಂತ್ರಣ ಮಾಡುತ್ತಾನೆ;
- ಮಂಡಳಿಯಿಂದ ಹಸ್ತಾಂತರಿಸಿದ ಎಲ್ಲಾ ಕೆಲಸಗಳನ್ನು ನಿರ್ವಹಿಸುತ್ತಾನೆ.

**ಮುಖ್ಯ ಕಾರ್ಯ ನಿರ್ವಾಹಕನ ಕರ್ತವ್ಯಗಳು:–**

- ಶಾಸನ ಬದ್ದ ಕರ್ತವ್ಯಗಳು
- ನಿರ್ದೇಶಕರುಗಳಿಗೆ ಸಂಬಂಧಿಸಿದ ಕರ್ತವ್ಯಗಳು
- ಸದಸ್ಯರುಗಳಿಗೆ ಸಂಬಂಧಿಸಿದ ಕರ್ತವ್ಯಗಳು
- ಸಿಬಂದಿಗಳಿಗೆ ಸಂಬಂಧಿಸಿದ ಕರ್ತವ್ಯಗಳು

**ಶಾಸನ ಬದ್ದ ಕರ್ತವ್ಯಗಳು:–**

1. ಆದಾಯ ತೆರಿಗೆ, ಜಿ.ಎಸ್.ಟಿ ದಾಖಲಿಸುವುದು (Filling of returns documents).
2. ವಾರ್ಷಿಕ ವರದಿಗಳಿಗೆ, ಪ್ರಾಮಾಣೀಕೃತ ಪ್ರತಿಗಳಿಗೆ ಸಹಿ ಹಾಕುವುದು.
3. ಸಭೆಯ ನೋಟೀಸ್ ಕಳುಹಿಸುವುದು.
4. ನಡವಳಿಗಳಿಗೆ ಸಹಿ ಹಾಕುವುದು.
5. ಷೇರು ಪತ್ರಗಳಿಗೆ ಸಹಿ ಹಾಕುವುದು.
6. ವಿವಾದ ಪತ್ರಕ್ಕೆ ಸಹಿ ಹಾಕುವುದು.
7. ವಾರ್ಷಿಕ ತಖ್ತೆಗಳಿಗೆ ಸಹಿ ಹಾಕುವುದು.
8. ಆಡಿಟ್‌ಗೆ ದಾಖಲೆಗಳನ್ನು ಸಲ್ಲಿಸುವುದು.
9. ಅನರ್ಹ ನಿರ್ದೇಶಕರ ಬಗ್ಗೆ ಮಾಹಿತಿ ನೀಡುವುದು.
10. ನಿರ್ದೇಶಕರ/ಪದಾದಿಕಾರಿಗಳ ಸ್ಥಾನಗಳು ಖಾಲಿ ಬಿದ್ದಾಗ ಚುನಾವಣಾ ಪ್ರಾಧಿಕಾರಕ್ಕೆ ಮಾಹಿತಿ ಕೊಡುವುದು. ಇತ್ಯಾದಿ.

**ನಿರ್ದೇಶಕರುಗಳಿಗೆ ಸಂಬಂಧಿಸಿದ ಕರ್ತವ್ಯಗಳು:–**

1. ಮಂಡಳಿಯ ಸಭೆಯನ್ನು ವ್ಯವಸ್ಥೆಗೊಳಿಸುವುದು.
2. ಮಂಡಳಿ ಸಭೆಗಳ ನಡವಳಿಗಳ ಬಗ್ಗೆ ಟಿಪ್ಪಣಿ ತೆಗೆದುಕೊಳ್ಳುವುದು ಮತ್ತು ಬರೆಯುವುದು.
3. ಮಂಡಳಿ ಸಭೆಗಳ ನಡವಳಿಗಳನ್ನು ಅವರಿಗೆ ಕಳುಹಿಸುವುದು.
4. ಮಂಡಳಿಯ ಸೂಚನೆಗಳನ್ನು ಅನುಷ್ಠಾನಕ್ಕೆ ತರುವುದು.

**ಷೇರುದಾರರಿಗೆ ಸಂಬಂಧಿಸಿದ ಕರ್ತವ್ಯಗಳು:–**

1. ಮಂಡಳಿಯ ಅನುಮತಿಯನ್ನು ಪಡೆದು ಷೇರುದಾರರು ಕೋ–ರಿದಬ್ ಮಾಹಿತಿಯನ್ನು ಒದಗಿಸುವುದು.
2. ಷೇರು ಮತ್ತು ಸಾಲ ಮಂಜೂರಾತಿ ಪತ್ರವನ್ನು ಕಳುಹಿಸುವುದು.
3. ಷೇರು ವರ್ಗಾವಣೆಯನ್ನು ದೃಡೀಕರಿಸುವುದು.

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 32
Licensed to post without Prepayment License No. PMG BG/WPP-384/2023-2025.

4. ಡಿವಿಡೆಂಡ್ ಹಂಚುವುದು.

**ಸಿಬ್ಬಂದಿಗೆ ಸಂಬಂಧಿಸಿದ ಕರ್ತವ್ಯಗಳು:–**

1. ಸಂಘದ ವಿವಿಧ ವಿಭಾಗಗಳಲ್ಲಿಯೂ ಸಿಬಂದಿಗಳು ಇರುವಂತೆ ಹಾಗೂ ಅವರ ಮಧ್ಯೆ ಹೊಂದಾಣಿಕೆ ಇರುವಂತೆ ನೋಡಿಕೊಳ್ಳುವುದು.
2. ಮಂಡಳಿಯು ರೂಪಿಸಿದ ಪಾಲಿಸಿಗಳ ಅನುಷ್ಠಾನದಲ್ಲಿ ಸಿಬಂಧಿಗೆ ಮಾರ್ಗದರ್ಶನ ಮಾಡುವುದು.
3. ಸಿಬ್ಬಂದಿಯ ಹಿತಾಸಕ್ತಿಯನ್ನು ಸಂರಕ್ಷಿಸುವುದು.

**ಮುಖ್ಯ ಕಾರ್ಯ ನಿರ್ವಾಹಕನ ಜವಾಬ್ದಾರಿಗಳು:–**

1. ಸಭೆಯನ್ನು ಕರೆಯುವುದಕ್ಕೆ ತಪ್ಪುವುದು.
2. ರಿಟರ್ನ್ಸ್‌ಗಳನ್ನು ದಾಖಲಿಸುವುದಕ್ಕೆ ತಪ್ಪುವುದು.
3. ಆದೇಶಗಳನ್ನು ಪಾಲಿಸುವುದಕ್ಕೆ ತಪ್ಪುವುದು.
4. ಸರಿಯಾದ ಮಾಹಿತಿಯನ್ನು ಕೊಡಲು ತಪ್ಪುವುದು.
5. ಸದಸ್ಯರಿಗೆ ಮಾಹಿತಿಯನ್ನು ತಲುಪಿಸಲು ತಪ್ಪುವುದು.
6. ಸಭೆ ನಡವಳಿಗಳನ್ನು ದಾಖಲಿಸಲು ತಪ್ಪುವುದು.
7. ಸಭೆಯ ನಡವಳಿಗಳ ಪರಿಶೀಲನೆಗೆ ಅವಕಾಶ ಮಾಡಿಕೊಡಲು ನಿರಾಕರಿಸುವುದು ಅಥವಾ ಯಾವುದೇ ಸದಸ್ಯನಿಂದ ಕೋರಿಕೆ ಬಂದಾಗ ಅಂಥ ನಡವಳಿಗಳ ಪ್ರತಿಗಳನ್ನು ಕೊಡಲು ತಪ್ಪುವುದು.
8. ಸೂಕ್ತ ನೋಟೀಸ್ ಕೊಡಲು ತಪ್ಪುವುದು.
9. ಶಾಸನ ಬದ್ಧ ಪುಸ್ತಕಗಳನ್ನು, ರಿಜಿಸ್ಟರ್‌ಗಳನ್ನು ನಿರ್ವಹಿಸಲು ತಪ್ಪುವುದು.

**ಸೇವಾ ಒಪ್ಪಂದದಿಂದ ಬರುವ ಜವಾಬ್ದಾರಿಗಳು:–**

(Contractual liabilities arise out of contract of service).

ಮುಖ್ಯ ಕಾರ್ಯನಿರ್ವಾಹಕನು ಸಂಘದಲ್ಲಿ ಧರ್ಮದರ್ಶಿಯ ಸ್ಥಾನದಲ್ಲಿರುತ್ತಾನೆ. (position of trustee).

1. ಸಂಘದ ಹಿತಾಸಕ್ತಿಗೆ ದಕ್ಕೆಯಾಗುವಂತಹ ತನ್ನ ಸ್ವಂತ ಹಿತಾಸಕ್ತಿಗೆ ಅವಕಾಶ ಕೊಡಕೂಡದು.
2. ಹುದ್ದೆಯ ಬಲದಿಂದ ರಹಸ್ಯ ಲಾಭಕ್ಕೆ ಅವಕಾಶ ಮಾಡಿಕೊಡಕೂಡದು.
3. ತನ್ನ ಕರ್ತವ್ಯಗಳನ್ನು ಪಾಲಿಸುವಾಗ ಮನಃಪೂರ್ವಕವಾಗಿ ದುರ್ನಡತೆಯಿಂದ ಮತ್ತು ನಿರ್ಲಕ್ಷತೆಯಿಂದ ಸಂಘಕ್ಕೆ ಆಗುವ ಡಾಮೇಜ್‌ಗೆ ಹೊಣೆಗಾರ,
4. ಅಧಿಕಾರ ವ್ಯಾಪ್ತಿಯನ್ನು ಮೀರಿ ವರ್ತಿಸಿದ ಪರಿಣಾಮವಾಗಿ ಮೂರನೆ ವ್ಯಕ್ತಿಗೆ ಆಗುವ ನಷ್ಟಗಳಿಗೆ ಹೊಣೆಗಾರ,
5. ಮಂಡಳಿಯ ಅಧಿಕಾರ ಪಡೆಯದಿರುವ ವಿಷಯದಲ್ಲಿ ಸಂಘಕ್ಕೆ ಸಂಬಂಧಿಸಿದ ಇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಕೂಡದು.
6. ಉದ್ಯೋಗ ಅವಧಿಯಲ್ಲಿ ಅವನಿಗೆ ತಿಳಿದಿರುವ ವ್ಯಾಪಾರ ರಹಸ್ಯವನ್ನು ಬಹಿರಂಗ ಪಡಿಸಬಾರದು

**ಸೇವಾ ಒಪ್ಪಂದದಿಂದ ಬರುವ ಹಕ್ಕುಗಳು:–**

**ಸೇವಾ ಒಪ್ಪಂದದ ಫಲವಾಗಿ ಕೆಲವು ಹಕ್ಕುಗಳು ಬರುತ್ತವೆ.**

1. ಸಂಘದ ವಿವಿಧ ಇಲಾಖೆಗಳನ್ನು ನಿಯಂತ್ರಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು.
2. ಸಂಘದ ಪ್ರಧಾನ ಅಧಿಕಾರಿಯಾಗಿ ದಾಖಲೆಗಳಿಗೆ ಅಥವಾ ನಡವಳಿಗಳಿಗೆ ಅಥವಾ ಪ್ರಾಮಾಣೀಕೃತ ಪ್ರತಿಗಳಿಗೆ ಸಹಿ ಮಾಡುವುದು.
3. ವೇತನವನ್ನು ಸ್ವೀಕರಿಸುವುದು.
4. ಸಂಘದಲ್ಲಿ ಕಾರ್ಯನಿರ್ವಹಿಸುವಾಗ ಅವನು ಅನುಭವಿಸಬಹುದಾದ ಯಾವುದೇ ತೊಂದರೆಗಳಿಂದ ಉಂಟಾಗುವ ಯಾವುದೇ ರೀತಿಯ ನಷ್ಟಗಳಿಗೆ ಸಂಘದಿಂದ ಪರಿಹಾರ ರೂಪದಲ್ಲಿ ಪಡೆಯುವುದು.

**ಸೇವಾ ಒಪ್ಪಂದದಿಂದ ಬರುವ ಕರ್ತವ್ಯಗಳು:–**

ಕಲಂ 29ಜಿ ಮತ್ತು ನಿಯಮ 14ಎಎಂ ನಲ್ಲಿ ತಿಳಿಸಿರುವ ಕರ್ತವ್ಯಗಳನ್ನಲದೇ ಸಂಘದ ಉಪವಿಧಿಗಳಲ್ಲಿ ತಿಳಿಸಲಾದ ಹಾಗೂ ಮಂಡಳಿಯು ವಿಧಿಸಬಹುದಾದ ಇತರ ಕರ್ತವ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003